
ಮಂಗಳವಾರ, ಏಪ್ರಿಲ್ 13, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಾಗಾ ಸಾಧು

ಕುಂಭಮೇಳದ ಅಂಗವಾಗಿ ಹರಿದ್ವಾರದ ಗಂಗಾನದಿ ದಡದಲ್ಲಿ ಸೋಮವಾರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಾಗಾ ಸಾಧುವೊಬ್ಬರು ಶಂಖ ಊದಿದರು



ಅತ್ತಿಬೆಲೆ ಚೆಕ್ ಪೋಸ್ಟ್‌ನಲ್ಲಿ ಹೊರ ರಾಜ್ಯಗಳ ವಾಹನಗಳ ತಪಾಸಣೆ: ಜಿಲ್ಲಾಧಿಕಾರಿ

‘ನಗರ ಪ್ರವೇಶಕ್ಕೆ ನೆಗೆಟಿವ್ ವರದಿ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪ್ರಕರಣಗಳನ್ನು ನಿಯಂತ್ರಿಸಲು ಬೆಂಗಳೂರಿನ ಗಡಿಭಾಗ ಅತ್ತಿಬೆಲೆ ಚೆಕ್ ಪೋಸ್ಟ್‌ನಿಂದ ಬರುವ ಹೊರ ರಾಜ್ಯಗಳ ವಾಹನಗಳ ತಪಾಸಣೆ ನಡೆಯುತ್ತಿದ್ದು, ನಗರ ಪ್ರವೇಶಕ್ಕೆ ಕೋವಿಡ್ ನೆಗೆಟಿವ್ ವರದಿ ಕಡ್ಡಾಯ’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದರು.

ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಚೆಕ್ ಪೋಸ್ಟ್ ಹಾಗೂ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸೋಮವಾರ ಭೇಟಿ ನೀಡಿದ ಅವರು, ಕೋವಿಡ್ ಲಸಿಕೆ ಸಂಗ್ರಹಣೆ ವಿಧಾನ ಹಾಗೂ ಲಸಿಕೆ ನೀಡುತ್ತಿರುವ ಕುರಿತು ಪರಿಶೀಲನೆ ನಡೆಸಿದರು.

‘ಈವರೆಗೆ ಕೇರಳ ರಾಜ್ಯದ 1,326 ವಾಹನಗಳನ್ನು ತಪಾಸಣೆ ಮಾಡಿ, ನೆಗೆಟಿವ್ ವರದಿ ಇಲ್ಲದಂತಹ 59 ವಾಹನಗಳು, ಮಹಾರಾಷ್ಟ್ರದಿಂದ ಬಂದ 277 ವಾಹನಗಳ ಪೈಕಿ 25 ವಾಹನಗಳನ್ನು ವಾಪಸ್ ಕಳುಹಿಸಲಾಗಿದೆ. ಇದಕ್ಕಾಗಿ ಚೆಕ್ ಪೋಸ್ಟ್‌ಗಳಲ್ಲಿ ಮೂರು ಪಾಳಿಯಲ್ಲಿ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಚೆಕ್‌ಪೋಸ್ಟ್ ಬದಲು ಪರ್ಯಾಯ ಮಾರ್ಗಗಳ ಬಳಕೆ ತಡೆಗೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗುವುದು’ ಎಂದರು.

ಇದಾದ ಬಳಿಕ ನಾರಾಯಣ ಹೃದಯಾಲಯಕ್ಕೆ ಅವರು ಭೇಟಿ ನೀಡಿದರು. ಸಂಸ್ಥೆಯ ಮುಖ್ಯಸ್ಥ ಡಾ.ದೇವಿ ಶೆಟ್ಟಿ ಅವರನ್ನು ಭೇಟಿಯಾಗಿ, ಕೋವಿಡ್ ರೋಗಿಗಳು ಹಾಗೂ ಅವರಿಗೆ ಮೀಸಲಿಟ್ಟಿರುವ ಬೆಡ್‌ಗಳ ಮಾಹಿತಿ ಪಡೆದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಬಯೋಕಾನ್ ಸಂಸ್ಥೆಗೆ ಭೇಟಿ ನೀಡಿ, ಕೋವಿಡ್ ಲಸಿಕೆ ವಿತರಣೆ ಕಾರ್ಯಕ್ಕೆ ಚಾಲನೆ ನೀಡಿದರು. ಬಯೋಕಾನ್ ಬಯೋಲಾಜಿಕ್ಸ್ ಇಂಡಿಯಾ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅರುಣ್ ಚಂದಾವರ್ಕರ್ ಲಸಿಕೆ ಪಡೆದರು. ಬಯೋಕಾನ್ ಸಂಸ್ಥೆಯ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ ಅವರೊಂದಿಗೆ ಚರ್ಚಿಸಿದರು. ‘ಬಹುತೇಕ ಸಿಬ್ಬಂದಿ ಮನೆಯಿಂದಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಮನೆ ಸಮೀಪ ಇರುವ ಆರೋಗ್ಯ ಕೇಂದ್ರದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಸಿಬ್ಬಂದಿಗೆ ಸೂಚಿಸಲಾಗಿದೆ. ಇಲ್ಲದಿದ್ದರೆ, ಸಂಸ್ಥೆಗೆ ಬಂದು ಲಸಿಕೆ ತೆಗೆದುಕೊಳ್ಳಲು ತಿಳಿಸಲಾಗಿದೆ’ ಎಂದು ಕಿರಣ್ ಮಜುಂದಾರ್ ಶಾ ಹೇಳಿದರು.



ಜಿಲ್ಲಾಧಿಕಾರಿ ಜೆ.ಮಂಜುನಾಥ್ ಹಾಗೂ ಬಯೋಕಾನ್ ಸಂಸ್ಥೆಯ ಕಿರಣ್ ಮಜುಂದಾರ್ ಶಾ ಚರ್ಚಿಸಿದರು. ಅಧಿಕಾರಿಗಳು ಇದ್ದರು

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,88,369 ಒಟ್ಟು ಸೋಂಕಿತರು

4,26,968 ಗುಣಮುಖರಾದವರು

56,545 ಸಕ್ರಿಯ ಪ್ರಕರಣ

4,855 ಸಾವು

ಸೋಮವಾರದ ಏರಿಕೆ

6,387 ದೃಢಪಟ್ಟ ಪ್ರಕರಣ

1,038 ಗುಣಮುಖ

40 ಸಾವು

ಆಸ್ಪತ್ರೆಗಳ ಶೇ 50ರಷ್ಟು ಹಾಸಿಗೆ ಕೋವಿಡ್ ಚಿಕಿತ್ಸೆಗೆ

ಬೆಂಗಳೂರು: ‘ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಆಯಾ ವಲಯ ಮಟ್ಟದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಕೋವಿಡ್ ಆರೈಕೆ ಕೇಂದ್ರಗಳನ್ನು ತೆಗೆಯಲು ಅಗತ್ಯ ಕ್ರಮವಹಿಸಲಾಗಿದೆ. ಎಲ್ಲ ಆಸ್ಪತ್ರೆಗಳಲ್ಲಿ ಶೇ 50 ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆ ಸಲುವಾಗಿ ಕಡ್ಡಾಯವಾಗಿ ಕಾಯ್ದಿರಿಸುವಂತೆ ಸೂಚನೆ ನೀಡಲಾಗಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣ ಸಲುವಾಗಿ ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಲು ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅಧ್ಯಕ್ಷತೆಯಲ್ಲಿ ವರ್ಚುವಲ್ ರೂಪದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

‘ಕೋವಿಡ್ ಪರೀಕ್ಷೆಯ ಪ್ರಮಾಣ ಹೆಚ್ಚಳ ಮಾಡಲು, ಲಸಿಕೆ ನೀಡುವ ಸಂಖ್ಯೆಯನ್ನು ಜಾಸ್ತಿಗೊಳಿಸಲು ಹಾಗೂ ಕೋವಿಡ್ ಚಿಕಿತ್ಸೆಗೆ ಹಾಸಿಗೆ ಲಭ್ಯತೆ ತ್ವರಿತವಾಗಿ ಸಿಗುವಂತೆ ನೋಡಿಕೊಳ್ಳಲು ಸೂಚಿಸಲಾಗಿದೆ. ಕೋವಿಡ್ ಸೋಂಕಿತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಒಂದೇ ಸಹಾಯವಾಣಿ ಸಂಖ್ಯೆ(1912)ಯನ್ನು ಬಳಸಲು ಕ್ರಮವಹಿಸಲಾಗುತ್ತಿದ್ದು, ಆ ಬಗ್ಗೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ’ ಎಂದು ಮಾಹಿತಿ ನೀಡಿದರು.

‘ಪಾಲಿಕೆಗೆ ಅಗತ್ಯ ಲಸಿಕೆ ಪೂರೈಸಲು ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದ್ದು, ಅವಶ್ಯಕ ಲಸಿಕೆ ಅನ್ನು ರಾಜ್ಯ ಸರ್ಕಾರ ನೀಡಲಿದೆ. ಪಾಲಿಕೆ ವ್ಯಾಪ್ತಿಯಲ್ಲಿ ಲಸಿಕೆ ನೀಡುವ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು. ಲಸಿಕೆಯ ಮಹತ್ವದ ಬಗ್ಗೆ ನಾಗರಿಕರಲ್ಲಿ ಅರಿವು ಮೂಡಿಸಲು ಕರಪತ್ರ ಸಿದ್ಧಪಡಿಸಬೇಕು. ಅಲ್ಲದೆ ಆಟೋಗಳ ಮೂಲಕ ಧ್ವನಿವರ್ಧಕಗಳಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು’ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ಮುಖ್ಯ ಆಯುಕ್ತರು ನಿರ್ದೇಶನ ನೀಡಿದರು.



ಖಾಸಗಿ ಆಸ್ಪತ್ರೆಗಳ ಜತೆಗೆ ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಕೋವಿಡ್ ಪ್ರಕರಣಗಳು ಏರುಗತಿ ಪಡೆದಿರುವ ಬೆನ್ನಲ್ಲೇ, ಕೋವಿಡ್ ಚಿಕಿತ್ಸೆಗೆ ಖಾಸಗಿ ಆಸ್ಪತ್ರೆಗಳನ್ನು ಸಜ್ಜುಗೊಳಿಸಲು ಸರ್ಕಾರ ಮುಂದಾಗಿದೆ.

ಕೋವಿಡ್ ಪೀಡಿತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ವ್ಯವಸ್ಥೆ ಕಲ್ಪಿಸುವ ಕುರಿತು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಜತೆಗೆ ಸೋಮವಾರ ಸಭೆ ನಡೆಸಿದರು.

ಸದ್ಯ ಮೀಸಲಿಟ್ಟಿರುವ ಹಾಸಿಗೆಗಳ ವಿವರ ಪಡೆದರು.

ಇದೇ ವೇಳೆ ಆಸ್ಪತ್ರೆಗಳ ಮುಖ್ಯಸ್ಥರು ‘ರೆಮ್‌ಡಿಸಿವಿರ್’ ಇಂಜೆಕ್ಷನ್ ಪೂರೈಕೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ರೆಮ್‌ಡಿಸಿವಿರ್ ಪೂರೈಕೆ: ‘ಕಳೆದ ವರ್ಷಾಂತ್ಯದಲ್ಲಿ ಕೋವಿಡ್ ಇಳಿಕೆ ಕಂಡ ಕಾರಣ ‘ರೆಮ್‌ಡಿಸಿವಿರ್’ ಔಷಧ ತಯಾರಿಕೆ ಮತ್ತು ಪೂರೈಕೆಯನ್ನು ಕಂಪನಿಗಳು ಸ್ಥಗಿತಗೊಳಿಸಿವೆ. ಆದರೆ, ಈಗ ಅದಕ್ಕೆ ಮತ್ತೆ ಬೇಡಿಕೆ ಹೆಚ್ಚಿದೆ. ಕೆಲ ಖಾಸಗಿ ಆಸ್ಪತ್ರೆಗಳು ಈ ಔಷಧ ಲಭ್ಯವಾಗುತ್ತಿಲ್ಲ ಎಂದು ದೂರಿದ್ದಾರೆ. ಡ್ರಗ್ ಕಂಟ್ರೋಲರ್ ಜೊತೆಗೆ ಈ ಬಗ್ಗೆ ಚರ್ಚಿಸಿ, ಅಗತ್ಯವಿರುವ ಔಷಧದ ಪ್ರಮಾಣವನ್ನು ಗುರುತು ಮಾಡಲಾಗುತ್ತದೆ. ಬಳಿಕ ಸರ್ಕಾರದಿಂದಲೇ ನಿರ್ದಿಷ್ಟ ದರದಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸಚಿವರು ಹೇಳಿದರು.



ಈ ಬಾರಿ ಯುಗಾದಿಗೆ ಕೋವಿಡ್ ಲಸಿಕೆ ಬೆಲ್ಲವಾದರೆ, ಕೊರೊನಾ ಸೋಂಕು ಬೇವು. ಎಲ್ಲರೂ ಬೆಲ್ಲದಂತಿರುವ ಲಸಿಕೆಯನ್ನು ಪಡೆದು, ಕೋವಿಡ್ ನಿಯಂತ್ರಣಕ್ಕೆ ಕೈಜೋಡಿಸಬೇಕು

ಡಾ.ಕೆ. ಸುಧಾಕರ್, ಆರೋಗ್ಯ ಸಚಿವ

‘ಏಕಾಏಕಿ ರೋಗಿಗಳ ಬಿಡುಗಡೆ ಅಸಾಧ್ಯ’

‘ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿರುವ ಕೋವಿಡೇತರ ರೋಗಿಗಳು ದಾಖಲಾಗಿ, ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರನ್ನು ಏಕಾಏಕಿ ಆಸ್ಪತ್ರೆಯಿಂದ ಮನೆಗೆ ಕಳುಹಿಸಲು ಸಾಧ್ಯವಿಲ್ಲ. ಹಾಗಾಗಿ, ಒಂದು ವಾರದ ಗಡುವು ಕೋರಿದ್ದು, ಸದ್ಯ ಖಾಸಗಿ ಆಸ್ಪತ್ರೆಗಳಲ್ಲಿ ಲಭ್ಯವಿರುವ 850 ಹಾಸಿಗೆಗಳ ಮಾಹಿತಿ ನೀಡಿದ್ದೇವೆ. ಸರ್ಕಾರವು ಪ್ರತಿ ಖಾಸಗಿ ಆಸ್ಪತ್ರೆಗಳಿಗೆ ಆಪ್ತ ಮಿತ್ರ ಸಿಬ್ಬಂದಿಯನ್ನು ನೇಮಿಸಿ, ಅವರ ಮೂಲಕ ಹಾಸಿಗೆಗಳ ಮಾಹಿತಿ ಪಡೆದುಕೊಳ್ಳಬೇಕು. ‘ರೆಮ್‌ಡಿಸಿವಿರ್’ ಔಷಧ ಪೂರೈಸುವಂತೆ ಮನವಿ ಮಾಡಿಕೊಂಡಿದ್ದೇವೆ’ ಎಂದು ಫಾನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.

ಖಾಸಗಿ ಆರೋಗ್ಯ ಕೇಂದ್ರಗಳಲ್ಲಿ ಹಾಸಿಗೆ ವಿವರ (ಏ.12)

09 ಕೋವಿಡ್ ಚಿಕಿತ್ಸೆ ಒದಗಿಸುತ್ತಿರುವ ಖಾಸಗಿ ವೈದ್ಯಕೀಯ ಕಾಲೇಜುಗಳು

17 ಕೋವಿಡ್ ಚಿಕಿತ್ಸೆ ಒದಗಿಸುತ್ತಿರುವ ಖಾಸಗಿ ಆಸ್ಪತ್ರೆಗಳು

1,192 ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ಮೀಸಲಿಟ್ಟ ಹಾಸಿಗೆಗಳು

705 ಖಾಸಗಿ ಆಸ್ಪತ್ರೆಗಳಲ್ಲಿ ಮೀಸಲಿರುವ ಹಾಸಿಗೆಗಳು

350 ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಹಾಸಿಗೆ

300 ಖಾಸಗಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹಾಸಿಗೆಗಳು

ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಹಾಸಿಗೆ ವಿವರ (ಏ.12)

2 ಕೋವಿಡ್ ಚಿಕಿತ್ಸೆ ಒದಗಿಸುತ್ತಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳು

14 ಕೋವಿಡ್ ಚಿಕಿತ್ಸೆ ಒದಗಿಸುತ್ತಿರುವ ಸರ್ಕಾರಿ ಆಸ್ಪತ್ರೆಗಳು

380 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಗುರುತಿಸಲಾದ ಹಾಸಿಗೆಗಳು

872 ಸರ್ಕಾರಿ ಆಸ್ಪತ್ರೆಗಳಲ್ಲಿ ಮೀಸಲಿರುವ ಹಾಸಿಗೆಗಳು

02 ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ಹಾಸಿಗೆಗಳು

83 ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹಾಸಿಗೆಗಳು

ವೈದ್ಯರಿಗೆ ಗ್ರಾಮೀಣ ಸೇವೆ ಕಡ್ಡಾಯ: ನೋಟಿಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಗ್ರಾಮೀಣ ಸೇವೆ ಕಡ್ಡಾಯ ಕುರಿತು ಎಂಬಿಬಿಎಸ್ ಪದವೀಧರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯಕ್ಕೆ (ಆರ್‌ಜಿಯುಎಚ್‌ಎಸ್) ನೋಟಿಸ್ ನೀಡಲು ಹೈಕೋರ್ಟ್ ಆದೇಶಿಸಿದೆ.

ಗ್ರಾಮೀಣ ಸೇವೆ ಪೂರೈಸುವವರೆಗೂ ಪ್ರಮಾಣ ಪತ್ರಗಳನ್ನು ವಿತರಿಸದಂತೆ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ 2021ರ ಫೆ.21ರಂದು ಹೊರಡಿಸಿರುವ ಸುತ್ತೋಲೆ ಪ್ರಶ್ನಿಸಿ ಡಾ. ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳಾದ ಡಾ. ಶರಣ್ಯ ಮೋಹನ್ ಮತ್ತು ಇತರ 43 ಮಂದಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

‘2015ರಲ್ಲಿ ವೈದ್ಯಕೀಯ ಕೋರ್ಸ್‌ಗೆ ಪ್ರವೇಶ ಪಡೆಯಲಾಗಿದ್ದು, ಹೈಕೋರ್ಟ್ ವಿಭಾಗೀಯ ಪೀಠದ ಇತ್ತೀಚಿನ ಆದೇಶ ಪ್ರಕಾರ ಕಡ್ಡಾಯ ಗ್ರಾಮೀಣ ಸೇವೆಯ ನಿಯಮ ನಮಗೆ ಅನ್ವಯ ಆಗುವುದಿಲ್ಲ’ ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

‘ಕಡ್ಡಾಯ ಗ್ರಾಮೀಣ ಸೇವೆ ಕಾಯ್ದೆ 2012ರಲ್ಲಿ ರೂಪುಗೊಂಡರೂ, ನಿಯಮಾವಳಿಗಳು ಸಿದ್ಧಗೊಂಡು 2015ರ ಜುಲೈ 24ರಿಂದ ಜಾರಿಗೆ ಬಂದಿದೆ. ನಿಯಮಾವಳಿ ಜಾರಿಗೆ ಬಂದ ನಂತರದ ವಿದ್ಯಾರ್ಥಿಗಳಿಗೆ ಮಾತ್ರ ಈ ಕಾಯ್ದೆ ಅನ್ವಯಾಗುತ್ತದೆ ಎಂಬುದನ್ನು ವಿಭಾಗೀಯ ಪೀಠ ಹೇಳಿದೆ. ಅಲ್ಲದೇ, 2019ರಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ(ಎನ್‌ಎಂಸಿ) ಹಲವು ಬದಲಾವಣೆಗಳೊಂದಿಗೆ ಕಾಯ್ದೆಯೊಂದನ್ನು ಜಾರಿಗೆ ಬಂದಿದೆ. ಅದರ ಪ್ರಕಾರ, ವೈದ್ಯಕೀಯ ಶಿಕ್ಷಣದ ಪ್ರವೇಶ ನಿಯಂತ್ರಿಸಲು ರಾಜ್ಯಗಳಿಗೆ ಯಾವುದೇ ಅಧಿಕಾರ ಇಲ್ಲ’ ಎಂದು ಅರ್ಜಿದಾರರು ವಿವರಿಸಿದ್ದಾರೆ.

‘ಅನೇಕ ರಾಜ್ಯಗಳಲ್ಲಿ ಗ್ರಾಮೀಣ ಸೇವೆ ಕಡ್ಡಾಯ ಇಲ್ಲ. ಹೀಗಾಗಿ, ಈ ಕಾಯ್ದೆ ಹೇರುವುದು ಸಮಾನತೆಗೆ ವಿರುದ್ಧವಾದ ಕೆಲಸ ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆ’ ಎಂದು ಹೇಳಿದ್ದಾರೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ಪೀಠ, ವಿಚಾರಣೆಯನ್ನು ಏ.21ಕ್ಕೆ ಮುಂದೂಡಿತು.

ನಗರದಲ್ಲಿ ನಾಳೆ (ಬುಧವಾರದ ಕಾರ್ಯಕ್ರಮಗಳು)

ಡಾ.ಬಿ.ಆರ್. ಅಂಬೇಡ್ಕರ್ ಅವರ 130ನೇ ಜಯಂತ್ಯುತ್ಸವ: ಉದ್ಘಾಟನೆ: ಸಚಿವ ಬಿ. ಶ್ರೀರಾಮುಲು, ಅಧ್ಯಕ್ಷತೆ: ಡಾ.ಎಂ. ವೆಂಕಟಸ್ವಾಮಿ, ಮುಖ್ಯ ಅತಿಥಿಗಳು: ಡಾ.ಪಿ. ದಯಾನಂದ ಪೈ, ಡಾ. ಭಾಸ್ಕರ್ ರಾವ್, ಪಿ.ಆರ್. ಶಿವಪ್ರಸಾದ್, ಮುಖ್ಯ ಭಾಷಣ: ಡಾ.ಎಂ. ನಾರಾಯಣಸ್ವಾಮಿ, ಪ್ರೊ. ಭೀಮ್‌ಶಾ ಆರ್ಯ, ವಿಶೇಷ ಆಹ್ವಾನಿತರು: ಎಸ್. ಆರ್. ಕೃಷ್ಣಪ್ಪ, ಪಿ.ಎಂ. ಪರಶಿವಮೂರ್ತಿ, ಗಂಗಾಧರಯ್ಯ, ಎಸ್. ವಿಜಯಕುಮಾರ್, ಡಾ.ಎಚ್.ಆರ್. ಸುರೇಂದ್ರ, ಪಿಳ್ಳರಾಜು ಬೋಸಪ್ಪ, ಎಂ.ಲಗುಮಯ್ಯ, ಸಾಯಿ ಪ್ರಕಾಶ್, ಆಯೋಜನೆ: ಸಮತಾ ಸೈನಿಕ ದಳ, ನಾಗಸೇನಾ ವಿದ್ಯಾಲಯ, ಸ್ಥಳ ನಾಗಸೇನಾ ವಿದ್ಯಾಲಯ, ಸದಾಶಿವನಗರ, ಮಧ್ಯಾಹ್ನ 12.30



‘ಅಲ್ಲೈದೇವ್ರು’ ನಾಟಕದ ದೃಶ್ಯ

ನಾಟಕ ಪ್ರದರ್ಶನ: ‘ಅಲ್ಲೈದೇವ್ರು’, ನಿರ್ದೇಶನ: ಸಿದ್ದರಾಮ ಕೊಪ್ಪರ, ರಚನೆ: ಹನುಮಂತ ಹಾಲಿಗೇರಿ, ತಂಡ: ಜನರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಮಂಗಳವಾರ, ಏಪ್ರಿಲ್ 13, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 103 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಯುಗಾದಿ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
47,884	14,311	₹48,044 (ಬೆಂಗಳೂರು)	₹69,000 (ಬೆಂಗಳೂರು)	75.05

ಕ್ಷೇಮ ಕುಶಲ
ವನೋಪವನಗಳಲ್ಲಿ ತಿರುಗಾಡಿ ವಿಶ್ರಮಿಸಿ, ಸೂರ್ಯನ ಬೆಳಕಿನಲ್ಲಿ ಮೈಯೊಡ್ಡಿ ಮಿಂದು ಪ್ರಕೃತಿಸೌಂದರ್ಯದಲ್ಲಿ ಕಣ್ಮನಗಳನ್ನು ತಣಿಸಿಕೊಳ್ಳುವುದೇ ಈ ವನಸ್ನಾನದ ಉದ್ದೇಶ



ಕೋವಿಡ್: ಇದೇ 18, 19ರಂದು ಮಹತ್ವದ ಸಭೆ ಕರೆದ ಮುಖ್ಯಮಂತ್ರಿ

ಕಠಿಣ ತೀರ್ಮಾನಕ್ಕೆ ವಾರಾಂತ್ಯ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಬಸವಕಲ್ಯಾಣ : ನಿರೀಕ್ಷಿತ ಪ್ರಮಾಣದಲ್ಲಿ ಒಂದು ವಾರದೊಳಗೆ ಕೋವಿಡ್ ಹರಡುವಿಕೆ ನಿಯಂತ್ರಣಕ್ಕೆ ಬಾರದೇ ಇದ್ದಲ್ಲಿ ಇನ್ನಷ್ಟು ನಗರ ಪ್ರದೇಶಗಳಲ್ಲಿ ಕರ್ಫ್ಯೂ ವಿಸ್ತರಣೆ, ವಾರಾಂತ್ಯದ ಲಾಕ್‌ಡೌನ್ ಸೇರಿದಂತೆ ಹಲವು ಬಿಗಿ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ಮೂರು ಕ್ಷೇತ್ರಗಳಲ್ಲಿ ನಡೆಯುತ್ತಿರುವ ಉಪಚುನಾವಣೆಯ ಮತದಾನ ಇದೇ 17ರಂದು ನಡೆಯಲಿದೆ. ಆ ಬಳಿಕ ಕಠಿಣ ಕ್ರಮಗಳನ್ನು ಕೈಗೊಂಡು ಕೋವಿಡ್ ನಿಗ್ರಹಿಸುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆದಿದೆ ಎಂದು ಗೊತ್ತಾಗಿದೆ.

ಕೋವಿಡ್ ನಿಯಂತ್ರಣಕ್ಕೆ ನಾಗರಿಕರು ಸ್ಪಂದಿಸುತ್ತಿಲ್ಲ. ಗುಂಪುಗೂಡುವುದು, ಸಮಾರಂಭ, ಪಾರ್ಟಿಗಳಲ್ಲಿ ಪಾಲ್ಗೊಳ್ಳುವುದಕ್ಕೆ ಸ್ವಯಂ ನಿರ್ಬಂಧ ವಿಧಿಸಿಕೊಂಡಿಲ್ಲ. ಇದೇ ರೀತಿ ಮುಂದುವರಿದರೆ ಪರಿಸ್ಥಿತಿ ಕೈಮೀರಿ ಹೋಗುವ ಸಾಧ್ಯತೆ ಇದೆ. ಲಾಕ್‌ಡೌನ್‌ನಂತಹ ಕಠಿಣ ಕ್ರಮ ಅನಿವಾರ್ಯವಾಗಬಹುದು ಎಂದು ಕೋವಿಡ್ ನಿಯಂತ್ರಣಕ್ಕಾಗಿ ಸರ್ಕಾರ ರಚಿಸಿರುವ ತಜ್ಞರ ಸಮಿತಿ ಈಗಾಗಲೇ ಪ್ರತಿಪಾದಿಸಿದೆ.

ಬೀದರ್ ಜಿಲ್ಲೆ ಬಸವಕಲ್ಯಾಣದಲ್ಲಿ ಮಂಗಳವಾರ ಮಾತನಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೋವಿಡ್ ಹತೋಟಿಗಾಗಿ ಕಠಿಣ ಕ್ರಮಗಳಿಂದ ಕೂಡಿದ ಮುಂದಿನ ಹೆಜ್ಜೆ ಇಡಲೇಬೇಕಾಗುತ್ತದೆ ಎಂದು ಹೇಳುವ ಮೂಲಕ ಬರಲಿರುವ ದಿನಗಳು ಇನ್ನಷ್ಟು ನಿಷ್ಠುರ, ಕಷ್ಟಕರವಾಗಿರಲಿವೆ ಎಂಬ ಮುನ್ನೆಚ್ಚರಿಕೆಯನ್ನೂ ನೀಡಿದ್ದಾರೆ.

‘ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬಾರದಿದ್ದರೆ ಇನ್ನುಳಿದ ಜಿಲ್ಲೆಗಳಿಗೂ ರಾತ್ರಿ ಕರ್ಫ್ಯೂ ವಿಸ್ತರಿಸಲಾಗುವುದು. ಇನ್ನೊಂದು ವಾರ ಕಾಯ್ದು ನೋಡುತ್ತೇವೆ. ಕೋವಿಡ್ ನಿಯಂತ್ರಣಕ್ಕೆ ಅಗತ್ಯವಿರುವ ಎಲ್ಲ ರೀತಿಯ ಕ್ರಮ ಕೈಗೊಳ್ಳುತ್ತೇವೆ’ ಎಂದು ಯಡಿಯೂರಪ್ಪ ಹೇಳಿದರು.

‘ಬಿಗಿ ಕ್ರಮ ಕೈಗೊಳ್ಳುವ ಕುರಿತಂತೆ ಚರ್ಚಿಸಲು ಇದೇ 18 ಹಾಗೂ 19 ರಂದು ಬೆಂಗಳೂರಿನಲ್ಲಿ ಮಹತ್ವದ ಸಭೆ ಕರೆಯಲಾಗಿದೆ. ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಅವರಿಗೂ ಆಹ್ವಾನ ನೀಡಲಾಗುವುದು’ ಎಂದು ತಿಳಿಸಿದರು.

8ನೇ ಪುಟ ನೋಡಿ



ಸ್ಪುಟ್ನಿಕ್ ತುರ್ತು ಬಳಕೆಗೆ ಶಿಫಾರಸು



ನವದೆಹಲಿ (ಪಿಟಿಐ): ರಷ್ಯಾ ಅಭಿವೃದ್ಧಿಪಡಿಸಿರುವ ಸ್ಪುಟ್ನಿಕ್ ಲಸಿಕೆಯನ್ನು ಕೆಲವು ನಿರ್ಬಂಧಗಳಿಗೆ ಅನುಗುಣವಾಗಿ ಭಾರತದಲ್ಲಿ ತುರ್ತು ಬಳಕೆಗೆ ಅನುಮೋದನೆ ನೀಡಬಹುದು ಎಂದು ಕೇಂದ್ರೀಯ ಔಷಧ ಪ್ರಾಧಿಕಾರದ ತಜ್ಞರ ಸಮಿತಿಯು (ಎಸ್‌ಇಸಿ) ಶಿಫಾರಸು ಮಾಡಿದೆ.

ಡಾ. ರೆಡ್ಡೀಸ್ ಲ್ಯಾಬೊರೇಟರಿಯ ಅರ್ಜಿಯನ್ನು ತಜ್ಞರ ಸಮಿತಿಯು ಸೋಮವಾರ ಅನುಮೋದಿಸಿದೆ. ಭಾರತೀಯ ಔಷಧ ನಿಯಂತ್ರಣ ನಿರ್ದೇಶನಾಲಯವು (ಡಿಸಿಜಿಐ) ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ. ಒಂದು ವೇಳೆ ಈ ಲಸಿಕೆಗೆ ಅನುಮೋದನೆ ದೊರೆತಲ್ಲಿ, ಭಾರತದಲ್ಲಿ ಜನರ ಬಳಕೆಗೆ ಲಭ್ಯವಾದ ಮೂರನೇ ಲಸಿಕೆ ಎನಿಸಿಕೊಳ್ಳಲಿದೆ.

ಈ ಲಸಿಕೆಯನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಬೇಕಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಡಾ. ರೆಡ್ಡೀಸ್ ಲ್ಯಾಬ್ ಜತೆ ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ಪಾಲುದಾರಿಕೆ ಒಪ್ಪಂದ ಮಾಡಿಕೊಂಡಿತ್ತು.

ಸ್ಪುಟ್ನಿಕ್ ಲಸಿಕೆಯು ಶೇ 91.6ರಷ್ಟು ಪರಿಣಾಮಕಾರಿಯಾಗಿದೆ ಎಂದು ಮಾನವರ ಮೇಲಿನ 3ನೇ ಹಂತದ ಪ್ರಯೋಗದ ಮಧ್ಯಂತರ ವಿಶ್ಲೇಷಣಾ ವರದಿಗಳು ಹೇಳಿವೆ.

ಇನ್ನಷ್ಟು ಸುದ್ದಿಗಳು 11

ಅತಿ ಹೆಚ್ಚು ಪ್ರಕರಣ: 2ನೇ ಸ್ಥಾನಕ್ಕೆ ಭಾರತ

ಸೋಮವಾರ ಬೆಳಿಗ್ಗೆ 8ಕ್ಕೆ ಕೊನೆಗೊಂಡ 24 ತಾಸು ಅವಧಿಯಲ್ಲಿ ದೇಶದಲ್ಲಿ 1,68,912 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಅದುವರೆಗೆ ಸೋಂಕಿಗೆ ಒಳಗಾದ ವ್ಯಕ್ತಿಗಳ ಸಂಖ್ಯೆ 1.35 ಕೋಟಿಗೆ ಏರಿದೆ. ಇದು ಜಗತ್ತಿನಲ್ಲಿಯೇ ಎರಡನೇ ಅತಿ ದೊಡ್ಡ ಸಂಖ್ಯೆ.

ಅಮೆರಿಕದಲ್ಲಿ ಅತಿ ಹೆಚ್ಚು ಅಂದರೆ 3.12 ಕೋಟಿ ಪ್ರಕರಣಗಳು ವರದಿಯಾಗಿವೆ. 1,34,82,023 ಪ್ರಕರಣಗಳು ದೃಢಪಟ್ಟ ಬ್ರೆಜಿಲ್ ಈವರೆಗೆ ಎರಡನೇ ಸ್ಥಾನದಲ್ಲಿತ್ತು. ಈಗ ಆ ಸ್ಥಾನಕ್ಕೆ ಭಾರತ ಬಂದಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

ಒಟ್ಟು ಸೋಂಕಿತರು	10,74,869 (10,65,290 ನಿನ್ನೆಯ ವಿವರ)
ಸಕ್ರಿಯ ಪ್ರಕರಣಗಳು	75,985
ಗುಣಮುಖರಾದವರು	9,85,924
ಒಟ್ಟು ಸಾವು	12,941
ದಿನದ ಏರಿಕೆ	
ಹೊಸ ಪ್ರಕರಣ	9,579
ಗುಣಮುಖ	2,767
ಸಾವು	52

470 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮುಷ್ಕರಕ್ಕೆ ತಟ್ಟೆ–ಲೋಟದ ಸದ್ದು

ಕುಟುಂಬ ಸಮೇತ ಸಾರಿಗೆ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ಬೆದರಿಕೆ–ಮನವೊಲಿಕೆಗೆ ಮಣಿಯದೇ ಆರು ದಿನಗಳಿಂದ ಮುಷ್ಕರ ನಡೆಸುತ್ತಿರುವ ಸಾರಿಗೆ ನೌಕರರು ಸೋಮವಾರ ತಮ್ಮ ಹೋರಾಟ ತೀವ್ರಗೊಳಿಸಿದರು. ರಾಜ್ಯದ ಆಯಾ ಜಿಲ್ಲಾಧಿಕಾರಿಗಳ ಕಚೇರಿ ಎದುರು ನೌಕರರು ತಟ್ಟೆ, ಲೋಟ ಬಡಿದು ಪ್ರತಿಭಟಿಸಿದರು.

ಐದು ದಿನಗಳಿಂದ ಕೆಲಸಕ್ಕೆ ಹಾಜರಾಗದೆ ಪ್ರತಿರೋಧ ತೋರಿದ್ದ ನೌಕರರು, ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಆಡಳಿತದ ಕಚೇರಿ ಎದುರು ಕುಟುಂಬ ಸಮೇತರಾಗಿ ಬಂದು ಪ್ರತಿಭಟಿಸಿ, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 6ನೇ ವೇತನ ಆಯೋಗದ ಶಿಫಾರಸುಗಳನ್ನು ಜಾರಿಗೆ ತರುವಂತೆ ಒತ್ತಾಯಿಸಿದರು.

ರಾಜಧಾನಿಯಲ್ಲಿ ಪ್ರತಿಭಟಿಸಲು ಮುಂದಾಗಿದ್ದ 50ಕ್ಕೂ ಹೆಚ್ಚು ನೌಕರರನ್ನು ವಶಕ್ಕೆ ಪಡೆದ ಪೊಲೀಸರು ಸಂಜೆಯ ವೇಳೆಗೆ ಬಿಡುಗಡೆಗೊಳಿಸಿದರು.

ನಾಲ್ಕೂ ನಿಗಮಗಳಿಂದ ನೂರಾರು ನೌಕರರು ರಾಜ್ಯದ ವಿವಿಧೆಡೆ ಪ್ರತಿಭಟನೆ ನಡೆಸಿದರು. ಆದರೆ, ಪ್ರತಿಭಟನೆಗೆ ಅನುಮತಿ ಪಡೆದಿರಲಿಲ್ಲ ಎಂಬ ಕಾರಣ ನೀಡಿ ಪೊಲೀಸರು ಹಲವು ನೌಕರರ ವಿರುದ್ಧ ಪ್ರಕರಣ ದಾಖಲಿಸಿದರು.



ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಕೆಎಸ್‌ಆರ್‌ಟಿಸಿ ನೌಕರರು ತಮ್ಮ ಕುಟುಂಬದ ಸದಸ್ಯರೊಂದಿಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ತಟ್ಟೆ–ಲೋಟಗಳನ್ನು ಬಡಿಯುವ ಮೂಲಕ ಸೋಮವಾರ ಪ್ರತಿಭಟನೆ ನಡೆಸಿದರು

ನೌಕರರು ಕರ್ತವ್ಯಕ್ಕೆ ಹಾಜರಾಗಿ ಸಾರ್ವಜನಿಕರಿಗೆ ಸೇವೆ ನೀಡಬೇಕು. ಹಾಜರಾಗದವರಿಗೆ ಸಂಬಳ ಕೊಡುವುದಿಲ್ಲ. ಮತ್ತಷ್ಟು ಬಿಗಿ ಕ್ರಮ ಅನಿವಾರ್ಯವಾಗಲಿದೆ
ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿ

ಕರ್ತವ್ಯಕ್ಕೆ ಹಾಜರಾಗುತ್ತಿರುವ ಸಾರಿಗೆ ನೌಕರರನ್ನು ತಡೆಗಟ್ಟಿದರೆ ಮತ್ತು ಹಲ್ಲೆ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ
ಲಕ್ಷ್ಮಣ ಸವದಿ, ಸಾರಿಗೆ ಸಚಿವ

ವಿಷ ಸೇವಿಸಿದ ನೌಕರ: ಹಾಸನದಲ್ಲಿ ಸಾರಿಗೆ ನೌಕರರೊಬ್ಬರು ಬಸ್ ನಿಲ್ದಾಣದಲ್ಲೇ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ಹಾಸನ–ಚಿಕ್ಕಮಗಳೂರು ಸಾರಿಗೆ ನೌಕರರ ಸಹಕಾರಿ ಪತ್ತಿನ ಸಂಘದ ಉಪಾಧ್ಯಕ್ಷ ಪಾಲಾಕ್ಷ (40) ವಿಷ ಸೇವಿಸಿದವರು. ತೀವ್ರ ಅಸ್ವಸ್ಥಗೊಂಡಿದ್ದ ಅವರನ್ನು ಹಾಸನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಯಿತು. ಪ್ರಾಣಾಪಾಯದಿಂದ ಅವರು ಪಾರಾಗಿದ್ದಾರೆ.

4ನೇ ಪುಟ ನೋಡಿ

ಬಿಡುವು

ಯುಗಾದಿ ಪ್ರಯುಕ್ತ ಮಂಗಳವಾರ ನಮ್ಮ ಕಚೇರಿಗೆ ಬಿಡುವು. ಹೀಗಾಗಿ ಬುಧವಾರ ಸಂಚಿಕೆ ಪ್ರಕಟವಾಗುವುದಿಲ್ಲ.

–ಸಂ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ,
ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–12

ಮುನ್ನೋಟ ಸಂಸ್ಥೆಯಿಂದ ಟ್ವಿಟರ್‌ನಲ್ಲಿ ಸಮೀಕ್ಷೆ

‘ಒಳ್ಳೆಯ ಶಾಲೆಯಾದರೆ ಕನ್ನಡ ಮಾಧ್ಯಮಕ್ಕೆ ಜೈ’

• ಪ್ರವೀಣ್ ಕುಮಾರ್ ಪಿ.ವಿ.


ಬೆಂಗಳೂರು: ‘ಒಳ್ಳೆಯ ಶಾಲೆ ಸಿಕ್ಕರೆ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ಕೊಡಿಸುತ್ತೇವೆ’....

ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿ ಓದಿಸುವ ಕುರಿತು ಪೋಷಕರ ಮನದಿಂಗಿತ ಅರಿಯಲು ಮುನ್ನೋಟ ಸಂಸ್ಥೆಯು ಟ್ವಿಟರ್‌ನಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಪಾಲ್ಗೊಂಡ ಶೇ 77.1 ರಷ್ಟು ಮಂದಿ ವ್ಯಕ್ತಪಡಿಸಿರುವ ಅಭಿಪ್ರಾಯವಿದು. ಟ್ವಿಟರ್‌ನಲ್ಲಿ ಏ.3ರಿಂದ ಮೂರು ದಿನಗಳವರೆಗೆ ನಡೆಸಿದ ಸಮೀಕ್ಷೆಯಲ್ಲಿ 650 ಮಂದಿ ಭಾಗವಹಿಸಿದ್ದರು.

4ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

ಕನ್ನಡ ಮಾಧ್ಯಮದಲ್ಲಿ ಶಿಕ್ಷಣ–ಸಮೀಕ್ಷೆ ವಿವರ



ಆನ್‌ಲೈನ್‌ನಲ್ಲಿ ಪರೀಕ್ಷೆ ಅಸಾಧ್ಯ: ಅಶ್ವತ್ಥನಾರಾಯಣ

ಬೆಂಗಳೂರು: ‘ಪರೀಕ್ಷೆಗಳನ್ನು ಆನ್‌ಲೈನ್ ಮೂಲಕವೇ ನಡೆಸುವಂತೆ ವಿದ್ಯಾರ್ಥಿಗಳು, ಪೋಷಕರು ಬೇಡಿಕೆ ಇಡುತ್ತಿದ್ದಾರೆ. ಅದು ಸಾಧ್ಯವಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸ್ಪಷ್ಟಪಡಿಸಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, ‘ಉನ್ನತಶಿಕ್ಷಣ ವ್ಯಾಪ್ತಿಯ ಕಾಲೇಜುಗಳಲ್ಲಿ ಎಲ್ಲ ಪರೀಕ್ಷೆಗಳು ಆಫ್‌ಲೈನ್‌ನಲ್ಲಿ (ಕಾಲೇಜುಗಳಲ್ಲಿ) ನಡೆಯಲಿವೆ. ಕೆಲವು ಡೀಮ್ಡ್ ವಿಶ್ವವಿದ್ಯಾಲಯಗಳು ಆನ್‌ಲೈನ್‌ನಲ್ಲಿ ಪರೀಕ್ಷೆ ಮಾಡಿಕೊಳ್ಳುತ್ತಿವೆ. ನಮ್ಮಲ್ಲಿ ಇದಕ್ಕೆ ಅವಕಾಶವಿಲ್ಲ’ ಎಂದರು.

‘ಸಾರಿಗೆ ನೌಕರರ ಮುಷ್ಕರದಿಂದ ಪದವಿ, ಸ್ನಾತಕೋತ್ತರ, ಡಿಪ್ಲೊಮಾ, ಎಂಜಿನಿಯರಿಂಗ್ ಪರೀಕ್ಷೆಗಳ ವೇಳಾಪಟ್ಟಿಯಲ್ಲಿ ವ್ಯತ್ಯಯವಾಗಿದೆ. ಮುಷ್ಕರ ನಿಂತ ಕೂಡಲೇ ಪರೀಕ್ಷೆಗಳು ಆರಂಭವಾಗುತ್ತವೆ’ ಎಂದು ಹೇಳಿದರು.

‘ಮುಂದಿನ ಶೈಕ್ಷಣಿಕ ವರ್ಷದಲ್ಲಿ (2021-22) ಮೊದಲು ಆನ್‌ಲೈನ್ ತರಗತಿಗಳನ್ನು ಆರಂಭಿಸಲಾಗುವುದು. ಕೋವಿಡ್ ಸೋಂಕು ನಿಯಂತ್ರಣಕ್ಕೆ ಬಂದ ಬಳಿಕ ವಿದ್ಯಾರ್ಥಿಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಆಫ್‌ಲೈನ್ ಅಥವಾ ಆನ್‌ಲೈನ್ ತರಗತಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ, ಎರಡರಲ್ಲಿ ಯಾವುದಾದರೂ ಒಂದರಲ್ಲಿ ಹಾಜರಾತಿ ಕಡ್ಡಾಯ’ ಎಂದು ಅವರು ಪುನರುಚ್ಚರಿಸಿದರು.

ಸಿ.ಡಿ. ಪ್ರಕರಣ: ತನಿಖಾಧಿಕಾರಿ ಎದುರು ಹಾಜರು

ಪುರಾವೆಗೆ ಸಮಯ ಕೇಳಿದ ಸಂತ್ರಸ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದ ತನಿಖೆ ಮತ್ತಷ್ಟು ಚುರುಕುಗೊಂಡಿದ್ದು, ಅತ್ಯಾಚಾರ ಪ್ರಕರಣದ ಸಂತ್ರಸ್ತೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳ ಎದುರು ಸೋಮವಾರ ಹಾಜರಾದರು.

‘ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು ಆರೋಪಿಸಿ ಸಂತ್ರಸ್ತೆ ನೀಡಿರುವ ದೂರಿನಡಿ ಕಬ್ಬನ್ ಪಾರ್ಕ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸುತ್ತಿರುವ ತನಿಖಾಧಿಕಾರಿ ಎಂ.ಸಿ.ಕವಿತಾ, ಪ್ರಕರಣಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ.

ಅದೇ ಕಾರಣಕ್ಕೆ ಭಾನುವಾರ ಸಂತ್ರಸ್ತೆಗೆ ನೋಟಿಸ್ ನೀಡಿದ್ದ ತನಿಖಾಧಿಕಾರಿ, ‘ಪ್ರಕರಣ ಸಂಬಂಧ ತಾವು ನೀಡಿರುವ ಹೇಳಿಕೆಗೆ ಪೂರಕವಾದ ವಿಡಿಯೊ, ಆಡಿಯೊ, ವಾಟ್ಸ್‌ಆ್ಯಪ್ ಚಾಟಿಂಗ್, ಭಾವಚಿತ್ರ ಹಾಗೂ ಇತರೆ ದಾಖಲಾತಿಗಳ ಸಮೇತ ಕಚೇರಿಗೆ ಹಾಜರಾಗಿ’ ಎಂದಿದ್ದರು.

ಸೋಮವಾರ ಬೆಳಿಗ್ಗೆ 11.30 ಗಂಟೆ ಸುಮಾರಿಗೆ ವಕೀಲರ ಸಮೇತ ಆಡುಗೋಡಿಯಲ್ಲಿರುವ ಎಸ್‌ಐಟಿ ಕಚೇರಿಗೆ ಬಂದಿದ್ದ ಸಂತ್ರಸ್ತೆ, ಅರ್ಧ ಗಂಟೆ ತನಿಖಾಧಿಕಾರಿ ಜೊತೆ ಮಾತನಾಡಿದರು.

‘ನೀವು ಕೇಳಿರುವ ದಾಖಲೆಗಳೆಲ್ಲವೂ ನನ್ನ ಬಳಿ ಇದೆ. ಆದರೆ, ಅವುಗಳನ್ನು ನಿಮಗೆ ತಂದುಕೊಡಲು ಕಾಲಾವಕಾಶ ಬೇಕು’ ಎಂದು ಸಂತ್ರಸ್ತೆ, ಲಿಖಿತವಾಗಿಯೇ ತನಿಖಾಧಿಕಾರಿಗೆ ಬರೆದುಕೊಟ್ಟರು. ಅದಕ್ಕೆ ಒಪ್ಪಿದ ತನಿಖಾಧಿಕಾರಿ, ಪುರಾವೆಗಳನ್ನು ಹಾಜರುಪಡಿಸಲು ಕಾಲಾವಕಾಶ ನೀಡಿದ್ದಾರೆ.

‘ಹೇಳಿಕೆಗೆ ಸಂತ್ರಸ್ತೆ ಬದ್ಧ’

ಸಂತ್ರಸ್ತೆ ವಿಚಾರಣೆಗೆ ಹಾಜರಾದ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ವಕೀಲ ಸೂರ್ಯ ಮುಕುಂದರಾಜ್, ‘ಪ್ರಕರಣ ಸಂಬಂಧ ನೀಡಿರುವ ಹೇಳಿಕೆಗೆ ಸಂತ್ರಸ್ತೆ ಬದ್ಧರಾಗಿದ್ದಾರೆ. ಪುರಾವೆ ಕೇಳಿ ತನಿಖಾಧಿಕಾರಿ ನೋಟಿಸ್ ನೀಡಿದ್ದರು. ಲಿಖಿತ ರೂಪದಲ್ಲೇ ಸಂತ್ರಸ್ತೆ ಕಾಲಾವಕಾಶ ಕೋರಿದ್ದಾರೆ’ ಎಂದರು.

‘ಸಂತ್ರಸ್ತೆ ತಮ್ಮ ಹೇಳಿಕೆ ಹಿಂಪಡೆಯುತ್ತಿದ್ದಾರೆಂದು ಕೆಲವೆಡೆ ಸುದ್ದಿ ಹರಿದಾಡಿದೆ. ಆದರೆ, ಅದು ಸುಳ್ಳು’ ಎಂದೂ ತಿಳಿಸಿದರು.

ರಫೇಲ್: ವಿಚಾರಣೆಗೆ ‘ಸುಪ್ರೀಂ’ ಸಮ್ಮತಿ

ನವದೆಹಲಿ: ರಫೇಲ್ ಯುದ್ಧ ವಿಮಾನಗಳ ಖರೀದಿಗೆ ಸಂಬಂಧಿಸಿ ಫ್ರಾನ್ಸ್ ಮಾಧ್ಯಮಗಳು ಪ್ರಕಟಿಸಿರುವ ‘ಹೊಸ ವಿಷಯಗಳ’ ಹಿನ್ನೆಲೆಯಲ್ಲಿ ವಹಿವಾಟು ಕುರಿತು ಹೊಸದಾಗಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಯುದ್ಧ ವಿಮಾನಗಳ ಉತ್ಪಾದಕ ಸಂಸ್ಥೆಯಾದ ಡಾಸೊ ಏವಿಯೇಷನ್, ಭಾರತದ ಮಧ್ಯವರ್ತಿಗೆ ದಶಲಕ್ಷ ಯೂರೊ ‘ಉಡುಗೊರೆ’ ನೀಡಿದೆ ಎಂದು ಸಂಸ್ಥೆ ಹೇಳಿಕೆ ಆಧರಿಸಿ ಮಾಧ್ಯಮಗಳು ವರದಿ ಮಾಡಿದ್ದವು.

ಇದನ್ನು ತುರ್ತಾಗಿ ವಿಚಾರಣೆಗೆ ಪರಿಗಣಿಸಬೇಕು ಎಂದು ಕೋರಿ ವಕೀಲ ಎಂ.ಎಲ್.ಶರ್ಮಾ ಅವರು ಸಲ್ಲಿಸಿದ್ದ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ನ್ಯಾಯಪೀಠವು ಪುರಸ್ಕರಿಸಿತು. ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ವಿ.ರಾಮಸುಬ್ರಹ್ಮಣಿಯನ್ ಅವರೂ ಈ ಪೀಠದಲ್ಲಿದ್ದಾರೆ. ನಿಯಮಗಳ ಪ್ರಕಾರವೇ ಕೆಲ ವಾರಗಳ ನಂತರ ಈ ಪ್ರಕರಣವು ವಿಚಾರಣೆಗೆ ಬರಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ, ಡಾಸೊ ರಿಲಯನ್ಸ್ ಏರೋಸ್ಪೇಸ್ ಸಂಸ್ಥೆ ಹಾಗೂ ಡಿಎಫ್‌ಸಿಎಸ್ ಸೊಲ್ಯೂಷನ್ಸ್ ಸಂಸ್ಥೆಯ ಸುಶೇನ್ ಮೋಹನ್ ಗುಪ್ತಾ ಅವರನ್ನು ಪ್ರತಿವಾದಿಗಳಾಗಿ ಅರ್ಜಿದಾರರು ಹೆಸರಿಸಿದ್ದಾರೆ.

ಒಳ ಪುಟ



ಕೋವಿಡ್ ಹೆಚ್ಚಳಕ್ಕೆ ನಲುಗಿದ ಪೇಟೆ 10

ಇಂದಿನ ಪಾಡ್‌ಕಾಸ್ಟ್ ವಿಶೇಷ
ಪ್ರಜಾವಾಣಿ ಕನ್ನಡ ಧ್ವನಿ
ಸುದ್ದಿ ಸ್ವಾರಸ್ಯ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪ್ರಜಾವಾಣಿ

ಮಂಗಳವಾರದ ಉಷ್ಣಾಂಶ 34° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ. ಬಳಿಕ ಬಿಸಿಲಿನ ವಾತಾವರಣ ಇರಲಿದೆ

ಮುನ್ನೋಟ

ಬುಧವಾರ	ಗುರುವಾರ	ಶುಕ್ರವಾರ
35° 22°	35° 21°	35° 21°

ಸೂರ್ಯೋದಯ: 6.08 ಸೂರ್ಯಾಸ್ತ: 6:32 ಚಂದ್ರೋದಯ: ಬೆ. 6:56 ಚಂದ್ರಾಸ್ತ: ರಾ. 7:37 ಸೋಮವಾರದ ಹವಾಮಾನ: ಗರಿಷ್ಠ 34° ಕನಿಷ್ಠ 22°

ನಿತ್ಯ 75 ಟನ್ ಸಾಮರ್ಥ್ಯದ ಸ್ಥಾವರ ನಿರ್ಮಾಣಕ್ಕೆ ಅನುಮತಿ ಕೋರಿ ಪತ್ರ

ಹಸಿ ಕಸದಿಂದ ಸಾಂದ್ರೀಕೃತ ಜೈವಿಕ ಅನಿಲ ಉತ್ಪಾದನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 4–5 ಎಕರೆ ಜಮೀನನ್ನು ಉಚಿತವಾಗಿ ಒದಗಿಸುವಂತೆ ಕೋರಿದ ಗೇಲ್ ಗ್ಯಾಸ್ ಸಂಸ್ಥೆ
- ಸ್ಥಾವರ ನಿರ್ಮಾಣ ಮತ್ತು ನಿರ್ವಹಣೆ ಹೊಣೆ ಗೇಲ್ ಗ್ಯಾಸ್ ಸಂಸ್ಥೆಯದು

ಬೆಂಗಳೂರು: ಹಸಿ ಕಸ ಬಳಸಿ ಸಾಂದ್ರೀಕೃತ ಜೈವಿಕ ಅನಿಲ ಉತ್ಪಾದಿಸುವ ಸ್ಥಾವರ ಸ್ಥಾಪಿಸಲು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಸಂಸ್ಥೆ ಮುಂದೆ ಬಂದಿದೆ. ನಿತ್ಯ 75 ಟನ್ ಸಾಮರ್ಥ್ಯದ ಸ್ಥಾವರ ಸ್ಥಾಪಿಸುವ ಬಗ್ಗೆ ಗೇಲ್ ಗ್ಯಾಸ್ ಸಂಸ್ಥೆಯ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ವಿವೇಕ ವಾಥೋಡ್ಕರ್ ಅವರು ಬಿಬಿಎಂಪಿಯ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಅವರಿಗೆ ಇತ್ತೀಚೆಗೆ ಪತ್ರ ಬರೆದಿದ್ದಾರೆ.

ನಗರದಲ್ಲಿ ಜೈವಿಕ ಅನಿಲ ಸ್ಥಾವರ ನಿರ್ಮಿಸುವ ಮೂಲಕ ಬೆಂಗಳೂರನ್ನು ಸ್ವಚ್ಛಭಾರತ ಅಭಿಯಾನದಡಿ ಸ್ವಚ್ಛ ನಗರವನ್ನಾಗಿ ರೂಪಿಸಲು ಗೇಲ್ ಗ್ಯಾಸ್ ಸಂಸ್ಥೆ ಬಿಬಿಎಂಪಿ ಜೊತೆ ಕೈಜೋಡಿಸಲಿದೆ ಎಂದು ವಾಥೋಡ್ಕರ್ ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ನಗರದ ಉತ್ತರ ಭಾಗದಲ್ಲಿ ನಿತ್ಯ 75 ಟನ್ ಅನಿಲ ಉತ್ಪಾದನೆ ಸಾಮರ್ಥ್ಯದ ಸ್ಥಾವರ ಸ್ಥಾಪಿಸುವ ಬಗ್ಗೆ ನಾವು ಈಗಾಗಲೇ ಕಸ ವಿಲೇವಾರಿ ವಿಭಾಗದ ವಿಶೇಷ ಆಯುಕ್ತ ಡಿ.ರಂದೀಪ್ ಅವರ ಜೊತೆ ಚರ್ಚಿಸಿದ್ದೇವೆ. ಈ ಘಟಕದಲ್ಲಿ ಹಸಿ ಕಸ ಬಳಸಿ ಸಾಂದ್ರೀಕೃತ ಜೈವಿಕ ಅನಿಲ (ಸಿಬಿಜಿ) ಉತ್ಪಾದಿಸಲಿದ್ದೇವೆ. ಈ ಉದ್ದೇಶಕ್ಕೆ ಬಿಬಿಎಂಪಿಯು ಉಚಿತವಾಗಿ ಜಮೀನು ಒದಗಿಸಬೇಕು. ಗೇಲ್ ಗ್ಯಾಸ್ ಸಂಸ್ಥೆಯು ಸ್ವಂತ ಖರ್ಚಿನಲ್ಲಿ ಸಾಂದ್ರೀಕೃತ ಜೈವಿಕ ಅನಿಕ ಸ್ಥಾವರ ನಿರ್ಮಿಸಿ, ನಿರ್ವಹಿಸಲಿದೆ. ಮಾತುಕತೆ ವೇಳೆ ಪ್ರಸ್ತಾಪಿಸಿದಂತೆ ಸ್ಥಾವರದಲ್ಲಿ ಹಸಿ ಕಸ ಬಳಸಿ ಉತ್ಪಾದಿಸುವ ಜೈವಿಕ ಅನಿಲವನ್ನು ಸಂಸ್ಥೆಯೇ ಬಳಸಿಕೊಳ್ಳಲಿದೆ' ಎಂದು ವಿವೇಕ ವಾಥೋಡ್ಕರ್ ತಿಳಿಸಿದ್ದಾರೆ.

'ಸಿಬಿಜಿ ಬಳಸಿಕೊಳ್ಳುವುದಕ್ಕೆ ಪೂರಕವಾಗಿ ಸ್ಥಾವರದ ಪಕ್ಕದಲ್ಲಿ ಸಿಎನ್‌ಜಿ ಸ್ಟೇಷನ್ ಮತ್ತು ಇತರ ಮೂಲಸೌಕರ್ಯ ನಿರ್ಮಾಣಕ್ಕಾಗಿ 4ರಿಂದ 5 ಎಕರೆಗಳಷ್ಟು ಹೆಚ್ಚುವರಿ ಜಾಗದ ಅಗತ್ಯವಿದೆ. ಈ ಸ್ಥಾವರದ ಸಾಮರ್ಥ್ಯಕ್ಕೆ ಅನುಗುಣವಾಗಿ ನಿರಂತರವಾಗಿ ಹಸಿಕಸವನ್ನು ಪೂರೈಸುವ ಕುರಿತು ಬಿಬಿಎಂಪಿ ಆಶ್ವಾಸನೆ ನೀಡಬೇಕು. ಹಸಿ ಕಸ ಪೂರೈಕೆ, ಜಾಗದ ಲಭ್ಯತೆ ಸ್ಥಾವರದ ಸಾಮರ್ಥ್ಯದ ಕುರಿತ ಎಲ್ಲ ವಿಚಾರಗಳ ಬಗ್ಗೆ ನಿರ್ಧಾರಕ್ಕೆ ಬರುವ ಮುನ್ನ ನಮ್ಮ ಸಂಸ್ಥೆಯ ಆಡಳಿತ ಮಂಡಳಿಯಿಂದ ಅಂತಿಮ ಅನುಮೋದನೆ ಪಡೆಯಲು ಬಿಬಿಎಂಪಿ ತಾತ್ವಿಕ ಸಮ್ಮತಿ ನೀಡಬೇಕು. ಬಳಿಕ ವಿಸ್ತೃತ ಪ್ರಸ್ತಾವನೆಯನ್ನು ಸಂಸ್ಥೆಯು ಬಿಬಿಎಂಪಿಗೆ ಸಲ್ಲಿಸಲಿದೆ' ಎಂದು ಅವರು ತಿಳಿಸಿದ್ದಾರೆ.

ನಗರ ಅನಿಲ ಪೂರೈಕೆ (ಸಿಜಿಡಿ) ಯೋಜನೆ ಅನುಷ್ಠಾನಕ್ಕಾಗಿ ಗೇಲ್ ಗ್ಯಾಸ್ ಸಂಸ್ಥೆಯು ಕೇಂದ್ರ ಸರ್ಕಾರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿಯ (ಪಿಎನ್‌ಜಿಆರ್‌ಬಿ) ಅನುಮತಿ ಪಡೆದಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ನೈಸರ್ಗಿಕ ಅನಿಲ ಕೊಳವೆ ಜಾಲವನ್ನು ನಿರ್ಮಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿದೆ. ಈ ಯೋಜನೆ ಮೂಲಕ ಸಂಸ್ಥೆಯು ಮನೆ ಬಳಕೆಗೆ, ವಾಣಿಜ್ಯ ಬಳಕೆಗೆ ಹಾಗೂ ಕೈಗಾರಿಕಾ ಕ್ಷೇತ್ರಕ್ಕೆ ಕೊಳವೆಯಲ್ಲಿ ನೈಸರ್ಗಿಕ ಅನಿಲವನ್ನು (ಪಿಎನ್‌ಜಿ) ಹಾಗೂ ಸಾರಿಗೆ ಉದ್ದೇಶಕ್ಕೆ ಸಾಂದ್ರೀಕೃತ ನೈಸರ್ಗಿಕ ಅನಿಲವನ್ನೂ ಪೂರೈಸಲಿದೆ.

'ಆಕ್ಷೇಪಣೆ ಸಲ್ಲಿಕೆ ಅವಧಿ ವಿಸ್ತರಿಸಿ'

ರೈಲು ಯೋಜನೆಗೆ 1,034 ಮರಗಳ ಹನನ: ಅಭಿಯಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಆಕ್ಷೇಪಣೆ ಸಲ್ಲಿಕೆಗೆ 10 ದಿನಗಳ ಕಲಾವಕಾಶ ನೀಡಲಾಗಿತ್ತು
- ಕಡಿಯುವ ಮರಗಳ ಸಂಖ್ಯೆಗೆ ಪರ್ಯಾಯವಾಗಿ ದುಪ್ಪಟ್ಟು ಸಸಿ ನೆಡಲು ಒತ್ತಾಯ

ಬೆಂಗಳೂರು: ಉಪನಗರ ರೈಲು ಯೋಜನೆಗಾಗಿ ಬೈಯಪ್ಪನಹಳ್ಳಿ ಮತ್ತು ಹೊಸೂರು ನಡುವೆ 1,034 ಮರಗಳನ್ನು ಕಡಿಯುವ ವಿರುದ್ಧ ಪರಿಸರ ಪ್ರಿಯರು ಆನ್‌ಲೈನ್‌ನಲ್ಲಿ ಅಭಿಯಾನ ಆರಂಭಿಸಿದ್ದಾರೆ.

jhatkaa.org ಸಂಘಟನೆಯ ಮೂಲಕ ಅಭಿಯಾನ ನಡೆಯುತ್ತಿದೆ. ಈ ಮರಗಳನ್ನು ಕಡಿಯುವ ಬಗ್ಗೆ ಮಾ.30ರಂದು ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದ ಅರಣ್ಯ ಇಲಾಖೆ ಈ ಕುರಿತು ಸಲಹೆ ಅಥವಾ ಆಕ್ಷೇಪಣೆ ಸಲ್ಲಿಸಲು ಕೇವಲ 10 ದಿನಗಳ ಕಾಲಾವಕಾಶ ನೀಡಿತ್ತು. ಇದನ್ನು ವಿಸ್ತರಿಸಬೇಕು ಎಂದು ಒತ್ತಾಯಿಸಿ ಅಭಿಪ್ರಾಯ ಸಂಗ್ರಹ ಮಾಡಲಾಗುತ್ತಿದೆ.

ಏ.8ರ ವೇಳೆಗೆ, 600ಕ್ಕೂ ಹೆಚ್ಚು ಜನ ಅರಣ್ಯ ಉಪಸಂರಕ್ಷಣಾಧಿಕಾರಿಗೆ jhatkaa.org ಮೂಲಕ ಇಮೇಲ್ ಮಾಡಿ, ಅವಧಿ ವಿಸ್ತರಿಸುವಂತೆ ಮನವಿ ಮಾಡಿದ್ದಾರೆ. ಆಸಕ್ತರು ಈ ವೆಬ್‌ಸೈಟ್ ಸಂಪರ್ಕಿಸಿ, ಮೇಲ್ ಮಾಡುವ ಮೂಲಕ ಬೆಂಬಲ ನೀಡಬೇಕು ಎಂದು ಸಂಘಟನೆಯ ಸದಸ್ಯರು ಮನವಿ ಮಾಡಿದ್ದಾರೆ.

ಬೈಯಪ್ಪನಹಳ್ಳಿ ಮತ್ತು ಹೊಸೂರು ನಡುವೆ ರೈಲ್ವೆ ಹಳಿ ದ್ವಿಪಥಕ್ಕಾಗಿ ಈ ಮರಗಳನ್ನು ಕಡಿಯಬೇಕಾಗಿದೆ ಎಂದು ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ಕಂಪನಿಯು (ಕೆ-ರೈಡ್) ಹೇಳಿತ್ತು. ಕಡಿಯುವ ಮರಗಳ ಸಂಖ್ಯೆಗೆ ಪರ್ಯಾಯವಾಗಿ ಅದರ ದುಪ್ಪಟ್ಟು ಅಥವಾ ಮೂರು ಪಟ್ಟು ಸಸಿಗಳನ್ನು ನೆಟ್ಟು ಪೋಷಿಸಬೇಕು ಎಂದು ಪರಿಸರ ಪ್ರಿಯರು ಒತ್ತಾಯಿಸಿದ್ದಾರೆ.

ಹೀಳಲಿಗೆ ನಿಲ್ದಾಣದಲ್ಲಿ ಪ್ಲಾಟ್ ಫಾರಂ ಮತ್ತು ಪ್ರಾಂಗಣ ನಿರ್ಮಾಣಕ್ಕೂ ಮರಗಳ ಕಡಿಯಬೇಕಾದ ಅನಿವಾರ್ಯತೆ ಇದೆ ಎಂದು ಕೆ-ರೈಡ್ ಹೇಳಿದೆ. ಕಡಿಯಲಾಗುವ ಮರಗಳು, ಅವುಗಳ ವಿಧಗಳುಮತ್ತು ಅವುಗಳು ಇರುವ ಸ್ಥಳದ ನಕ್ಷೆಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ (aranya.gov.in) ದಾಖಲಿಸಲಾಗಿದೆ.

ಬೆಂಗಳೂರು ನಗರ ವಿ.ವಿ: ಲಿಂಗರಾಜ ಗಾಂಧಿ ಕುಲಪತಿ

ಬೆಂಗಳೂರು: ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಲಿಂಗರಾಜ ಗಾಂಧಿ ಅವರನ್ನು ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಯಾಗಿ ರಾಜ್ಯಪಾಲ ವಜೂಭಾಯಿ ವಾಲಾ ಸೋಮವಾರ ನೇಮಿಸಿದ್ದಾರೆ.

ಅಧಿಕಾರ ವಹಿಸಿಕೊಂಡ ದಿನದಿಂದ ಮುಂದಿನ ನಾಲ್ಕು ವರ್ಷ ಅಥವಾ 67 ವಯಸ್ಸು ತುಂಬುವವರೆಗೆ ಯಾವುದೇ ಮೊದಲು ಅಲ್ಲಿಯವರೆಗೆ ಈ ಹುದ್ದೆಯಲ್ಲಿ ಮುಂದುವರಿಯಲಿದ್ದಾರೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್. ಜಾಫೆಟ್ 2020 ನ. 20ರಂದು ನಿವೃತ್ತಿಯಾಗಿದ್ದರು. ಬಳಿಕ ವಿಶ್ವವಿದ್ಯಾಲಯ ಸಂವಹನ ವಿಭಾಗದ ಡೀನ್ ಎನ್. ನರಸಿಂಹಮೂರ್ತಿ ಅವರನ್ನು ಪ್ರಭಾರ ಕುಲಪತಿಯಾಗಿ ನೇಮಿಸಲಾಗಿತ್ತು.

ಕಸಾಪ: ನಗರ ಜಿಲ್ಲೆಗೆ 11 ಮಂದಿ ನಡುವೆ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ 12 ಮಂದಿಯಲ್ಲಿ ಒಬ್ಬರು ನಾಮಪತ್ರ ವಾಪಸ್ ಪಡೆದುಕೊಂಡಿದ್ದಾರೆ. ಇದರಿಂದಾಗಿ ಅಂತಿಮ ಕಣದಲ್ಲಿ 11 ಅಭ್ಯರ್ಥಿಗಳಿದ್ದಾರೆ.

ರಾಜ್ಯದಲ್ಲಿಯೇ ಅತಿ ಹೆಚ್ಚು ಮತದಾರರನ್ನು ಒಳಗೊಂಡಿರುವ ಬೆಂಗಳೂರು ನಗರ ಜಿಲ್ಲೆ ಘಟಕದ ಅಧ್ಯಕ್ಷ ಗಾದಿಗೆ ಏರಲು ಪ್ರಬಲ ಸ್ಪರ್ಧೆ ಏರ್ಪಟ್ಟಿದೆ. ಮೇ 9 ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಹಿಂಪಡೆಯಲು ಸೋಮವಾರ ಕಡೆಯ ದಿನವಾಗಿತ್ತು. ಸ್ಪರ್ಧಿಸಿದವರಲ್ಲಿ ಪಿ. ಸುಕುಮಾರ್ ಚುನಾವಣೆ ಕಣದಿಂದ ಹಿಂದೆ ಸರಿದಿದ್ದಾರೆ.

ಅಂತಿಮ ಕಣದಲ್ಲಿ ಎಚ್.ಎ. ಆತ್ಮಾನಂದ, ಕಾಂತರಾಜಪುರ ಸುರೇಶ್, ಕುವೆಂಪು ಪ್ರಕಾಶ್, ಕೆ.ಎಸ್. ಕೃಷ್ಣೋಜಿರಾವ್, ಆರ್. ಜಯಕುಮಾರ ಗೌಡ, ಎಂ. ತಿಮ್ಮಯ್ಯ, ದಯಾನಂದ ತಿಪ್ಪೇರುದ್ರಪ್ಪ, ಎಂ. ಪ್ರಕಾಶ್ ಮೂರ್ತಿ, ಎಂ. ಪುಟ್ಟರಾಜು, ವೇದಮೂರ್ತಿ ಕೆ.ಸಿ. ಹಾಗೂ ಪಿ.ಸಿ. ಹೇಮಂತಕುಮಾರ್ ಇದ್ದಾರೆ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಒಟ್ಟು 36,596 ಸದಸ್ಯರಿದ್ದಾರೆ. ಇವರಲ್ಲಿ 36,389 ಮಂದಿ ಮತ ಚಲಾವಣೆಯ ಅರ್ಹತೆ ಹೊಂದಿದ್ದಾರೆ.

ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಳಾಂತರಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪಾದಚಾರಿ ಮಾರ್ಗಗಳಲ್ಲಿ ಇರುವ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸುವ ಸಂಬಂಧ ವಿಧಾನಗಳನ್ನು ರೂಪಿಸಲು ಸಮನ್ವಯ ಸಮಿತಿ ರಚಿಸಲಾಗುವುದು ಎಂದು ಹೈಕೋರ್ಟ್‌ಗೆ ಬಿಬಿಎಂಪಿ ಮತ್ತು ಬೆಸ್ಕಾಂ ಮಾಹಿತಿ ನೀಡಿವೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎಂ.ಬಿ. ರಾಜೇಶಗೌಡ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಪ್ರಮಾಣಪತ್ರ ಸಲ್ಲಿಸಿದ್ದಾರೆ. ವಿದ್ಯುತ್ ಉಪಕರಣ ಅಥವಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲು ಅನುಕೂಲಕರ ಸ್ಥಳಗಳನ್ನು ಗುರುತಿಸುವ ಉದ್ದೇಶದಿಂದ ಸಮಿತಿ ರಚಿಸಲಾಗುತ್ತಿದೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ಜನ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ಸುಮಾರು 800 ಟ್ರಾನ್ಸ್‌ಫಾರ್ಮರ್‌ಗಳನ್ನು ಬದಲಿಸುವ ಕೆಲಸ ನಡೆಯುತ್ತಿದೆ ಎಂದು ಬೆಸ್ಕಾಂ ತಿಳಿಸಿದೆ. ಆಗುತ್ತಿರುವ ಅನಾನುಕೂಲ ತಪ್ಪಿಸಲು ಸಮಾಲೋಚನೆ ಪ್ರಕ್ರಿಯೆ ಕೂಡಲೇ ಆರಂಭಿಸಲಾಗುವುದು ಎಂದು ಬಿಬಿಎಂಪಿ ಭರವಸೆ ನೀಡಿದೆ.

ಈ ಪ್ರಕ್ರಿಯೆಗೆ ಸಮಯಾವಕಾಶ ನೀಡಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಎರಡು ಪ್ರಾಧಿಕಾರಗಳು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಪರಿಶೀಲನೆಗೆ ಸೂಕ್ತ ಏಜೆನ್ಸಿ ನೇಮಿಸಲಾಗುವುದು ಎಂದು ತಿಳಿಸಿತು.

ಪಾದಚಾರಿ ಮಾರ್ಗಗಳಲ್ಲಿ ಇರುವ ಅಪಾಯಕಾರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಿಸಲು ನಿರ್ದೇಶನ ನೀಡಲು ಕೋರಿ ನಿವೃತ್ತ ವಿಂಗ್ ಕಮಾಂಡರ್ ಜಿ.ಬಿ. ಅತ್ರಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು.

ಸಾರಿಗೆ ಮಾಜಿ ಸಚಿವರಾದ ರಾಮಲಿಂಗಾರೆಡ್ಡಿ, ಎಚ್.ಎಂ. ರೇವಣ್ಣ ಸಲಹೆ

‘ಸಾರಿಗೆ ನಿಗಮದ ಖಾಸಗೀಕರಣ ಚಿಂತನೆ ಕೈಬಿಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಖಾಸಗೀಕರಣ ಮಾಡುವ ಉದ್ದೇಶವೇನಾದರೂ ರಾಜ್ಯ ಸರ್ಕಾರಕ್ಕಿದೆಯೇ? ಇದ್ದರೆ ಆ ಆಲೋಚನೆ ಕೈಬಿಡಿ’ ಎಂದು ಮಾಜಿ ಸಾರಿಗೆ ಸಚಿವರೂ ಆಗಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಮತ್ತು ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ ಸಲಹೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸಾರಿಗೆ ಇಲಾಖೆಯ ನೌಕರರ ಬೇಡಿಕೆಗಳ ಪೈಕಿ ಯಾವುದು ಆಗುತ್ತದೆ, ಯಾವುದು ಆಗಲ್ಲವೆಂದು ಮೊದಲೇ ಸ್ಪಷ್ಟವಾಗಿ ಹೇಳಬೇಕಿತ್ತು. ನೋಡೋಣ, ಮಾಡೋಣ ಎಂದು ಹೇಳಿದ್ದರಿಂದ ಇಂದು ಹೀಗಾಗಿದೆ’ ಎಂದರು.

‘ಎಲ್ಲ ಬೇಡಿಕೆಗಳನ್ನು ಈಡೇರಿಸಲು ಆಗುವುದಿಲ್ಲ ನಿಜ. ಆದರೆ, ಸರ್ಕಾರ ಪ್ರತಿಷ್ಠೆ ಬಿಟ್ಟು ಮುಷ್ಕರನಿರತರ ಜೊತೆ ಮಾತುಕತೆ ನಡೆಸಲಿ. ಕೆಎಸ್ಆರ್‌ಟಿಸಿಯನ್ನು ಮುಳುಗುತ್ತಿರುವ ಹಡಗು ಎಂದು ಸಚಿವರು ಹೇಳಿರುವುದು ಸರಿಯಲ್ಲ’ ಎಂದು ರಾಮಲಿಂಗಾರೆಡ್ಡಿ ಹೇಳಿದರು.

‘ನಾನು ಮತ್ತು ರೇವಣ್ಣ ಇಬ್ಬರೂ ಸಾರಿಗೆ ಸಚಿವರಾಗಿದ್ದೆವು. ನಾನು ಸಾರಿಗೆ ಸಚಿವನಾಗಿದ್ದಾಗ ವೇತನ ಬಡ್ತಿ ವಿಚಾರವಾಗಿ ಪ್ರತಿಭಟನೆ ನಡೆದಿತ್ತು. ಶೇ 15ರಷ್ಟು ಏರಿಕೆ ಕೇಳಿದಾಗ, ಶೇ 8ರಷ್ಟು ಕೊಡುವುದಾಗಿ ಹೇಳಿದೆವು. ಮಾತುಕತೆ ನಡೆಸಿ ಶೇ 12.5 ಮಾಡಿದ್ದೆವು’ ಎಂದರು.

‘ಖಾಸಗಿವರು ಲಾಭ ಇದ್ದರೆ ಮಾತ್ರ ಬಸ್ ಓಡಿಸುತ್ತಾರೆ. ಆದರೆ, ಸಾರಿಗೆ ಇಲಾಖೆ ಹಾಗಲ್ಲ. ಇಲ್ಲಿ ಶೇ 40ರಷ್ಟು ಬಸ್‌ಗಳಿಂದ ನಷ್ಟ ಆಗುತ್ತದೆ. ಆದರೂ ಜನರ ಅನುಕೂಲಕ್ಕಾಗಿ ನಡೆಸಬೇಕಾಗುತ್ತದೆ. ಸಾರಿಗೆ ಇಲಾಖೆಯಲ್ಲಿ ಶೇ 80ರಷ್ಟು ನೋ ಲಾಸ್ ಅಥವಾ ನೋ ಪ್ರಾಫಿಟ್’ ಎಂದರು.

ರೇವಣ್ಣ ಮಾತನಾಡಿ, ‘ಕಳೆದ ಬಾರಿ ಸಾರಿಗೆ ನೌಕರರು ಮುಷ್ಕರ ನಡೆಸಿದಾಗಲೇ ಸಮಸ್ಯೆ ಬಗೆಹರಿಸಬಹುದಿತ್ತು. ಆದರೆ, ಹಟಮಾರಿ ಮುಖ್ಯಮಂತ್ರಿ ಹಾಗೂ ಅನನುಭವಿ ಸಚಿವರಿಂದ ಇಂಥ ಸ್ಥಿತಿ ನಿರ್ಮಾಣ ಆಗಿದೆ. ಕೆಎಸ್ಆರ್‌ಟಿಸಿ ಇರಬಾರದು ಎನ್ನುವುದು ಬಿಜೆಪಿಯವರ ಒಳಚಿಂತನೆ’ ಎಂದರು.

‘ಈಶ್ವರಪ್ಪನವರ ಇಲಾಖೆಯ ಹಣ ಹಂಚುವ ಮುಖ್ಯಮಂತ್ರಿಗೆ, ಸಾರಿಗೆ ನೌಕರರ ಸಮಸ್ಯೆ ಬಗೆಹರಿಸಲು ಆಗುದಿಲ್ಲವೇ’ ಎಂದು ಪ್ರಶ್ನಿಸಿದ ರೇವಣ್ಣ, ‘ಸಾರಿಗೆ ಸಚಿವರಿಗೆ ಇಲಾಖೆ ನಡೆಸುವ ಸಾಮರ್ಥ್ಯ ಇಲ್ಲ. ಹಿಂದೆ ಸಾರಿಗೆ ಸಚಿವರಾಗಿದ್ದವರನ್ನು ಕರೆದು ಮಾತನಾಡಲಿ. ಸರ್ವಪಕ್ಷ ಸಭೆ ಕರೆಯಲಿ’ ಎಂದರು.

ಮುಖ್ಯಾಂಶಗಳು

- ಅನನುಭವಿ, ಹಠಮಾರಿಗಳಿಂದ ಸಮಸ್ಯೆ
- ಮುಷ್ಕರನಿರತರ ಜೊತೆ ಮಾತುಕತೆ ನಡೆಸಲಿ
- ಸರ್ಕಾರ ಸರ್ವಪಕ್ಷಗಳ ಸಭೆ ಕರೆಯಲಿ



ಕಲಬುರ್ಗಿಯಲ್ಲಿ ಸೋಮವಾರ ಕೇಂದ್ರ ಬಸ್ ನಿಲ್ದಾಣದಲ್ಲಿ ಕೆಲಸಕ್ಕೆ ಹಾಜರಾದ ಸಾರಿಗೆ ಬಸ್‌ನ ಡ್ರೈವರ್‌ನನ್ನು ತರಾಟೆಗೆ ತೆಗೆದು ಬಸ್ ನಿಂದ ಕೆಳಗಿಳಿಸಿ, ಸಾರಿಗೆ ನೌಕರರ ಕುಟುಂಬದವರು ಪ್ರತಿಭಟನೆ ಮಾಡಿದರು.

ಮುಷ್ಕರಕ್ಕೆ ತಟ್ಟೆ –ಲೋಟದ ಸದ್ದು

ಸೋಮವಾರ ಕಾರ್ಯಾಚರಣೆ ನಡೆಸಿದ ಬಸ್‌ಗಳ ವಿವರ

ಕೆಎಸ್ಆರ್‌ಟಿಸಿ	1,588
ಬಿಎಂಟಿಸಿ	452
ಎನ್‌ಇಕೆಆರ್‌ಟಿಸಿ	700
ಎನ್‌ಡಬ್ಲ್ಯುಕೆಆರ್‌ಟಿಸಿ	495
ನಿಗಮಗಳಿಂದ ಸಂಚರಿಸಿದ ಖಾಸಗಿ ಬಸ್	5,541

ಮಾರ್ಚ್ 30ಗಳ ವೇತನ ಪಡೆದವರು

ನಿಗಮ	ನೌಕರರ ಸಂಖ್ಯೆ
ಕೆಎಸ್ಆರ್‌ಟಿಸಿ	4,256
ಬಿಎಂಟಿಸಿ	960
ಎನ್‌ಡಬ್ಲ್ಯುಆರ್‌ಟಿಸಿ	1,837
ಎನ್‌ಇಕೆಆರ್‌ಟಿಸಿ	3,377

ಒಂದನೇ ಪುಟದಿಂದ

‘ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ನಮ್ಮನ್ನು ವರ್ಗಾವಣೆ ಮಾಡಿ ಎಫ್‌ಐಆರ್ ಹಾಕಿದ್ದಾರೆ. ಅನಂತಸುಬ್ಬರಾವ್ ಅವರಿಂದ ಕಾರ್ಮಿಕರಿಗೆ ಅನ್ಯಾಯವಾಗುತ್ತಿದೆ. ಈ ಸರ್ಕಾರಕ್ಕೆ ಕಣ್ಣಿಲ್ಲ’ಎಂದು ಪಾಲಾಕ್ಷ ಆರೋಪಿಸಿದರು.

ಕೆಲಸಕ್ಕೆ ಬಂದವರಿಗೆ ವೇತನ: ಇತ್ತ, ಸರ್ಕಾರ ಕೂಡ ಮುಷ್ಕರದ ತೀವ್ರತೆ ತಗ್ಗಿಸಲು, ನೌಕರರು ಕೆಲಸಕ್ಕೆ ಮರಳುವಂತೆ ಮಾಡಲು ನಾನಾ ಕಸರತ್ತುಗಳನ್ನು ಮುಂದುವರಿಸಿದೆ.

ನಾಲ್ಕು ನಿಗಮಗಳಲ್ಲಿ ತರಬೇತಿ ನೌಕರರ ವಜಾ ಮತ್ತು ಕೆಲವರು ವರ್ಗಾವಣೆ ಕ್ರಮ ಕೈಗೊಂಡಿದ್ದರೆ, ಕೆಲಸಕ್ಕೆ ಹಾಜರಾದ 10,430 ಚಾಲಕ–ನಿರ್ವಾಹಕರಿಗೆ ಮಾತ್ರ ಮಾರ್ಚ್ ತಿಂಗಳ ವೇತನ ಪಾವತಿಸುವ ಮೂಲಕ ಉಳಿದವರ ಮನವೊಲಿಸುವ ಕಾರ್ಯವನ್ನೂ ಮಾಡುತ್ತಿದೆ.

55 ವರ್ಷದ ಮೇಲ್ಪಟ್ಟವರು ವೈದ್ಯಕೀಯ ಮತ್ತು ದೈಹಿಕ ಕ್ಷಮತೆಯ ಪ್ರಮಾಣಪತ್ರವನ್ನು ನೀಡಲು ಸೋಮವಾರ ಕೊನೆಯ ದಿನ ಎಂದು ಬಿಎಂಟಿಸಿ ಹೇಳಿತ್ತು. ಹೀಗೆ ಪ್ರಮಾಣಪತ್ರ ನೀಡಲು ಬಂದ ಅನೇಕ ಹಿರಿಯ ನೌಕರರ ಮನವೊಲಿಸಿ ಅವರನ್ನು ಕರ್ತವ್ಯಕ್ಕೆ ನಿಯೋಜಿಸಲಾಯಿತು.

ಉಳಿದ ನಿಗಮಗಳ ಉನ್ನತ ಅಧಿಕಾರಿಗಳೂ ಹಲವು ನೌಕರರ ಮನವೊಲಿಸಿ, ಕರ್ತವ್ಯಕ್ಕೆ ಹಾಜರು ಪಡಿಸಲು ಯಶಸ್ವಿಯಾದರು. ಇದರಿಂದ ರಾಜ್ಯದಲ್ಲಿ 3,200ಕ್ಕೂ ಹೆಚ್ಚು ಸರ್ಕಾರಿ ಬಸ್‌ಗಳು ಕಾರ್ಯಾಚರಣೆ ನಡೆಸಲು ಸಾಧ್ಯವಾಯಿತು.

ತೆರಿಗೆ ಪಾವತಿಗೆ ಅವಧಿ ವಿಸ್ತರಣೆ

ಪ್ರಯಾಣಿಕ ವಾಹನಗಳ ತೆರಿಗೆ ಪಾವತಿ ಅವಧಿಯನ್ನು ರಾಜ್ಯ ಸರ್ಕಾರ ವಿಸ್ತರಿಸಿದೆ.

ಮೋಟಾರು ವಾಹನ ತೆರಿಗೆಯನ್ನು ದಂಡರಹಿತವಾಗಿ ಪಾವತಿಸಲು ಏ.30 ಕೊನೆ ದಿನ. ಈ ಮೊದಲು ಏ.15ರೊಳಗೇ ಪಾವತಿಸಬೇಕಿತ್ತು.

ರಾಜ್ಯದ ಎಲ್ಲ ನೋಂದಾಯಿತ ಸಾರಿಗೆ ಪ್ರಯಾಣಿಕ ವಾಹನಗಳಿಗೆ (ಹೊಸ ವಾಹನಗಳ ನೋಂದಣಿಯನ್ನು ಹೊರತುಪಡಿಸಿ) ಇದು ಅನ್ವಯಿಸುತ್ತದೆ.

‘ತಟ್ಟೆ ಹಿಡಿದು ಭಿಕ್ಷಾಟನೆ’

‘ಮುಷ್ಕರ ಪ್ರಾರಂಭವಾಗಿ ಆರು ದಿನ ಕಳೆದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಸಾರಿಗೆ ನೌಕರರು ಮತ್ತು ಕುಟುಂಬದವರು ಮಂಗಳವಾರ (ಏ.13) ತಟ್ಟೆ ಹಿಡಿದು ಭಿಕ್ಷಾಟನೆ ನಡೆಸುವ ಮೂಲಕ ಪ್ರತಿಭಟಿಸಲಿದ್ದಾರೆ’ ಎಂದು ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

‘ಮುಷ್ಕರ ನಿರತ ನೌಕರರ ದುಡಿಮೆಯ ಫಲವಾದ ವೇತನವನ್ನು ಸರ್ಕಾರ ಬಿಡುಗಡೆ ಮಾಡಿಲ್ಲ. ಇದನ್ನು ಖಂಡಿಸಿ, ಯುಗಾದಿ ದಿನವೇ ಭಿಕ್ಷಾಟನೆ ಮಾಡಲಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ನಮಗೆ ಪರಿಹಾರ ದೊರೆಯುವವರೆಗೂ ಮುಷ್ಕರ ಕೈಬಿಡುವ ಪ್ರಶ್ನೆಯೇ ಇಲ್ಲ’ ಎಂದೂ ಅವರು ತಿಳಿಸಿದರು.

‘ಸರ್ಕಾರದ ವಿರುದ್ಧ ಮೊಕದ್ದಮೆ’

‘ಮುಷ್ಕರ ನಿರತ ನೌಕರರ ವೇತನ ತಡೆಹಿಡಿದಿರುವ ರಾಜ್ಯ ಸರ್ಕಾರದ ಕೃತ್ಯ ಸಂವಿಧಾನ ವಿರೋಧಿಯಾಗಿದ್ದು, ಈ ಸಂಬಂಧ ಮಂಗಳವಾರ(ಏ.13) ಸರ್ಕಾರದ ವಿರುದ್ಧವೇ ಸೆಕ್ಷನ್ 406 ಅಡಿ ದೂರು ಸಲ್ಲಿಸಿ, ಪ್ರಮುಖರ ವಿರುದ್ಧ ಮೊಕದ್ದಮೆ ಹೂಡಲಾಗುವುದು’ ಎಂದು ಹಿರಿಯ ವಕೀಲ ಎಸ್. ಬಾಲನ್ ಹೇಳಿದರು.

‘ಕಾರ್ಮಿಕರ ಸಂಖ್ಯೆ ಒಂದು ಸಾವಿರ ಇದ್ದಲ್ಲಿ ಪ್ರತಿ ತಿಂಗಳ 10ನೆ ತಾರೀಖು ಒಳಗಾಗಿ ವೇತನ ಪಾವತಿ ಮಾಡಬೇಕು ಎನ್ನುವ ಕಾನೂನೇ ಇದೆ. ಆದರೆ, ಸಾರಿಗೆ ನೌಕರರ ವಿಷಯದಲ್ಲಿ ಈ ಕಾನೂನು ಸ್ಪಷ್ಟವಾಗಿ ಉಲ್ಲಂಘನೆ ಮಾಡಲಾಗಿದೆ’ ಎಂದರು.

‘ಯಾವುದೇ ಪ್ರತಿಭಟನೆ, ಧರಣಿ ನಡೆಸಿದರೂ ಪೊಲೀಸರು ಮಧ್ಯ ಪ್ರವೇಶಿಸಿ ಬಂಧಿಸುವಂತಿಲ್ಲ. ಮೂರು ವರ್ಷಕ್ಕಿಂತ ಅಧಿಕ ಜೈಲು ಶಿಕ್ಷೆಯ ಅಪರಾಧ ಇದ್ದಲ್ಲಿ ಮಾತ್ರವೇ ಸೆಕ್ಷನ್ 188 ಅಡಿ ಮೊಕದ್ದಮೆಯೂ ದಾಖಲಿಸಬೇಕು’ ಎಂದೂ ಹೇಳಿದರು.

‘ಮುಷ್ಕರ ಬಿಟ್ಟು ಕರ್ತವ್ಯಕ್ಕೆ ಹಾಜರಾಗಿ: ಎಂ.ಪಿ.ನಾಡಗೌಡ

ಹುಬ್ಬಳ್ಳಿ: ‘ಪ್ರಯಾಣಿಕರ ಹಿತ ರಕ್ಷಣೆಗೆ ಬದ್ಧರಾಗಲು ಹಾಗೂ ಸಾರ್ವಜನಿಕ ಸಾರಿಗೆ ಸಂಸ್ಥೆ ಉಳಿಸಲು ಮುಷ್ಕರ ನಿರತ ಸಾರಿಗೆ ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘಟನೆಯ ಗೌರವಾಧ್ಯಕ್ಷ ಡಾ.ಎಂ.ಪಿ. ನಾಡಗೌಡ ವಿನಂತಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ‘70 ವರ್ಷಗಳಿಂದ ರಾಜ್ಯದಲ್ಲಿ ಉತ್ತಮ ಸಾರಿಗೆ ಸೌಲಭ್ಯ ನೀಡುತ್ತ, ಸಾರ್ವಜನಿಕರ ಜೀವನಾಡಿ ಎನ್ನುವ ಹೆಗ್ಗಳಿಕೆಗೆ ಸಾರಿಗೆ ಸಂಸ್ಥೆ ಪಾತ್ರವಾಗಿದೆ. ಸಂಸ್ಥೆಯ ನಾಲ್ಕು ನಿಗಮಗಳು ಕೋವಿಡ್ ಲಾಕ್‌ಡೌನ್‌ನಿಂದ ತೀವ್ರ ನಷ್ಟದಲ್ಲಿತ್ತು. ಚೇತರಿಸಿಕೊಳ್ಳುತ್ತಿದೆ ಎನ್ನುವಷ್ಟರಲ್ಲಿ ಕೋವಿಡ್ ಎರಡನೇ ಅಲೆಯ ಭೀತಿ ಎದುರಾಗಿದೆ. ಈ ನಡುವೆಯೇ ಸಾರಿಗೆ ನೌಕರರ ಕೂಟ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಮುಷ್ಕರ ಸಂಸ್ಥೆಯ ಅಳಿವು, ಉಳಿವಿನ ಬಗ್ಗೆ ಪ್ರಶ್ನೆ ಮೂಡಿಸಿದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ಬೇಡಿಕೆ ಈಡೇರಿಸಿಕೊಳ್ಳಲು ಮುಷ್ಕರವೊಂದೇ ದಾರಿಯಲ್ಲ. ಪ್ರಯಾಣಿಕರೇ ದೇವರು ಎನ್ನುವ ಧ್ಯೇಯ ಹೊಂದಿರುವ ಸಂಸ್ಥೆಗೆ, ಪ್ರಯಾಣಿಕರ ಹಿತಾಸಕ್ತಿಯೇ ಮೊದಲ ಆದ್ಯತೆಯಾಗಬೇಕು. ನಂತರ ನೌಕರರ ಹಿತಾಸಕ್ತಿ ಆಗಿರಬೇಕು. ಆರು ದಿನಗಳಿಂದ ಪ್ರಯಾಣಿಕರು ಅನುಭವಿಸುತ್ತಿರುವ ತೊಂದರೆ ಗಮನಿಸಿದರೆ, ಸಂಸ್ಥೆ ಸಾರ್ವಜನಿಕರ ವಿಶ್ವಾಸ ಉಳಿಸಿಕೊಳ್ಳುವಲ್ಲಿ ಎಡವುತ್ತಿದೆ ಎಂದೆನಿಸುತ್ತಿದೆ’ ಎಂದು ಹೇಳಿದ್ದಾರೆ.

‘ವೇತನ ಪರಿಷ್ಕರಣೆಗೆ ಆಗ್ರಹಿಸಿ ನಡೆಸುತ್ತಿರುವ ಮುಷ್ಕರಕ್ಕೆ ಇದು ಸರಿಯಾದ ಸಮಯವಲ್ಲ. ಮುಖ್ಯಮಂತ್ರಿ, ಸಾರಿಗೆ ಸಚಿವರು ನೌಕರರ ಹಿತಾಸಕ್ತಿ ಕಾಪಾಡಲು ಸೂಕ್ತ ನಿರ್ಧಾರ ಕೈಗೊಂಡು ಮಾತುಕತೆ ಮೂಲಕ ಮುಷ್ಕರಕ್ಕೆ ಅಂತ್ಯ ಹಾಡಬೇಕು’ ಎಂದು ಅವರು ಕೋರಿದ್ದಾರೆ.

45 ಸಿಬ್ಬಂದಿ ವಜಾ, 173 ಮಂದಿ ವರ್ಗ

ಕಲಬುರ್ಗಿ: ‘ಈವರೆಗೆ ಕರ್ತವ್ಯಕ್ಕೆ ಹಾಜರಾಗದ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ 45 ಸಿಬ್ಬಂದಿ ವಜಾಗೊಳಿಸಲಾಗಿದೆ. 173 ಮಂದಿಯನ್ನು ವಿವಿಧೆಡೆ ವರ್ಗ ಮಾಡಲಾಗಿದೆ’ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ಕೂರ್ಮಾರಾವ್ ತಿಳಿಸಿದ್ದಾರೆ.

ಶನಿವಾರದಿಂದಲೇ ಕರ್ತವ್ಯಕ್ಕೆ ಹಾಜರಾದ 7,335 ಸಿಬ್ಬಂದಿಗೆ ಸೋಮವಾರ ಮಾರ್ಚ್ ತಿಂಗಳ ವೇತನ ನೀಡಲಾಗಿದ್ದು, ಒಟ್ಟು ₹ 15 ಕೋಟಿ ಪಾವತಿಸಲಾಗಿದೆ. ಸೋಮವಾರ ಒಟ್ಟು 506 ಬಸ್‌ಗಳನ್ನು ಓಡಿಸಲಾಗಿದೆ. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಕ್ಕೆ ಕಲಬುರ್ಗಿಯಲ್ಲಿ ಇಬ್ಬರು ಹಾಗೂ ಕೊಪ್ಪಳದಲ್ಲಿ ಇಬ್ಬರು ಸಿಬ್ಬಂದಿ ಮೇಲೆ ಪ್ರಕರಣ ದಾಖಲಿಸಲಾಗಿದೆ.

‘ಒಳ್ಳೆಯ ಶಾಲೆಯಾದರೆ ಕನ್ನಡ ಮಾಧ್ಯಮಕ್ಕೆ ಜೈ’

ಒಂದನೇ ಪುಟದಿಂದ

ಸಮೀಕ್ಷೆಯ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವ ಜೊತೆಗೆ ಕೆಲ ಪೋಷಕರು ಟ್ವೀಟ್‌ನಲ್ಲಿ ಅಭಿಪ್ರಾಯಗಳನ್ನೂ ಹಂಚಿಕೊಂಡಿದ್ದರು. ಕನ್ನಡ ಮಾಧ್ಯಮ ಶಿಕ್ಷಣದ ಮಹತ್ವದ ಕುರಿತ ಸ್ವಾರಸ್ಯಕರ ಚರ್ಚೆಗೂ ಈ ಸಮೀಕ್ಷೆಯು ವೇದಿಕೆ ಕಲ್ಪಿಸಿತು.

ಮನೆಯವರು ಒಪ್ಪದ ಕಾರಣಕ್ಕೆ ಕೆಲವು ಪೋಷಕರು ಮಕ್ಕಳನ್ನು ಕನ್ನಡ ಶಾಲೆಗಳಿಗೆ ಸೇರಿಸುತ್ತಿಲ್ಲ. ಇನ್ನು ಕೆಲವರು ‘ಕನ್ನಡ ಪಠ್ಯಗಳು, ಅದರಲ್ಲೂ ಗಣಿತ ಮತ್ತು ವಿಜ್ಞಾನ ಪಠ್ಯಗಳಲ್ಲಿ ಬಳಸಲಾಗಿರುವ ಕ್ಲಿಷ್ಟಕರವಾದ ಪದಗಳಿಂದ ಮಕ್ಕಳಿಗೆ ಸಮಸ್ಯೆ ಆಗುತ್ತಿದೆ’ ಎಂಬ ಅಭಿಪ್ರಾಯ ಹೊಂದಿದ್ದಾರೆ. ಮತ್ತೆ ಕೆಲವರು ಶಾಲೆಯ ಆಯ್ಕೆ ಕುರಿತ ಗೊಂದಲದಲ್ಲಿದ್ದಾರೆ.

ಕನ್ನಡ ಮಾಧ್ಯಮದ ಜೊತೆ ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಕಲಿಸುವ ಅಗತ್ಯದ ಬಗ್ಗೆಯೂ ಕೆಲವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

‘ಬೆಂಗಳೂರಿನ ಕನ್ನಡ ಶಾಲೆಯಲ್ಲಿ ಸ್ಪೋಕನ್ ಇಂಗ್ಲಿಷ್ ತರಗತಿಗಳಿವೆಯೇ. ಇಂಗ್ಲಿಷ್ ಬಾರದೇ ಇದ್ದರೆ ಸಹವರ್ತಿಗಳಿಂದ ಎದುರಾಗುವ ಒತ್ತಡಕ್ಕೆ ಮಕ್ಕಳು ಒಳಗಾಗಬಾರದು. ಈ ಸಮಸ್ಯೆ ಪರಿಹಾರವಾದರೆ ಸೇರಿಸಲು ಅಡ್ಡಿ ಇಲ್ಲ’ ಎಂದು ಗುರುಪ್ರಸಾದ್ ತಿಮ್ಮಾಪುರ ತಿಳಿಸಿದ್ದಾರೆ.

‘ಕನ್ನಡ ಮಾಧ್ಯಮದಲ್ಲಿ ಮಕ್ಕಳನ್ನು ಓದಿಸಿದರೆ ಹೊಸ ಜಗತ್ತಿನ ಪೈಪೋಟಿಯಲ್ಲಿ ಅವರು ಹಿಂದೆ ಬೀಳಬಹುದು’ ಎಂದು ಸಿ. ವೀರೇಂದ್ರ ಆತಂಕ ತೋಡಿಕೊಂಡಿದ್ದಾರೆ.

ಇದನ್ನು ಒಪ್ಪದ ಅನೇಕರು, ‘ಇಂತಹ ಆತಂಕ ಅನಗತ್ಯ. ಕನ್ನಡ ಮಾಧ್ಯಮದಲ್ಲಿ ಕಲಿತ ಸಾವಿರಾರು ಮಂದಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲೂ ಯಶಸ್ವಿಯಾಗಿದ್ದಾರೆ’ ಎಂದು ಉದಾಹರಣೆಗಳನ್ನು ನೀಡಿದ್ದಾರೆ.

‘ಒಳ್ಳೆಯ ಶಾಲೆ ಇರಲಿ, ಬಿಡಲಿ ನಾನು ಕನ್ನಡ ಮಾಧ್ಯಮದಲ್ಲೇ ಮಕ್ಕಳನ್ನು ಓದಿಸುತ್ತೇನೆ’ ಎಂದು ಮೋಹನ ಬಿ.ಟಿ.ದೇವನೂರು ತಿಳಿಸಿದ್ದಾರೆ. ತಮ್ಮ ಮಕ್ಕಳನ್ನು ಕನ್ನಡ ಶಾಲೆಯಲ್ಲೇ ಕಲಿಸುತ್ತಿರುವುದಾಗಿ ಅನೇಕರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

‘ಮಕ್ಕಳು ಆಲೋಚಿಸುವ ಹಾಗೂ ಕನಸು ಕಾಣುವ ತಾಯ್ನುಡಿಯಲ್ಲೇ ಪ್ರಾಥಮಿಕ ಶಿಕ್ಷಣ ಸಿಗಬೇಕು. ಇದು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲೇ ಓದಿಸಲು ಇಷ್ಟೊಂದು ಪ್ರಮಾಣದಲ್ಲಿ ಪೋಷಕರು ಒಲವು ಹೊಂದಿರುವುದು ಅಚ್ಚರಿಯ ಜೊತೆ ಸಂತಸದ ವಿಚಾರ. ಬೆಂಗಳೂರಿನಲ್ಲಿ ಕನ್ನಡ ಮಾಧ್ಯಮದ ಪಾಲಕರ ಗುಂಪೊಂದನ್ನು ಕಟ್ಟಲು ಇದು ನಾಂದಿಯಾಗಲಿ’ ಎಂದು ‘ಮುನ್ನೋಟ’ದ ವಸಂತ ಶೆಟ್ಟಿ ‘ಪ್ರಜಾವಾಣಿ’ಗೆ ತಿಳಿಸಿದರು.

ಉತ್ತಮ ಕನ್ನಡ ಶಾಲೆಗಳ ಪಟ್ಟಿ ತಯಾರಿ

ಮುನ್ನೋಟ ಸಂಸ್ಥೆಯು, ಈಗಿನ ಕಾಲದ ಅಗತ್ಯಗಳಿಗೆ ತಕ್ಕಂತೆ ಕನ್ನಡ ಮಾಧ್ಯಮದಲ್ಲೇ ಗುಣಮಟ್ಟದ ಶಿಕ್ಷಣ ನೀಡುವ ಶಾಲೆಗಳು ಎಲ್ಲೆಲ್ಲಿವೆ ಎಂಬುದನ್ನು ಗುರುತಿಸಿ ಈ ಬಗ್ಗೆ ಆನ್‌ಲೈನ್‌ನಲ್ಲಿ (https://kannadamaadhyama.wordpress.com) ಮಾಹಿತಿ ಹಂಚಿಕೊಳ್ಳುತ್ತಿದೆ.

‘ಉತ್ತಮ ಕನ್ನಡ ಶಾಲೆಗಳ ಬಗ್ಗೆ ತಿಳಿದಿರುವವರು ಈ ಬಗ್ಗೆ ಮಾಹಿತಿ ಹಂಚಿಕೊಳ್ಳಬಹುದು. ಮಕ್ಕಳನ್ನು ಕನ್ನಡ ಶಾಲೆಗೆ ಸೇರಿಸಲು ಆಸಕ್ತಿ ಹೊಂದಿರುವ ಪೋಷಕರ ಗಮನಕ್ಕೆ ಇದನ್ನು ತರಲು ಅನುಕೂಲವಾಗುತ್ತದೆ’ ಎಂದು ವಸಂತ ಶೆಟ್ಟಿ ತಿಳಿಸಿದರು.

ಮಾಹಿತಿ ಹಂಚಿಕೊಳ್ಳಲು ಇಮೇಲ್: prashant@munnota.com ಅಥವಾ vasant@munnota.com

ಕನ್ನಡ ಶಾಲೆ ಮಕ್ಕಳಿಗೆ ಇಂಗ್ಲಿಷ್ ತರಬೇತಿ

ಕನ್ನಡ ಮಾಧ್ಯಮದಲ್ಲಿ ಕಲಿಯುವ ಮಕ್ಕಳಿಗೆ ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಕಲಿಸುವ ಪ್ರಯತ್ನದಲ್ಲೂ ಮುನ್ನೋಟ ಸಂಸ್ಥೆ ತೊಡಗಿಸಿಕೊಂಡಿದೆ. ವೈಜ್ಞಾನಿಕ ಮಾಹಿತಿಗಳ ವಿಡಿಯೊಗಳನ್ನು ಕನ್ನಡಕ್ಕೆ ಡಬ್ ಮಾಡಿ ‘ತಿಳಿ’ ಯೂಟ್ಯೂಬ್ ಚಾನೆಲ್ ಮೂಲಕ ಒದಗಿಸುತ್ತಿದೆ.

‘ನಗರದ ವಿವಿಧ ಕನ್ನಡ ಶಾಲೆಗಳ ವಿದ್ಯಾರ್ಥಿಗಳಿಗೆ ಆರು ತಿಂಗಳು ಇಂಗ್ಲಿಷ್ ತರಬೇತಿ ನೀಡಲು ವ್ಯವಸ್ಥೆ ಮಾಡಿದ್ದೇವೆ. ಆನ್‌ಲೈನ್ ಮಾಧ್ಯಮ ಬಳಸಿ ರಾಜ್ಯದ ಬೇರೆ ಕಡೆಯ ಕನ್ನಡ ಶಾಲೆಗಳ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ತರಬೇತಿ ನೀಡುವ ಚಿಂತನೆಯೂ ಇದೆ’ ಎಂದು ವಸಂತ ಶೆಟ್ಟಿ ತಿಳಿಸಿದರು.

ನಿಧನ ವಾರ್ತೆ

ರಂಗಕರ್ಮಿ ಎಲ್.ಬಿ.ಕೆ. ಆಲ್ದಾಳ



ಎಲ್.ಬಿ.ಕೆ. ಆಲ್ದಾಳ

ಶಹಾಪುರ (ಯಾದಗಿರಿ ಜಿಲ್ಲೆ): ರಂಗಕರ್ಮಿ ಲಾಲ್ ಮಹ್ಮದ ಬಂದೇನವಾಜ ಖಲೀಫ್ ಆಲ್ದಾಳ (ಎಲ್.ಬಿ.ಕೆ. ಆಲ್ದಾಳ) ಸೋಮವಾರ ಅನಾರೋಗ್ಯದಿಂದ ಇಲ್ಲಿ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು.

ವಿಜಯಪುರ ಜಿಲ್ಲೆ ಬನ್ನಟ್ಟಿ ಗ್ರಾಮದಲ್ಲಿ ಜನಿಸಿದ್ದ ಅವರು, ತಾಯಿಯ ತವರು ಮನೆ ಕಲಬುರ್ಗಿ ಜಿಲ್ಲೆ ಯಡ್ರಾಮಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ನೆಲೆಸಿದ್ದರು.

ಎರಡು ದಿನಗಳಿಂದ ಶಹಾಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ.

ಅವರ ಅಂತ್ಯಕ್ರಿಯೆ ಮಂಗಳವಾರ (ಏ.13) ಮಧ್ಯಾಹ್ನ 1ಕ್ಕೆ ಮಳ್ಳಿ ಗ್ರಾಮದಲ್ಲಿ ನೆರವೇಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕರ್ನಾಟಕ ರಾಜ್ಯೋತ್ಸವ, ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರಾಗಿದ್ದ ಅವರು 125ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಹೆಜ್ಜೆಗೊಂದು ಹೊಸ ಯುಗಾದಿ, ಚೆಲುವು ನಮ್ಮ ಜೀವನ!
ನಮ್ಮ ಹಾದಿಯೋ ಅನಾದಿ, ಪಯಣವೆಲ್ಲ ಪಾವನ
-ಕೆ.ಎಸ್.ನರಸಿಂಹಸ್ವಾಮಿ

ಹಿಂಸೆ ಹಿಂದೆ ಸರಿಯಲಿ ಶಾಂತಿ, ಸೌಹಾರ್ದ ಮುನ್ನೆಲೆಗೆ ಬರಲಿ

ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಕೋಮು ಹಿಂಸೆಯ ದಳ್ಳುರಿಯಿಂದ ಹೊರಬರುವ ಮೊದಲೇ ರಾಜಕೀಯ ಹಿಂಸಾಚಾರದ ಬೀಜ ಬಿತ್ತನೆಗೆ ಒಳಗಾದ ರಾಜ್ಯ ಪಶ್ಚಿಮ ಬಂಗಾಳ. 1960ರ ದಶಕದ ಕೊನೆಯ ಭಾಗದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಹಿಡಿತವು ಸಡಿಲವಾಗತೊಡಗಿತು. ಸಿಪಿಎಂ ಪ್ರವರ್ಧಮಾನಕ್ಕೆ ಬಂತು. ಅದರ ಜತೆಗೇ ಕಾಂಗ್ರೆಸ್ ಮತ್ತು ಸಿಪಿಎಂ ಕಾರ್ಯಕರ್ತರ ನಡುವೆ ಮಾರಾಮಾರಿ ಸಾಮಾನ್ಯ ಎಂಬಂತಾಯಿತು. ಟಿಎಂಸಿ ಮುನ್ನೆಲೆಗೆ ಬರುವುದರೊಂದಿಗೆ 2000ನೇ ಇಸವಿಯ ಬಳಿಕ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಸೊರಗಿ ಸೊರಗಿತು. ಹೊಡೆದಾಟದಲ್ಲಿ ಕಾಂಗ್ರೆಸ್ ಸ್ಥಾನವನ್ನು ಟಿಎಂಸಿ ಪಡೆದುಕೊಂಡಿತು. 2011ರಲ್ಲಿ ಟಿಎಂಸಿ ಅಧಿಕಾರಕ್ಕೆ ಬಂದ ಬಳಿಕ ಬಿಜೆಪಿಯು ಇನ್ನಷ್ಟು ಧ್ರುವೀಕರಣವಾಯಿತು. ಈಗ ಸಿಪಿಎಂ ನೆಲಕಚ್ಚಿದೆ, ಬಿಜೆಪಿ ಬಲಗೊಂಡಿದೆ. ಹಾಗಾಗಿ, ಟಿಎಂಸಿ ಜತೆಗೆ ಕುಸ್ತಿಯಾಡುವ ಸರದಿ ಬಿಜೆಪಿಯದ್ದಾಗಿದೆ. ಈ ರಾಜ್ಯದ ವಿಧಾನಸಭಾ ಚುನಾವಣೆಯನ್ನು ಎಂಟು ಹಂತಗಳಲ್ಲಿ ನಡೆಸಲು ಚುನಾವಣಾ ಆಯೋಗವು ನಿರ್ಧರಿಸುವುದಕ್ಕೆ ಈ ರೀತಿಯ ಹಿಂಸೆಯ ಹಿನ್ನೆಲೆಯೇ ಕಾರಣ ಆಗಿದ್ದಿರಬಹುದು. ಆದರೂ ಶನಿವಾರ ನಡೆದ ನಾಲ್ಕನೇ ಹಂತದ ಮತದಾನದ ಸಂದರ್ಭದಲ್ಲಿ ಎರಡು ಘಟನೆಗಳಲ್ಲಿ ಐವರು ಮೃತಪಟ್ಟಿದ್ದಾರೆ. ಕೂಚ್‌ಬಿಹಾರ್ ಜಿಲ್ಲೆಯ ಸಿತಾಲ್‌ಕುಚಿ ಕ್ಷೇತ್ರದ ಎರಡು ಮತಗಟ್ಟೆಗಳು ಹಿಂಸಾಚಾರಕ್ಕೆ ಸಾಕ್ಷಿಯಾಗಿವೆ. ಇದರಲ್ಲಿ ರಾಜಕೀಯ ವೈಷಮ್ಯಕ್ಕೆ ಒಬ್ಬ ವ್ಯಕ್ತಿ ಬಲಿಯಾದರೆ, ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಗುಂಡೇಟಿಗೆ ಇತರ ನಾಲ್ವರು ಜೀವ ತೆತ್ತಿದ್ದಾರೆ. ಬಂದೂಕು ಕಸಿದುಕೊಳ್ಳಲು ಬಂದ ಜನರ ಗುಂಪಿನ ಮೇಲೆ 'ಸ್ವರಕ್ಷಣೆ'ಗಾಗಿ ಗುಂಡು ಹಾರಿಸಲಾಯಿತು ಎಂಬುದು ಸಿಐಎಸ್‌ಎಫ್‌ನ ಸ್ಪಷ್ಟೀಕರಣ. ಬಾಲಕನೊಬ್ಬನ ಮೇಲೆ ಸಿಐಎಸ್‌ಎಫ್ ತಂಡವು ಹಲ್ಲೆ ನಡೆಸಿತು. ಇದರಿಂದ ಕೆರಳಿದ ಸ್ಥಳೀಯರು ಸಂಘರ್ಷಕ್ಕೆ ಇಳಿದರು ಎಂದೂ ಹೇಳಲಾಗುತ್ತಿದೆ. ಆದರೆ, ಕೇಂದ್ರೀಯ ಪಡೆಯು ಜನರನ್ನು ನಿಭಾಯಿಸುವಲ್ಲಿ ಹೆಚ್ಚಿನ ಸಂಯಮ ತೋರಬೇಕಿತ್ತು ಎಂಬ ವಾದದಲ್ಲಿ ಹುರುಳಿಲ್ಲದೆ ಇಲ್ಲ. ಕೆರಳಿದ ಜನರನ್ನು ಚದುರಿಸಲು ತಮಗೆ ಲಭ್ಯವಿದ್ದ ಇತರ ಅವಕಾಶಗಳನ್ನು ಸಿಐಎಸ್‌ಎಫ್ ಬಳಸಿಕೊಂಡಿದೆಯೇ, ಹಿಂಸಾಚಾರಕ್ಕೆ ಕಾರಣ ಯಾರು ಎಂಬ ಬಗ್ಗೆ ತನಿಖೆ ಆಗಬೇಕಿದೆ.



ಕೆರಳಿಸುವ ಮಾತುಗಳ ಮೂಲಕ ಇಡೀ ಪಶ್ಚಿಮ ಬಂಗಾಳವನ್ನು ಅಗ್ನಿಪರ್ವತದ ರೀತಿಯಲ್ಲಿ ಪರಿವರ್ತಿಸಿದ್ದರ ಜವಾಬ್ದಾರಿಯನ್ನು ಅಲ್ಲಿನ ಎಲ್ಲ ರಾಜಕೀಯ ಪಕ್ಷಗಳ ನಾಯಕರು ಹೊತ್ತುಕೊಳ್ಳಬೇಕು

ವೇದನೆ ಮತ್ತು ವಿಷಾದಕ್ಕೆ ಕಾರಣವಾಗಬೇಕಿದ್ದ ಈ ಸಾವನ್ನು ಬಿಜೆಪಿ ಮತ್ತು ಟಿಎಂಸಿ ರಾಜಕೀಯ ಮೇಲಾಟಕ್ಕೆ ಬಳಸಿಕೊಳ್ಳುತ್ತಿರುವುದು ನಾಚಿಕೆಗೇಡು. ರಾಜಕೀಯ ಹಿಂಸಾಚಾರದ ಇತಿಹಾಸ ರಾಜ್ಯಕ್ಕೆ ಇದೆ ಎಂಬ ಕಾರಣಕ್ಕೆ ಅದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದೇನಿಲ್ಲ. ಹಿಂಸೆ ಮತ್ತು ದ್ವೇಷವನ್ನು ಬದಿಗಿಟ್ಟು ಜನರಲ್ಲಿ ಪ್ರೀತಿ ಬಿತ್ತುವುದೇ ನಿಜವಾದ ನಾಯಕತ್ವ ಎಂಬುದರ ಅತಿ ದೊಡ್ಡ ನಿದರ್ಶನವಾಗಿ ಗಾಂಧೀಜಿ ನಮ್ಮ ಮುಂದಿದ್ದಾರೆ. ಆದರೆ, ಅಧಿಕಾರದಾಹದಿಂದ ಕುರುಡಾಗಿರುವ ನಾಯಕರಿಗೆ ಇದು ಕಾಣಿಸದು. ಕೇಂದ್ರದಲ್ಲಿ ವ್ಯಾಪಕವಾಗಿ ನಿಯೋಜನೆಗೊಂಡಿರುವ 'ಕೇಂದ್ರೀಯ ಭದ್ರತಾ ಪಡೆ'ಗಳು ಬಿಜೆಪಿ ಪರವಾಗಿ ಕೆಲಸ ಮಾಡುತ್ತಿವೆ, ಅವರಿಗೆ ಮುತ್ತಿಗೆ ಹಾಕಿ ಎಂದು ಮುಖ್ಯಮಂತ್ರಿ ಮತ್ತು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಪದೇ ಪದೇ ಹೇಳಿದ್ದಾರೆ. 'ಮುತ್ತಿಗೆ ಹಾಕಿ' ಎನ್ನುವುದು ಹೊಣೆ ಮರೆತ ಹೇಳಿಕೆ. ಇದನ್ನು ಪ್ರಚೋದನೆ ಎಂದು ಚುನಾವಣಾ ಆಯೋಗವು ಪರಿಗಣಿಸಿರುವುದರಲ್ಲಿ ಅರ್ಥ ಇದೆ. ಆದರೆ, ಮಮತಾ ಅವರ ಹೇಳಿಕೆಗೆ ಸಕಾರಣ ಇದೆಯೇ ಎಂಬುದನ್ನು ಪರಿಶೀಲಿಸುವುದು ತನ್ನ ಹೊಣೆ ಎಂಬುದನ್ನು ಆಯೋಗವು ಮರೆತಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಂತಹ ಅತ್ಯಂತ ಹೊಣೆಗಾರಿಕೆಯ ಸ್ಥಾನದಲ್ಲಿರುವವರು ಕೂಡ ಪ್ರಚೋದನಕಾರಿಯಾಗಿ ಮಾತನಾಡಿದ್ದಕ್ಕೆ ಈ ಚುನಾವಣಾ ಪ್ರಚಾರವು ಸಾಕ್ಷಿಯಾಯಿತು. 'ನಾಟಿ ಬಾಯ್‌ಗಳು ಸರಿಯಾಗಿ ವರ್ತಿಸದಿದ್ದರೆ ಕೂಚ್‌ಬಿಹಾರದಂತಹ ಇನ್ನಷ್ಟು ಘಟನೆಗಳು ನಡೆದಾವು, ಇನ್ನೂ ಹೆಚ್ಚು ಜನರು ಸಾಯುತ್ತಾರೆ' ಎಂದು ಬಿಜೆಪಿಯ ಪಶ್ಚಿಮ ಬಂಗಾಳ ಘಟಕದ ಅಧ್ಯಕ್ಷ ದಿಲೀಪ್ ಘೋಷ್ ಹೇಳಿದ್ದು ಏನನ್ನು ಸೂಚಿಸುತ್ತದೆ? ಪ್ರತಿ ದಿನವೂ ಕೆರಳಿಸುವ ಮಾತುಗಳನ್ನು ಆಡಿ ಇಡೀ ರಾಜ್ಯವನ್ನು ಅಗ್ನಿಪರ್ವತದ ರೀತಿಯಲ್ಲಿ ಪರಿವರ್ತಿಸಿದ್ದರ ಜವಾಬ್ದಾರಿಯನ್ನು ಅಲ್ಲಿನ ಎಲ್ಲ ರಾಜಕೀಯ ಪಕ್ಷಗಳ ನಾಯಕರು ಹೊತ್ತುಕೊಳ್ಳಲೇಬೇಕು. ಪ್ರಜಾಪ್ರಭುತ್ವ ಎಂಬುದು ಯಾರಿಗೆ ಹೆಚ್ಚು ಹಿಂಸಾಚಾರ ನಡೆಸುವ ತಾಕತ್ತು ಇದೆ ಎಂಬುದರ ಪರೀಕ್ಷೆ ಅಲ್ಲ. ಜನರು ವಿವೇಚನೆಯಿಂದ ಮತ ಚಲಾಯಿಸಲು ಸಾಧ್ಯವಾಗುವಂತೆ ಇನ್ನುಳಿದ ನಾಲ್ಕು ಹಂತಗಳ ಮತದಾನವನ್ನು ಶಾಂತಿಯಿಂದ, ಮುಕ್ತವಾಗಿ ನಡೆಸುವ ದಿಸೆಯಲ್ಲಿ ಆಯೋಗ ಮತ್ತು ರಾಜಕೀಯ ಪಕ್ಷಗಳು ಗಮನ ಹರಿಸಬೇಕಿದೆ.

ಛಾಯಾಗ್ರಹಣದ ಬಗೆಗಿನ ಪ್ರೀತಿಯಿಂದ ಮನೆಗೆ ಕ್ಯಾಮೆರಾ ರೂಪ, ಮಕ್ಕಳಿಗೆ ಕ್ಯಾಮೆರಾ ಕಂಪನಿಗಳ ಹೆಸರು!

ಕಾವ್ಯ–ಕಲೆ: ಇದು 'ಪರ್ಯಾಯ' ಪರ್ವ



ಪಡಸಾಲೆ

ರಘುನಾಥ ಚ.ಹ.

'ತನ್ನ ಆದರ್ಶ ರಾಜ್ಯದಲ್ಲಿ ಕವಿಗಳಿಗೆ ಸ್ಥಾನವಿಲ್ಲ' ಎಂದು ಗ್ರೀಕ್ ತತ್ವಶಾಸ್ತ್ರಜ್ಞ ಪ್ಲೇಟೊ ಉದ್ಗರಿಸಿದನಷ್ಟೆ. ಹಾಗಾದರೆ, ಆದರ್ಶ ರಾಜ್ಯದಲ್ಲಿ ಯಾರಿಗೆ ಸ್ಥಾನ? ಅದಕ್ಕೆ ಉತ್ತರವನ್ನು ಕಂಡುಕೊಳ್ಳಲು ನಮ್ಮ ವಿಶ್ವವಿದ್ಯಾಲಯ-ಗಳು ದಯಪಾಲಿಸುತ್ತಿರುವ ಗೌರವ ಡಾಕ್ಟರೇಟ್‌ಗಳತ್ತ ನೋಡಬೇಕು. ಹಂಪಿಯ 'ಕನ್ನಡ ವಿಶ್ವವಿದ್ಯಾಲಯ' ಸಕ್ಕರೆ ಕಾರ್ಖಾನೆ ಮಾಲೀಕರೊಬ್ಬರಿಗೆ ನೀಡಿರುವ 'ನಾಡೋಜ' ಗೌರವ ಹಾಗೂ ದಾವಣಗೆರೆ ವಿಶ್ವವಿದ್ಯಾ-ಲಯ ತನ್ನ ಜಿಲ್ಲೆಯ ಸಂಸದರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿರುವುದು, ಆದರ್ಶ ರಾಜ್ಯದಲ್ಲಿ ಯಾರಿಗೆ ಸ್ಥಾನ ಎನ್ನುವುದಕ್ಕೆ ಉತ್ತರಗಳಂತಿವೆ.

ಪ್ಲೇಟೊನ ಆದರ್ಶ ರಾಜ್ಯಕ್ಕೂ ನಮ್ಮ ಕಾಲದ 'ಆದರ್ಶ ಸರ್ಕಾರ'ಕ್ಕೂ ಒಂದು ವ್ಯತ್ಯಾಸವಿದೆ. ಅದೆಂದರೆ, ಈಗ ಆಡಳಿತದ ಚುಕ್ಕಾಣಿ ಹಿಡಿದವರು ಪ್ಲೇಟೊನಂತೆ 'ನಮ್ಮ ಆಡಳಿತದಲ್ಲಿ ಕವಿಗಳಿಗೆ ಸ್ಥಾನವಿಲ್ಲ' ಎಂದೇನೂ ಹೇಳುತ್ತಿಲ್ಲ. ಸಂಸ್ಕೃತಿಯ ಬಗ್ಗೆ ಅತೀವ ಕಾಳಜಿಯುಳ್ಳ ಇಂದಿನ ಪ್ರಭುತ್ವ, 'ಕವಿ' ಮತ್ತು 'ಕಾವ್ಯ'ದ ವ್ಯಾಖ್ಯೆಯನ್ನೇ ಬದಲಾಯಿಸಲು ಹೊರಟಿದೆ. ಈವರೆಗೆ ಯಾರು ನಿಜವಾದ ಕವಿ ಎಂದು ಸಮಾಜ ನಂಬಿಕೊಂಡಿದ್ದಿತೋ ಯಾವುದು ನಿಜವಾದ ಕಾವ್ಯ ಎಂದು ಗೌರವಿಸುತ್ತಿದ್ದಿತೋ ಆ ಜಾಗದಲ್ಲಿ ಪರ್ಯಾಯವನ್ನು ಬಿಂಬಿಸುವ ಮೂಲಕ ಹೊಸ ಸಂಸ್ಕೃತಿಯನ್ನೇ ರೂಪಿಸಲು ಪ್ರಯತ್ನಿಸುತ್ತಿದೆ. ಉದಾಹರಣೆ ನೋಡಿ: ಸಹೃದಯರ ಗಮನಕ್ಕೆ ಬಾರದ ಅಥವಾ ಗಂಭೀರವಾಗಿ ಪರಿಗಣಿಸದ ಕೃತಿಯೊಂದಕ್ಕೆ ದೇಶದ ಅತ್ಯುನ್ನತ ಸಾಹಿತ್ಯ ಗೌರವ ಲಭಿಸುತ್ತದೆ. ಆ ಮೂಲಕ 'ಇಲ್ಲಿದ್ದಾನೆ ನೋಡಿ ನಿಜವಾದ ಕವಿ; ಇಲ್ಲಿದೆ ನೋಡಿ ಮಹಾಕಾವ್ಯ' ಎಂದು ಸಮಾಜಕ್ಕೆ ಸಂದೇಶ ರವಾನಿಸಲಾಗುತ್ತದೆ. 'ಇರುವ ಕೋಗಿಲೆಯ ಬಡಿ, ಕೊಲ್ಲು' ಎನ್ನುವ ಕವಿ ಗೋಪಾಲಕೃಷ್ಣ ಅಡಿಗರ ಕಾವ್ಯದ ಸಾಲನ್ನು ನಿಜಗೊಳಿಸಲಾಗುತ್ತದೆ ಹಾಗೂ ಹುಳುಕು ತೊಗಟೆಗೆ ಅಪರಂಜಿ ತಗಡನ್ನು ಹೊದಿಸಲಾಗುತ್ತದೆ. ಹೀಗೆ ಬಡಿಯುವ ಹಾಗೂ ಅಪರಂಜಿ ತಗಡನ್ನು ಹೊದಿಸುವ ಕೆಲಸವನ್ನು ಯಾರೋ ಹುಂಬರಿಂದ ಮಾಡಿಸದೆ, ನಿಜವಾದ 'ಕವಿ'ಗಳಿಂದಲೇ ಮಾಡಿಸಲಾಗುತ್ತದೆ.

ಕವಿಯೊಬ್ಬ ಮಾಡುವ ಹೊಸ ಸಂಸ್ಕೃತಿ ನಿರ್ಮಾಣದ ಕೆಲಸವನ್ನು ವಿಶ್ವವಿದ್ಯಾಲಯಗಳು ಮತ್ತಷ್ಟು ವ್ಯವಸ್ಥಿತ-ವಾಗಿ ಮಾಡುತ್ತವೆ. ಪ್ರಶಸ್ತಿ-ಪುರಸ್ಕಾರಕ್ಕೆ ಪಾತ್ರರಾದ ಹಿರಿಯರು ವಿನಯ ಮತ್ತು ಮುಜುಗರದಿಂದ ಮೈಯನ್ನು ಹಿಡಿಯಾಗಿಸಿಕೊಳ್ಳುವುದನ್ನು ನೋಡಿದ್ದ ನಾವೀಗ, ಈ ಕಾಲದ ಓಜರು ರಾಜಕಾರಣಿಗಳಂತೆ ಗೆಲುವಿನ ಸಂಕೇತವಾಗಿ ಎರಡು ಬೆರಳುಗಳನ್ನು ತೋರಿಸುತ್ತಿರುವುದನ್ನು ನೋಡಿದ್ದೇವೆ. ರಾಜಕಾರಣದ ನಂಟುಳ್ಳ ಉದ್ಯಮಿಗಳು ಹಾಗೂ ಉದ್ಯಮಿಗಳ ಸಖ್ಯವುಳ್ಳ ರಾಜ-ಕಾರಣಿಗಳಿಗೆ ಗೌರವ ಡಾಕ್ಟರೇಟ್ ನೀಡಲು ವಿಶ್ವವಿದ್ಯಾ-ಲಯಗಳಿವೆ. ಆದರೆ, ಈ ವಿಶ್ವವಿದ್ಯಾಲಯಗಳು ಎಷ್ಟು ರಾಜಕಾರಣೋದ್ಯಮಿಗಳಿಗೆ ಗೌರವ ಪದವಿ ನೀಡಲಿಕ್ಕೆ ಸಾಧ್ಯ? ಈ ಮಿತಿಗೆ ಉತ್ತರವಾಗಿ 'ಅಂತರರಾಷ್ಟ್ರೀಯ ವಿಶ್ವವಿದ್ಯಾಲಯ'ಗಳಿವೆ. ಇಪ್ಪತ್ತು- ಮೂವತ್ತು ಸಾವಿರ ರೂಪಾಯಿ ಪಡೆದು ಯಾರಿಗೆ ಬೇಕಾದರೂ ಗೌರವ ಡಾಕ್ಟರೇಟ್ ದಯಪಾಲಿಸುವ ಇವುಗಳಿಂದ ಸಾಮಾಜಿಕ ನ್ಯಾಯ ಸಾಧ್ಯವಾಗಿಸುತ್ತಿವೆ.


ನಾಡು ಕಟ್ಟುವ ಕೆಲಸವನ್ನು ಕವಿಗಳಿಗೆ ಗುತ್ತಿಗೆ ಕೊಟ್ಟಿಲ್ಲ ಎನ್ನುವುದು ಹೊಸ ಕಾಲದ ಸಾಂಸ್ಕೃತಿಕ ನೀತಿ ನಿರೂಪಕರ ಆಕ್ರೋಶದ ಮಾತು. ಹೌದಲ್ಲವೇ? ಕವಿಯೊಬ್ಬ 'ಕಟ್ಟುವೆವು ನಾವು ಹೊಸ ನಾಡೊಂದನು' ಎಂದು ಬರೆಯಬಲ್ಲನಷ್ಟೇ. ಆದರೆ, ನಿಜವಾದ ನಾಡು ಕಟ್ಟಲಿಕ್ಕೆ ಬೇಕಾಗಿರುವುದು ಗಾರೆ ಕೆಲಸದವರು, ಅವರ ಉಸ್ತುವಾರಿ ನೋಡಿಕೊಳ್ಳುವ ಗುತ್ತಿಗೆದಾರರು, ರಿಯಲ್ ಎಸ್ಟೇಟು ಕುಳಗಳು, ಅಂತಿಮವಾಗಿ ಕಳಶಪ್ರಾಯವಾದ ಸರ್ಕಾರ. ಈ ವಾಸ್ತವವನ್ನು ಮರೆಮಾಚಿ ಕವಿಗಳು ತಮ್ಮನ್ನು ನಾಡ ನಿರ್ಮಾಪಕರೆಂದು ಬಿಂಬಿಸಿಕೊಳ್ಳುವುದು ಸರಿಯಲ್ಲ. ಇಷ್ಟು ದಿನಗಳ ಕಾಲ ಕವಿಗಳು ನಡೆಸಿದ ದಬ್ಬಾಳಿಕೆಗೆ ಇತಿಶ್ರೀ ಹಾಡುವ ಸಂದರ್ಭ ಇಂದಿನದು. ಉದ್ದೇಶಿತ ಬದಲಾವಣೆಯ ಭಾಗವಾಗಿಯೇ ಹೊಸ ಕವಿ, ಹೊಸ ಕಾವ್ಯ ಹಾಗೂ ಹೊಸ ನಾಡೋಜರ ಸೃಷ್ಟಿ.

ಕವಿಗಳು ಮಾತ್ರವಲ್ಲ, ಕಲಾವಿದರಿಗೆ ಕೂಡ ಆದರ್ಶ ರಾಜ್ಯದಲ್ಲಿ ಸ್ಥಾನವಿಲ್ಲ. ಇತ್ತೀಚಿನ ವರ್ಷಗಳ ರಾಷ್ಟ್ರಪ್ರಶಸ್ತಿ ಪುರಸ್ಕೃತ ಸಿನಿಮಾಗಳ ಪಟ್ಟಿ ನೋಡಿ. ಗಾಂಧಿಯ ಬಗ್ಗೆ ಸಿನಿಮಾ ಮಾಡಿ ಈಗ ಪ್ರಶಸ್ತಿ ಪಡೆಯುವುದು ಸಾಧ್ಯವಿಲ್ಲ. ಬಡತನ, ಜಾತೀಯತೆ, ಕೋಮುಸಂಘರ್ಷದಂತಹ ಕಲ್ಪಿತ ಸಮಸ್ಯೆಗಳನ್ನು ವಸ್ತುವಾಗುಳ್ಳ ಸಿನಿಮಾಗಳಿಗೆ ಸ್ವರ್ಣಕಮಲ ಒಲಿಯುವುದಿಲ್ಲ. 'ಅಭಿವ್ಯಕ್ತಿ ಸ್ವಾತಂತ್ರ್ಯ' ಎಂದು ಅಧಿಕಪ್ರಸಂಗ ಮಾಡುವವರನ್ನು ಜ್ಯೂರಿಗಳು ಕಡೆಗಣ್ಣಿನಲ್ಲೂ ನೋಡುವುದಿಲ್ಲ. ದೇಶವಾಸಿಗಳ ಬದುಕನ್ನು ಬಂಗಾರವಾಗಿಸಲು ಅಹರ್ನಿಶಿ ಶ್ರಮಿಸುತ್ತಿ-ರುವ ಸರ್ಕಾರ ಹಾಗೂ ಅದರ ಚುಕ್ಕಾಣಿ ಹಿಡಿದಿರುವ ಋಷಿಸದೃಶ ಭಾಗ್ಯವಿಧಾತರನ್ನು ಅನುಮಾನದಿಂದ ನೋಡುವವರ ಸನಿಹ ಪ್ರಶಸ್ತಿ ಸುಳಿದಾಡುವುದೂ ಇಲ್ಲ. ಪ್ರಶಸ್ತಿಗಾಗಿ ಸಿನಿಮಾ ಮಾಡುವವರಿಗಿನ್ನು ಅವಕಾಶವಿಲ್ಲ. ದೇಶದ ಸಂಸ್ಕೃತಿಯನ್ನು ಎತ್ತಿಹಿಡಿಯುವ, ದೇಶದ ಹೆಮ್ಮೆ ಹೆಚ್ಚಿಸುವ 'ಬಾಹುಬಲಿ'ಗಳಿಗಷ್ಟೇ ಗೌರವ–ಪುರಸ್ಕಾರ.


ಈ ಹೊತ್ತಿನ ಸಾಂಸ್ಕೃತಿಕ ನೀತಿ ಸ್ಪಷ್ಟವಾಗಿದೆ. ಕವಿಗಳಿಗೆ ಮತ್ತು ಕಲಾವಿದರಿಗೆ ನಮ್ಮ ರಾಜ್ಯದಲ್ಲಿ ಅವಕಾಶವಿಲ್ಲ ಎಂದು ಹೇಳಲು ಇಂದಿನ ನಾಯಕರೇನೂ ಪ್ಲೇಟೊನಂತೆ ಹುಂಬರಲ್ಲ. ಕವಿಗಳು ಮತ್ತು ಕಲಾವಿದರಿಗೆ ಇಂದಿನ ಆದರ್ಶ ರಾಜ್ಯದಲ್ಲಿ ಹಿಂದಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯವಿದೆ. ಆದರೆ, ಕವಿ–ಕಲಾವಿದ ಎನ್ನುವ ವ್ಯಾಖ್ಯೆಯನ್ನು ಬದಲಾಗಿಸಲಾಗಿದೆ ಅಷ್ಟೇ. 'ಕಾವ್ಯವಾಗಲಿ ಖಡ್ಗ, ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎನ್ನುವುದೀಗ ಸವಕಲಷ್ಟೇ ಅಲ್ಲ; ದೇಶದ್ರೋಹದ ಮಾತೂ ಹೌದು. ಕಾವ್ಯ ಖಡ್ಗವಾಗುವುದಾದರೆ, ಅದರ ಪರಿಣಾಮ ಹಿಂಸೆಯಲ್ಲವೇ? ಜನರ ನೋವಿಗೆ ಮಿಡಿಯುವುದು ಸರ್ಕಾರದ ಕರ್ತವ್ಯವಾಗಿರುವುದರಿಂದ, ಕಾವ್ಯ ತನ್ನನ್ನು ನೊಂದವರ ಪ್ರಾಣಮಿತ್ರ ಎಂದು ಬಣ್ಣಿಸಿಕೊಳ್ಳುವುದು ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನವಲ್ಲವೇ? ಹಾಗಾಗಿ, ಸಾಹಿತ್ಯಕ್ಕೆ ಸಾಮಾಜಿಕ ಹೊಣೆಗಾರಿಕೆಯಿದೆ ಎಂದು ನಂಬುವ ಕವಿಗಳಿಗೆ ಇಂದಿನ ಆದರ್ಶ ರಾಜ್ಯದಲ್ಲಿ ಅವಕಾಶವಿಲ್ಲ. ಅಂದಮಾತ್ರಕ್ಕೆ, ಸಾಮಾಜಿಕ ಹೊಣೆಗಾರಿಕೆಯ ಬಗ್ಗೆ ಮಾತನಾಡುವ ಕವಿಗಳನ್ನು ಪ್ರಸ್ತುತ ದಂಡಿಸಲಾಗುತ್ತಿದೆಯೇ? ಹಾಗೇನೂ ಇಲ್ಲ; ನಿರ್ಲಕ್ಷಿಸಲಾಗುತ್ತಿದೆ ಅಷ್ಟೇ. ಪ್ರಶಸ್ತಿ ಪುರಸ್ಕಾರದ ನಿರಾಕರಣೆಯ ನಿರ್ಲಕ್ಷ್ಯವಷ್ಟೇ ಅಲ್ಲ; ಕೆಲಸಕ್ಕೆ ಬಾರದ ಈ ಕವಿಗಳ ಕೃತಿಗಳನ್ನು ಓದದಿರುವ ಜಾಣ ಜಾಣೆಯರನ್ನೂ ರೂಪಿಸಲಾಗುತ್ತಿದೆ. ಸಾಮ–ದಾನವನ್ನೂ ಮೀರಿದರೆ ಇದ್ದೇಇದೆ ದಂಡ, ಕೋದಂಡ.

ಹಳೆಯ ಕವಿಗಳ ಜಾಗದಲ್ಲಿ ಹೊಸ ಕವಿಗಳು ಬಂದು ಕಳೆಕಳೆಯಾಗಿ ಕೂತಿದ್ದಾರಷ್ಟೆ. ಈ ಹೊಸ ಕವಿಗಳು ಏನು ಮಾಡಬೇಕು? ಈ ಪ್ರಶ್ನೆಗೆ ಉತ್ತರವನ್ನೂ ಪ್ಲೇಟೊ ಮಹಾಶಯನ ಮೂಲಕವೇ ಕಂಡುಕೊಳ್ಳಲಾಗಿದೆ. ವಾಸ್ತವ ಜಗತ್ತನ್ನು ಮರು ಸೃಷ್ಟಿಸಲು ಹಂಬಲಿಸುವ ಕಾವ್ಯ ಭ್ರಮಾರೂಪಿಯಾದುದರಿಂದ, ಆ ಭ್ರಮೆಗೆ ಪ್ಲೇಟೊ ತನ್ನ ರಾಜ್ಯದಲ್ಲಿ ಅವಕಾಶ ನಿರಾಕರಿಸಿದ್ದ. ಯಾವುದು ಪ್ಲೇಟೊಗೆ ಭ್ರಮೆಯೆಂದು ಕಂಡಿತ್ತೋ ಅದು ಇಂದಿನ ಪ್ರಭುತ್ವಕ್ಕೆ ಅಗತ್ಯವಾಗಿ ಕಂಡಿದೆ. ಭ್ರಮೆಗಳನ್ನು, ಭಾವನೆಗಳನ್ನು ಉದ್ದೀಪಿಸುವುದು ಈ ಹೊತ್ತಿನ ಕವಿಗಳ ಹೊಣೆಗಾರಿಕೆ. ಏನದು ಭ್ರಮೆ? ಉದ್ದೀಪಿಸಬೇಕಾದುದು ಯಾವ ಭ್ರಮೆಗಳನ್ನು? ಬಿಡಿಸಿ ಹೇಳುವುದಾದರೆ, ಕಾವ್ಯದ ಸೌಂದರ್ಯ ಕೆಡುವುದು. ವಾಚ್ಯವಾದರೂ ಪರವಾಗಿಲ್ಲ ಎಂದು ಒಂದು ಸಾಲಿನಲ್ಲಿ ಹೇಳುವುದಾದರೆ, 'ಜನರ ಮನಸ್ಸನ್ನು ಅರಳಿಸುವುದು ಹಾಗೂ ದೇಶಭಕ್ತಿಯನ್ನು ಉದ್ದೀಪಿಸುವುದು' ಸಮಕಾಲೀನ ಜನಪ್ರಿಯ ಕಾವ್ಯದ ಪ್ರಮುಖ ಲಕ್ಷಣ. ಇಂಥ, ಸಮಾಜದಲ್ಲಿ ಶಾಂತಿಯನ್ನು, ಸಮೃದ್ಧಿಯನ್ನು ಕಾಣುವಂತಹ, ಪ್ರಶ್ನೆಗಳೇ ಇಲ್ಲದಂತಹ ಸದ್ಗತಿಯನ್ನು ತಲುಪಿದ ಜೀವಪರ ಸಾಹಿತ್ಯ ಸೃಜಿಸುವ ಕಿಂದರಜೋಗಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ಮೀಸಲು.

ಪರ್ಯಾಯ ಸಂಸ್ಕೃತಿಯನ್ನು ಕಟ್ಟಲು ಹೊರಟಿರುವ ಸರ್ಕಾರ ಹಾಗೂ ಸಮಾಜದಲ್ಲಿ 'ಮಾಜಿ ಕವಿ'ಗಳ ಸ್ಥಾನವೇನು? ಕೆಲವು ಮಾಜಿಗಳು ಹೇಳುತ್ತಿದ್ದಾರೆ: 'ಈ ವ್ಯವಸ್ಥೆ ಕೊಡಮಾಡುವ ಯಾವ ಪ್ರಶಸ್ತಿ ಪುರಸ್ಕಾರಗಳನ್ನೂ ನಾವು ಪಡೆಯಬಾರದು'. ನಿರಾಕರಣೆ ಕೂಡ ಪ್ರತಿಭಟನೆಯ ಒಂದು ವಿಧಾನ. ಆದರೆ, ಈ ನಿರಾಕರಣೆಯು ದ್ರಾಕ್ಷಿಯನ್ನು ಹುಳಿಯೆಂದ ನರಿಯ ಕಥೆಯನ್ನು ನೆನಪಿಸುವುದಿಲ್ಲವೇ? ಪ್ರಶಸ್ತಿಗಳನ್ನೇನೋ ಬೇಡವೆನ್ನಬಹುದು; ಆದರೆ, ಉದ್ಯೋಗ ಸೇರಿದಂತೆ ಇದೇ ಸರ್ಕಾರ ಭಾಗಿಯಾಗಿರುವ ಸೌಲಭ್ಯಗಳನ್ನು ನಿರಾಕರಿಸುವುದು ನಿಮ್ಮಿಂದ ಸಾಧ್ಯವೇ ಎಂದು ಹೊಸ ಕವಿಕುಲದ ಶಿಷ್ಯಕೋಟಿ ಕೇಳುತ್ತಿದೆ? ಏನೆಂದು ಉತ್ತರಿಸುವುದು? ಎದುರು ನಿಂತಿರುವುದು ಕಾವ್ಯರೂಪಿಯಾದ ಕಾಲವೋ ಅಥವಾ ಕಾಲರೂಪಿಯಾದ ಕಾವ್ಯವೋ?



ಚುರುಮುರಿ



ಯುಗಾದಿ ಭವಿಷ್ಯ

• ಲಿಂಗರಾಜು ಡಿ.ಎಸ್.

ಸಮಸ್ತ ಕರ್ನಾಟಕದ ಜನರಿಗಾಗಿ ಪ್ಲವನಾಮ ಸಂವತ್ಸರದ ಮುಕ್ತಿ-ಭುಕ್ತಿ ಗೋಚಾರ ಫಲಗಳನ್ನು ನೀಡಲಾಗಿದ್ದು, ಇದು ಕೊರೊನಾ ಮಾರಿ ಮತ್ತು ಲಸಿಕಾದೇವಿಯ ನಡುವಿನ ಯುದ್ಧದ ಪರಿಣಾಮಗಳ ಮೇಲೆ ನಿರ್ಧಾರವಾಗಲಿದೆ. ಕೊರೊನಾ ಕಾಟ ಪರಿಹಾರಕ್ಕಾಗಿ 'ಓಂ ಮಾಸ್ಕಂ, ಓಂ ಅಂತರಂ, ಓಂ ಫಟ್ ಸ್ಯಾನಿಟೈಸಾಯ ನಮಃ' ಎಂಬ ಕೊರೊನಾ ಕಷ್ಟೋತ್ತರ ಮಂತ್ರ ಜಪದಿಂದ ಸೌಖ್ಯವು. ಟಿ.ವಿಗಳ ಬ್ರೇಕಿಂಗ್ ನ್ಯೂಸ್ ಕಾಲಪುರುಷರಿಂದ ಮಾನಸಿಕ ಶಾಂತಿ ಹಾನಿ.

ಎಂದಿನಂತೆ ರೈತರಿಗೆ ಅಭಯಸಂಕಟ. ಈ ವರ್ಷ ಅನೇಕ ಖಾಸಗಿ ಬ್ಯಾಂಕುಗಳ ಅಕಾಲ ಮೃತ್ಯುವಾಗಲಿದ್ದು ಜನರಿಗೆ ತೊಂದರೆಯು. ಪಾಲಿಕೆಗಳಿಗೆ ಕಾಮಗಾರಿ ಬಿಲ್ಲುಗಳಿಂದ ಸಂತಸವು. ಎಸಿಬಿ ಬಾಧೆಯ ನಡುವೆಯೂ ಅಧಿಕಾರಿಗಳ ಪಚನಶೂರತೆ ಹೆಚ್ಚಳ.

ದೇಶದ ರಾಜಕೀಯದಲ್ಲಿ ಶಾ ವಶೀಕರಣ ಪ್ರಯೋಗದಿಂದ ಮೋದಿ ಮಹಾರಾಜರಿಗೆ ಪಕ್ಷಸೌಖ್ಯ. ಮುಖ್ಯಮಂತ್ರಿಗಳಿಗೆ ಸ್ವಜನ ವೈರ, ಪಟಿಂಗ ಮಂತ್ರಿಗಳಿಂದ ಮಾನಹಾನಿ, ಪಕ್ಷವಾತ. ಮೀಸಲಾತಿ, ಮುಷ್ಕರಗಳ ಕಾರಣವಾಗಿ ರಾಜರು ಕೋಪದಿಂದ ವರ್ತಿಸಬೇಕಾದೀತು.

ರಾಜಕಾರಣಿಗಳು ಜನರ ಕಿವಿಯ ಮೇಲೆ ಫ್ಲವರಿಟ್ಟು ನಾಮ ಹಾಕುವ ಡ್ರಾಮಾವತಾರ, ಡಂಗುಬೂದಿ ವಿತರಣೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಸಂವತ್ಸರದಲ್ಲೂ ನಿರ್ವಿಘ್ನವಾಗಿ ನಡೆಯಲಿವೆ. ಕೇಂದ್ರ ತೆರಿಗೆ ಅನುದಾನಕ್ಕೆ ಮುಖ್ಯಮಂತ್ರಿಗಳಿಂದ ಶೋಕಸಂಗೀತ. ವಿರೋಧ ಪಕ್ಷಗಳಿಗೆ ಅಧಿಕಾರ-ವಿಲ್ಲದೇ ನಾಯಿಕೆಮ್ಮಲು.

ರಾಹು-ಕೇತು, ಶನಿಗಳು ಒಟ್ಟಾಗಿ ಮತದಾರರ ಏಳನೇ ಮನೆ ಪ್ರವೇಶಿಸುವುದ-ರಿಂದ ಕಾಯಿಲೆ, ಕಾಸಿಗೆ ತತ್ವಾರವು. ದಿವಸ ಧಾನ್ಯ, ತರಕಾರಿ, ಹಣ್ಣು ಬೆಲೆ ತೇಜಿಯಾಗಲಿದೆ. ಬ್ಯಾಂಕ್ ಬಡ್ಡಿ ದರ ಇಳಿಕೆಯಿಂದ ವಿತ್ತಭ್ರಮೆ. ಎಣ್ಣೆ ಬೆಲೆ ಹೆಚ್ಚಿ ಮದ್ಯಕ್ಷಾಮ. ಚಿನ್ನದ ಬೆಲೆ ಹೆಚ್ಚಳದಿಂದ ಚೋರಭಯ. ಪೆಟ್ರೋಲ್, ಡೀಸೆಲ್, ಗ್ಯಾಸ್ ಬೆಲೆ ಏರಿಳಿತದಿಂದ ಜನ ಸುಸ್ತು. ಉಳ್ಳವರಿಗೆ ಲ್ಯಾಂಡು ರೋಗ ಹೆಚ್ಚಳ. ಏಕಾದಶ ಗ್ರಹಗಳು ಒಂದಾದಲ್ಲಿ ಆರ್‌ಸಿಬಿಗೆ ಐಪಿಎಲ್ ಕಪ್ಪು ಗ್ಯಾರಂಟಿ.

ಸಕುನ್ನಿ ಪರಿವಾರ ಶ್ರೇಯೋಭಿವೃದ್ಧಿರಸ್ತು!

ದಿನದ ಟ್ವೀಟ್

ಅನುಕೂಲ ಪರಿಗಣಿಸಿ



ಸರಿಯಾದ ಸಾರ್ವಜನಿಕ ಸಾರಿಗೆಯನ್ನು ಒದಗಿಸುವುದರಿಂದ ಅನೇಕ ಅನುಕೂಲಗಳಿವೆ. ಸಾರ್ವಜನಿಕ ಸಾರಿಗೆ ಪರಿಣಾಮಕಾರಿ ಆಗಿದ್ದರೆ ಜನರು ಸ್ವಂತ ವಾಹನ ಬಳಕೆಗಿಂತ ಸಾರ್ವಜನಿಕ ಸಾರಿಗೆಯನ್ನು ಹೆಚ್ಚಾಗಿ ಬಳಸುತ್ತಾರೆ. ಟ್ರಾಫಿಕ್ ಸಮಸ್ಯೆಯೂ ಕಡಿಮೆಯಾಗಲಿದೆ. ಪರಿಸರ ಹಾನಿಯೂ ಕಡಿಮೆಯಾಗಲಿದೆ.

ಅರುಣ್ ಜಾವಗಲ್, ಕನ್ನಡಪರ ಕಾರ್ಯಕರ್ತ

25 ವರ್ಷಗಳ ಹಿಂದೆ

ಶನಿವಾರ, 13-4-1996

• **ಬೆಳಗಾವಿ, ನಲಗೊಂಡ ಕ್ಷೇತ್ರ ಮೇ 27ರಂದು ಚುನಾವಣೆ**

ನವದೆಹಲಿ, ಏ. 12– ಅತ್ಯಧಿಕ ಅಭ್ಯರ್ಥಿಗಳು ಕಣಕ್ಕಿಳಿದಿದ್ದುದರಿಂದ ಮುಂದೂಡಲಾಗಿದ್ದ ಕರ್ನಾಟಕದ ಬೆಳಗಾವಿ, ಆಂಧ್ರ ಪ್ರದೇಶದ ನಲಗೊಂಡ ಲೋಕಸಭಾ ಕ್ಷೇತ್ರಗಳ ಚುನಾವಣೆ ಮೇ 27ರಂದು ನಡೆಯಲಿದೆ ಎಂದು ಚುನಾವಣಾ ಆಯೋಗ ಇಂದು ಪ್ರಕಟಿಸಿದೆ.

ಭಾರಿ ಪ್ರಮಾಣದಲ್ಲಿ ಸ್ಪರ್ಧಿಗಳು ಕಣದಲ್ಲಿರುವುದರಿಂದ, ಆಡಳಿತದ ದೃಷ್ಟಿಯಿಂದ ಕೆಲವು ತೊಂದರೆಗಳಿರುವುದಾಗಿ ರಾಜ್ಯ ಸರ್ಕಾರಗಳು ಮಾಡಿದ್ದ ಮನವಿಯನ್ನು ಗಮನಿಸಿ ಈ ಕ್ಷೇತ್ರಗಳ ಚುನಾವಣೆ ದಿನಗಳನ್ನು ಈಗ ಬದಲಿಸಬೇಕಾಯಿತು ಎಂದು ಆಯೋಗದ ವಕ್ತಾರ ಸುಭಾಷ್ ಪಾಣಿ ತಿಳಿಸಿದರು.

• **ಪ್ರಧಾನಿಗೆ ಏಕೆ ವಿಮಾನ- ಅಡ್ವಾಣಿ**

ಬೆಂಗಳೂರು, ಏ. 12– ರಾಜಕೀಯ ಪಕ್ಷಗಳು ಚುನಾವಣಾ ಪ್ರಚಾರಕ್ಕೆ ಸರ್ಕಾರಿ ಹೆಲಿಕಾಪ್ಟರ್ ಅಥವಾ ವಿಮಾನವನ್ನು ಬಳಸಬಾರದೆಂಬ ಚುನಾವಣಾ ಆಯೋಗದ ನಿಬಂಧನೆಯನ್ನು ಪ್ರಧಾನ ಮಂತ್ರಿಗಳಿಗೂ ಅನ್ವಯಿಸಬೇಕು ಎಂದು ಬಿಜೆಪಿಯ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಅಭಿಪ್ರಾಯಪಟ್ಟರು.

ಪ್ರಧಾನ ಮಂತ್ರಿಗಳ ಹೆಲಿಕಾಪ್ಟರ್ ಅಥವಾ ವಿಮಾನ ಬಳಕೆಯ ವೆಚ್ಚವನ್ನು ಅವರ ಪಕ್ಷವು ತುಂಬುವುದಾದಲ್ಲಿ, ವೆಚ್ಚ ತುಂಬುವ ಸಾಮರ್ಥ್ಯವಿರುವ ಇತರ ಪಕ್ಷಗಳಿಗೂ ಅವುಗಳ ಬಳಕೆಗೆ ಅನುವು ಮಾಡಿಕೊಡಬೇಕೆಂದು ಅವರು ಚುನಾವಣಾ ಆಯೋಗವನ್ನು ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 13-4-1971

• **ಸಂಸ್ಥಾ ಕಾಂಗ್ರೆಸ್ ಪಕ್ಷದ ಸರ್ಕಾರ ಅಸಂಭವ**

ಬೆಂಗಳೂರು, ಏ. 12– ಸ್ವಶಕ್ತಿಯ ಮೇಲೆ ಮತ್ತೆ ಸರ್ಕಾರ ರಚಿಸಲು ಪ್ರಯತ್ನಿಸುತ್ತಿರುವ ಸಂಸ್ಥಾ ಕಾಂಗ್ರೆಸ್ ಪಕ್ಷ ಈ ಪ್ರಯತ್ನವನ್ನು ಕೈಬಿಡುವ ಸಂಭವ ಹೆಚ್ಚಾಗಿದೆ.

ಅಲ್ಪಸಂಖ್ಯಾತ ಸರ್ಕಾರ ರಚಿಸುವ ತಂಡದ ನಿರ್ಧಾರ ಹಾಗೂ ತಮ್ಮ ಪಕ್ಷದ ಅಂದಾಜು ಆಲೋಚನೆಗಳಿಗೆ ಸಾಮರಸ್ಯ ಉಂಟಾಗದಿರುವ ಪರಿಸ್ಥಿತಿಯನ್ನು ವಿಮರ್ಶಿಸಿ ಪಕ್ಷದ ನಾಯಕ ಶ್ರೀ ವೀರೇಂದ್ರ ಪಾಟೀಲ್ ಅವರು ರಾತ್ರಿ ನಿರ್ಧಾರ ಕೈಗೊಳ್ಳಲಿದ್ದಾರೆ.

ತಾವು ಮಂತ್ರಿಮಂಡಲವನ್ನು ರಚಿಸುವುದಿಲ್ಲವೆಂದು ಶ್ರೀ ಪಾಟೀಲರು ನಾಳೆ ತಿಳಿಸಿದಲ್ಲಿ ರಾಜ್ಯಪಾಲರು ವಿಧಾನಸಭೆಯನ್ನು ವಿಸರ್ಜಿಸಲು ರಾಷ್ಟ್ರಪತಿಗೆ ಶಿಫಾರಸು ಮಾಡಲಿದ್ದಾರೆ.

• **ಜನಸಂಖ್ಯೆ 54 ಕೋಟಿ**

ನವದೆಹಲಿ, ಏ. 12– ಈ ವರ್ಷದ ಜನಗಣತಿ ಪ್ರಕಾರ, ಭಾರತದ ಜನಸಂಖ್ಯೆ ಐವತ್ನಾಲ್ಕು ಕೋಟಿ ಎಪ್ಪತ್ತು ಲಕ್ಷ.

1971ರ ಜನಗಣತಿ ಪ್ರಕಾರ, ರಾಷ್ಟ್ರದಲ್ಲಿ ಉತ್ತರ ಪ್ರದೇಶವು ಅತ್ಯಂತ ಹೆಚ್ಚು ಜನಭರಿತ ರಾಜ್ಯವಾಗಿದ್ದು, ಅದರ ಜನಸಂಖ್ಯೆ 8,82,99,453.

ಹೆಚ್ಚು ಜನಸಂಖ್ಯೆ ಪಡೆದಿರುವ ಇತರ ರಾಜ್ಯಗಳ ಪೈಕಿ ಮೈಸೂರು ರಾಜ್ಯವು 8ನೇ ಸ್ಥಾನ ಪಡೆದಿದ್ದು, ಅದರ ಜನಸಂಖ್ಯೆ 2,92,24,046.

ಸಂಗತ

ವನ್ಯಜೀವಿ ಹೊಟ್ಟೆಗೆ ಪ್ಲಾಸ್ಟಿಕ್ ವಿಷ

ನಾವು ಬಳಸಿ ಬಿಸಾಡುವ ಪ್ಲಾಸ್ಟಿಕ್ ತ್ಯಾಜ್ಯದಿಂದ ಕಾಡುಪ್ರಾಣಿಗಳು ಏನೆಲ್ಲ ತೊಂದರೆ ಅನುಭವಿಸುತ್ತಿವೆ ಎಂಬುದು ಗೊತ್ತೇ?

• ಗುರುರಾಜ್ ಎಸ್. ದಾವಣಗೆರೆ

'ಪ್ಲಾಸ್ಟಿಕ್ ತಿನ್ನುತ್ತಿರುವ ಕಾಡಿನ ಆನೆ, ಜಿಂಕೆಗಳನ್ನು ನೋಡಿದ್ದೀರಾ? ಹಾಗಿದ್ದರೆ ಅವುಗಳ ಫೋಟೊ ನಮಗೆ ಕಳಿಸಿಕೊಡಿ' ಎಂಬ ಮನವಿಯೊಂದು ಸಾಮಾಜಿಕ ಜಾಲತಾಣದ ಇನ್‌ಸ್ಟಾಗ್ರಾಂ ಹ್ಯಾಂಡಲ್‌ನಲ್ಲಿ ಕಾಣಿಸಿಕೊಂಡಾಗ, ಇದೇನಿದು ಆನೆ, ಜಿಂಕೆಗಳೇಕೆ ಪ್ಲಾಸ್ಟಿಕ್ ತಿನ್ನುತ್ತವೆ, ಅವುಗಳ ಆಹಾರ ಬಿದಿರು, ಹುಲ್ಲು ಅಲ್ಲವೇ ಎಂಬ ಅಚ್ಚರಿಯ ಪ್ರತಿಕ್ರಿಯೆಗಳು ಬಂದವು.

ಮುಂಬೈ ಮೂಲದ ಸ್ಯಾಂಕ್ಚುರಿ ನೇಚರ್ ಫೌಂಡೇಷನ್ ಇಂಥದ್ದೊಂದು ಮನವಿ ಮಾಡಿ ಇಡೀ ದೇಶದ ವನ್ಯಜೀವಿ ಸಂರಕ್ಷಣಾ ನಿರತರ ಗಮನ ಸೆಳೆದಿದೆ. ಬಳಸಿ ಬಿಸಾಡಿದ ಪ್ಲಾಸ್ಟಿಕ್ ತ್ಯಾಜ್ಯದಿಂದ ದೇಶದ ಕಾಡುಪ್ರಾಣಿಗಳು ಏನೆಲ್ಲ ತೊಂದರೆ ಅನುಭವಿಸುತ್ತಿವೆ ಎಂಬುದನ್ನು ಪತ್ತೆ ಹಚ್ಚಲು ಕಾರ್ಯ-ಯೋಜನೆಯೊಂದನ್ನು ಪ್ರಾರಂಭಿಸಿದ ನೇಚರ್ ಫೌಂಡೇಷನ್‌ನ ಫೋಟೊ ಲೈಬ್ರರಿ ವಿಭಾಗದ ಪ್ರಾಚಿ ಗಳಂಗೆ ಮತ್ತು ಕಾರ ತೇಜ್‌ಪಾಲ್ ಅವರು ಇನ್‌ಸ್ಟಾಗ್ರಾಂನ ಅಂಕಣಕ್ಕೆ #ಇನ್ ಅವರ್ ಫಿಲ್ತ್ ಎಂಬ ಶೀರ್ಷಿಕೆ ನೀಡಿ, ಅಭಯಾರಣ್ಯ, ಪಕ್ಷಿಧಾಮ, ನ್ಯಾಷನಲ್ ಪಾರ್ಕ್, ಕುರುಚಲು ಕಾಡು, ಜಲಾನಯನ ಪ್ರದೇಶಗಳಲ್ಲಿ ಆವಾಸ ಹೊಂದಿರುವ ಪ್ರಾಣಿ- ಪಕ್ಷಿಗಳು, ಜನ ಬಳಸಿ ಬಿಸಾಡಿರುವ ಪ್ಲಾಸ್ಟಿಕ್ ಕಸದಿಂದ ತೊಂದರೆ ಅನುಭವಿಸುತ್ತಿರುವ ಚಿತ್ರಗಳು ನಿಮ್ಮ ಬಳಿ ಇದ್ದರೆ ನಮ್ಮ ಲೈಬ್ರರಿಗೆ ಕಳುಹಿಸಿರಿ, ಆಯ್ದ ಚಿತ್ರಗಳನ್ನು ವಾರಕ್ಕೊಮ್ಮೆ ಇನ್‌ಸ್ಟಾದಲ್ಲಿ ಪ್ರಕಟಿಸಿ, ಜನರಲ್ಲಿ ಜಾಗೃತಿ ಮೂಡಿಸುತ್ತೇವೆ ಎಂದಿದ್ದರು.

ಮನವಿಯನ್ನು ಗಂಭೀರವಾಗಿ ತೆಗೆದುಕೊಂಡ ಪರಿಸರ ಜಾಗೃತಿ, ಸಂರಕ್ಷಣೆ, ಛಾಯಾಗ್ರಹಣ, ವರದಿ-ಗಾರಿಕೆಗಳಲ್ಲಿ ತೊಡಗಿಕೊಂಡಿರುವ ಅನೇಕರು ತಾವು ತೆಗೆದ ಚಿತ್ರಗಳನ್ನು ಕಳಿಸಲು ಶುರು ಮಾಡಿದರು. 'ಮಹಾರಾಷ್ಟ್ರದ ತಡೋಬ- ಅಧಾರಿ ಹುಲಿ ಸಂರಕ್ಷಿತ ಅರಣ್ಯದ ಮರಿ ಹುಲಿಯೊಂದು ಪ್ಲಾಸ್ಟಿಕ್ ಗೋಣಿ ಚೀಲವನ್ನು ಬಾಯಲ್ಲಿ ಕಚ್ಚಿ ಹಿಡಿದ ಚಿತ್ರ ನಮ್ಮನ್ನು ತುಂಬಾ ಡಿಸ್ಟರ್ಬ್ ಮಾಡಿತು' ಎಂದಿದ್ದಾರೆ ತೇಜ್‌ಪಾಲ್.

ತಮಿಳುನಾಡಿನ ವಾಲ್‌ಪರೈ ಸಂರಕ್ಷಿತಾರಣ್ಯದಲ್ಲಿರುವ ಸಿಂಹಬಾಲದ ಕೋತಿಯೊಂದು (ಲಯನ್ ಟೇಲ್ಡ್ ಮಕಾಕ್), ಬಳಸಿ ಬಿಸಾಡಿದ ಪ್ಲಾಸ್ಟಿಕ್ ಕವರ್‌ನಲ್ಲಿದ್ದ ಆಹಾರವನ್ನು ಸೇವಿಸುತ್ತಿರುವ ಚಿತ್ರವನ್ನು ಕಳಿಸಿದ್ದ ಹವ್ಯಾಸಿ ಫೋಟೊಗ್ರಾಫರ್ ವಿಶಾಲ್, ಬರುವ ಪ್ರವಾಸಿಗರು ತಾವು ತಿಂದಾದ ಮೇಲೆ ಎಲ್ಲೆಂದರಲ್ಲಿ ಕಸ ಹಾಕುತ್ತಾರೆ, ಇದು ಹೀಗೆಯೇ ಮುಂದುವರಿದರೆ ಕೋತಿಗಳ ಆಹಾರಕ್ರಮವೇ ಬದಲಾಗುವ ಅಪಾಯವಿದೆ ಎಂಬ ಟಿಪ್ಪಣಿ ಬರೆದು ಕಳಿಸಿದ್ದನ್ನು ಹೇಳುವ ಪ್ರಾಚಿ, ಆನೆ, ತೋಳ, ನರಿ, ಟಿಟ್ಟಿಭ, ಹೆಬ್ಬಳಿಲು, ಜಿಂಕೆಗಳೆಲ್ಲಾ ಪ್ಲಾಸ್ಟಿಕ್ ತ್ಯಾಜ್ಯ ತಾಣದಲ್ಲಿ ಆಹಾರ ಅರಸುತ್ತಿರುವ ನೂರಾರು ಚಿತ್ರಗಳು ನಮಗೆ ಬಂದಿವೆ, ಇದು ಅತ್ಯಂತ ದುಃಖಕರ ಸಂಗತಿ ಎಂದಿದ್ದಾರೆ.

ಪಶ್ಚಿಮ ಬಂಗಾಳದ ಸಿಲಿಗುರಿಯ ಅರಣ್ಯ ಪ್ರದೇಶದ ಕಾಡಾನೆಯೊಂದು ಫುಟ್‌ಬಾಲ್ ಗಾತ್ರದ ಪ್ಲಾಸ್ಟಿಕ್ ಉಂಡೆಯನ್ನು ನುಂಗುತ್ತಿರುವ ಚಿತ್ರ, ಅರಣ್ಯ ಇಲಾಖೆಯ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಹೊಟ್ಟೆ ಸೇರುವ ಪ್ಲಾಸ್ಟಿಕ್, ಆನೆಗಳ ಪ್ರಾಣಕ್ಕೇ ಕುತ್ತು ತರುತ್ತದೆ ಎನ್ನುವ ಬ್ರಿಟನ್ ಮೂಲದ ಸ್ವಯಂಸೇವಾ ಸಂಸ್ಥೆ 'ಎಲಿಫೆಂಟ್ ಫ್ಯಾಮಿಲಿ', 13 ದೇಶಗಳಲ್ಲಿ ಏಷ್ಯಾ ಮೂಲದ ಆನೆಗಳ ಆವಾಸವಿದೆ, ಅವುಗಳ ಪೈಕಿ 9ರಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ಹಾವಳಿ ಮಿತಿಮೀರಿದೆ ಎಂದು ವರದಿ ಮಾಡಿದೆ. ಕಳೆದ ವರ್ಷ ಚೆನ್ನೈನ ಗಿಂಡಿ ರಾಷ್ಟ್ರೀಯ ಉದ್ಯಾನದ ನಾಲ್ಕು ಜಿಂಕೆಗಳು ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದವು. ಪೋಸ್ಟ್ ಮಾರ್ಟಂ ಮಾಡಿದಾಗ ನಾಲ್ಕೂ ಜಿಂಕೆಗಳ ಹೊಟ್ಟೆಯಲ್ಲಿ ತಲಾ ಆರು ಕೆ.ಜಿಯಷ್ಟು ತೂಕದ ಪ್ಲಾಸ್ಟಿಕ್ ಪತ್ತೆಯಾಗಿತ್ತು. ಉದ್ದಬಾಲದ ಮರದ ಇಲಿಗಳು ಗೋವಾದ ಕಾವ್ರೆಮ್‌ನಲ್ಲಿ ಬಳಸಿ ಬಿಸಾಡಿದ ಹಾಲಿನ ಪ್ಯಾಕೆಟ್ ಅನ್ನೇ ಮನೆ ಮಾಡಿಕೊಂಡಿವೆ!



ತಮಿಳುನಾಡಿನ ನೀಲಗಿರಿಯ ಕಂದು ಪುನುಗು ಬೆಕ್ಕುಗಳು ವಿನಾಶದ ಅಂಚಿನಲ್ಲಿವೆ. ಇವು ಪಶ್ಚಿಮ ಘಟ್ಟಗಳಲ್ಲಿ ಮಾತ್ರ ಆವಾಸ ಹೊಂದಿದ್ದು, ಪ್ಲಾಸ್ಟಿಕ್ ತ್ಯಾಜ್ಯದಲ್ಲಿ ಆಹಾರ ಅರಸುವುದನ್ನು ರೂಢಿ ಮಾಡಿಕೊಂಡಿವೆ. ಗುರುಗ್ರಾಮದ ಹಳದಿ ಟಿಟ್ಟಿಭ ಪಕ್ಷಿಗಳು, ಮಹಾರಾಷ್ಟ್ರದ ತಿಪೇಶ್ವರ್ ಅಭಯಾರಣ್ಯದ ಹುಲಿ, ಲಡಾಕ್ ಪ್ರದೇಶದ ಹಿಮಾಲಯನ್ ಮರ್ಮಟ್, ರನ್ ಆಫ್ ಕಛ್‌ನ ಯುರೇಶಿಯನ್ ಹದ್ದು, ಅಹಮದ್ ನಗರದ ಹುಲ್ಲುಗಾವಲಿನ ತೋಳ, ಧಾರವಾಡದ ನೀರಹಾವುಗಳೆಲ್ಲ ಪ್ಲಾಸ್ಟಿಕ್ ಕಸದ ನಡುವೆಯೇ ತಮ್ಮ ನೆಲೆ ಕಂಡುಕೊಳ್ಳುವ ಪ್ರಯತ್ನ ನಡೆಸಿವೆ ಎಂಬಂತೆ ಕಾಣುವ ಅನೇಕ ಚಿತ್ರಗಳು ಈಗಾಗಲೇ ಇನ್‌ಸ್ಟಾಗ್ರಾಂನ ಭಿತ್ತಿಯಲ್ಲಿವೆ.

ನೀತಿ ಆಯೋಗದ ಪ್ರಕಾರ, ದೇಶದ ಶೇ 70ರಷ್ಟು ನೀರಿನ ತಾಣಗಳು ಕಲುಷಿತಗೊಂಡಿದ್ದು, ಜಲಚರಗಳು ಮೈಕ್ರೊ ಪ್ಲಾಸ್ಟಿಕ್‌ನಿಂದ ಗಂಭೀರ ಅಪಾಯ ಎದುರಿಸುತ್ತಿವೆ. ಹವಳ ಜೀವಿಗಳ ಹೊಟ್ಟೆಯಲ್ಲೂ ಪ್ಲಾಸ್ಟಿಕ್‌ನ ವಿಷ ಸೇರಿದೆ. ನಾವೆಲ್ಲ ಕಾಡನ್ನು ನುಂಗಿ ನೊಣೆದಿರುವುದರಿಂದ ಮನುಷ್ಯನ ಆವಾಸಕ್ಕೆ ತೀರಾ ಹತ್ತಿರ ಬಂದಿರುವ ವನ್ಯಜೀವಿಗಳ ಆಹಾರ ಕ್ರಮವೂ ಬದಲಾಗಲಿದೆ, ಇದು ದೊಡ್ಡ ಪಾರಿಸರಿಕ ಅಸಮತೋಲನದ ಮುನ್ಸೂಚನೆ ಎಂಬುದು ತಜ್ಞರ ಅಭಿಮತ.

ವಾಚಕರ ವಾಣಿ

ಬಸವಳಿಯುತ್ತಿದ್ದಾರೆ ಪ್ರಯಾಣಿಕರು

ರಾಜ್ಯದಾದ್ಯಂತ ಸಾರಿಗೆ ನಿಗಮಗಳ ಬಸ್‌ಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ನಾಗರಿಕರು ಪಡಬಾರದ ಕಷ್ಟ ಅನುಭವಿಸುತ್ತಿದ್ದಾರೆ. ನಿತ್ಯ ಇವುಗಳನ್ನು ಅವಲಂಬಿಸಿದ್ದ ಕಾರ್ಮಿಕರು, ವಿದ್ಯಾರ್ಥಿಗಳು, ವಿವಿಧ ಇಲಾಖೆಗಳ ನೌಕರರು, ಪರ ಊರಿಗೆ ತೆರಳಬೇಕಾದ ಇತರ ಪ್ರಯಾಣಿಕರು ಲಾಕ್‌ಡೌನ್ ಕಾಲದ ಪರಿಸ್ಥಿತಿ ಅನುಭವಿಸುವಂತಾಗಿದೆ. ಸಾರಿಗೆ ನಿಗಮಗಳ ಬಸ್‌ಗಳು ವಿಶ್ರಾಂತಿ ಪಡೆಯುತ್ತಿರುವುದರಿಂದ ಸರ್ಕಾರಕ್ಕೂ ನಷ್ಟ ತಪ್ಪಿದ್ದಲ್ಲ. ಜನರ ಓಡಾಟಕ್ಕೆ ಅವಶ್ಯವಾದ ಬಸ್‌ಗಳ ಕೊರತೆಯಿಂದ ಕೆಲವೆಡೆ ಖಾಸಗಿ ವಾಹನಗಳವರು ಮನ ಬಂದಂತೆ ಪ್ರಯಾಣಿಕರಿಂದ ಸುಲಿಗೆ ಮಾಡುತ್ತಿದ್ದಾರೆ. ಇದರಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ವ್ಯಕ್ತವಾಗುವಂತಹ ಸಂದರ್ಭ ಸೃಷ್ಟಿಯಾಗಿದೆ.

ಕೊರೊನಾ ಹೊಡೆತ, ಅತಿವೃಷ್ಟಿ, ಅನಾವೃಷ್ಟಿ, ಲಾಕ್‌ಡೌನ್‌ನಂತಹ ಕಹಿ ವಿದ್ಯಮಾನಗಳಿಂದ ಜನ ಬಸವಳಿದಿದ್ದಾರೆ. ಇದನ್ನೆಲ್ಲ ಗಮನಿಸಿದರೆ, ಭವಿಷ್ಯದಲ್ಲಿ ಇನ್ನೂ ಏನೇನು ಸಂಕಷ್ಟ ಎದುರಾಗಬಹುದೋ ಎಂಬ ಚಿಂತೆ ನಾಗರಿಕರನ್ನು ಕಾಡುತ್ತಿದೆ. ಸಾರಿಗೆ ಸಮಸ್ಯೆಗೆ ಶೀಘ್ರ ಪರಿಹಾರ ದೊರಕಿಸುವುದು ಅಗತ್ಯ. ಇದಕ್ಕೆ ಸರ್ಕಾರ ವೇದಿಕೆ ಕಲ್ಪಿಸಲಿ. ನೌಕರರು ಸಹಕರಿಸಲಿ.

ಮಹಾಂತೇಶ ರಾಜಗೋಳಿ, ಬೈಲಹೊಂಗಲ

ಹೇಳಿಕೆ ಜಗಜ್ಜಾಹೀರು: ಆದೇಶದ ಉಲ್ಲಂಘನೆ

ಲೈಂಗಿಕ ದೌರ್ಜನ್ಯದ ಪ್ರಕರಣಗಳಲ್ಲಿ ದೌರ್ಜನ್ಯಕ್ಕೊಳಗಾದ ಮಹಿಳೆಯು ಸಿಆರ್‌ಪಿಸಿ ಸೆಕ್ಷನ್ 164ರ ಅನ್ವಯ ದಂಡಾಧಿಕಾರಿಗಳ ಸಮಕ್ಷಮ ನೀಡುವ ಹೇಳಿಕೆಯು ಗೋಪ್ಯವಾಗಿರಬೇಕು. ಆ ಮಹಿಳೆಯು ನೀಡುವ ಹೇಳಿಕೆಯನ್ನು ಬಹಿರಂಗಪಡಿಸುವಂತಿಲ್ಲ. ತನಿಖೆ ಮುಗಿದು ದೋಷಾರೋಪ ಪಟ್ಟಿ ಸಲ್ಲಿಸುವವರೆಗೂ ಈ ಹೇಳಿಕೆಯ ಅಂಶಗಳು ಆರೋಪಿಗೆ ತಿಳಿಯಬಾರದು ಎಂದು ಸುಪ್ರೀಂ ಕೋರ್ಟ್ ಹಲವಾರು ಬಾರಿ ತೀರ್ಪು ನೀಡಿದೆ. ಅಷ್ಟೇ ಅಲ್ಲ, ಈ ಸೆಕ್ಷನ್‌ನ ಅನ್ವಯ ಯಾವುದೇ ವ್ಯಕ್ತಿಯು ದಂಡಾಧಿಕಾರಿಗಳ ಸಮಕ್ಷಮ ಹೇಳಿಕೆ ನೀಡಲಿದ್ದಾರೆ ಎಂಬ ವಿಷಯವನ್ನೂ ಬಹಿರಂಗಪಡಿಸುವಂತಿಲ್ಲ.

ಕಾನೂನು ಪ್ರಕ್ರಿಯೆ ಹೀಗಿರುವಾಗ, ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ ಸಿ.ಡಿ ಪ್ರಕರಣದಲ್ಲಿ ಸಂತ್ರಸ್ತೆಯು ಸಿಆರ್‌ಪಿಸಿ ಸೆಕ್ಷನ್ 164ರ ಅನ್ವಯ ಹೇಳಿಕೆ ನೀಡಲಿರುವ ವಿಷಯ ಬಹಿರಂಗವಾಗಿ ಎಲ್ಲಾ ಮಾಧ್ಯಮಗಳಲ್ಲಿ ಜಗಜ್ಜಾಹೀರಾಯಿತು. ಜೊತೆಗೆ ಆಕೆ ನೀಡಿದ್ದಾರೆ ಎಂಬ ಹೇಳಿಕೆಯ ಸಾರಾಂಶವೂ ಸಾರ್ವಜನಿಕವಾಗಿ ಬಟಾಬಯಲಾಯಿತು. ಇದು ಸುಪ್ರೀಂ ಕೋರ್ಟ್ ಆದೇಶದ ಉಲ್ಲಂಘನೆ.

ಪಿ.ಜೆ.ರಾಘವೇಂದ್ರ, ಮೈಸೂರು

ಸಂವಿಧಾನಾತ್ಮಕ ಸಂಸ್ಥೆ ಮಾದರಿಯಾಗಿರಲಿ

ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಪಾತಾಳಕ್ಕೆ ಇಳಿದಿರುವ ಕುರಿತ ಸಂಪಾದಕೀಯ (ಪ್ರ.ವಾ., ಏ. 10), ಆಯೋಗದ ನಡವಳಿಕೆ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿದೆ. ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ ನಡೆಸಿಕೊಡಬೇಕಾದದ್ದು ಆಯೋಗದ ಆದ್ಯ ಕರ್ತವ್ಯ. ಪ್ರಜಾ ಸರ್ಕಾರ ಯಶಸ್ವಿಯಾಗಬೇಕಾದರೆ ಚುನಾವಣೆಯು ಪ್ರಾಮಾಣಿಕವಾಗಿ ನಡೆಯಬೇಕು. ಆಯೋಗವು ಪಕ್ಷಪಾತ ಧೋರಣೆ ತಾಳಿದರೆ ಪ್ರಜಾಪ್ರಭುತ್ವ ವಂಚನೆಗೆ ಒಳಗಾಗುತ್ತದೆ ಎಂಬ ಅನುಮಾನ ಜನರಲ್ಲಿ ಉಂಟಾಗುತ್ತದೆ. ಸಂವಿಧಾನಾತ್ಮಕ ಸಂಸ್ಥೆ ಹೀಗಾದರೆ ದೇಶದ ಗತಿ ಏನು?

ನಂಜನಹಳ್ಳಿ ನಾರಾಯಣ, ಬೆಂಗಳೂರು

ರಾಮಾಯಣ ಕಾಲದಲ್ಲಿ ತಿರುಪತಿ ಇತ್ತೇ?

ತಿರುಪತಿಯನ್ನು ಭೂವೈಕುಂಠವನ್ನಾಗಿ ರೂಪಿಸಲು ವೇದ ಪಂಡಿತರು ಸ್ಥಳಪುರಾಣವನ್ನು ರಚಿಸುವ ಮೂಲಕ ಕ್ಷೇತ್ರಕ್ಕೆ ದಿವ್ಯತ್ವವನ್ನು ತಂದುಕೊಡಲಿ. ಆದರೆ ತಿರುಪತಿಯ ಅಂಜನಾದ್ರಿಯಲ್ಲಿ ಆಂಜನೇಯನು ಜನ್ಮಿಸಿದನು ಎಂದು ಹೇಳಿ ಪುರಾಣವನ್ನು ತಿರುಚುವ ಮತ್ತು ಅನಗತ್ಯ ವಿವಾದಗಳಿಗೆ ಎಡೆಮಾಡಿಕೊಡುವುದು ಸರಿಯಲ್ಲ. ರಾಮಾಯಣ ರಚನೆಯ ಕಾಲದಲ್ಲಿ ತಿರುಪತಿ ಇತ್ತೇ ಎಂಬ ಪ್ರಶ್ನೆಯನ್ನು ಹುಡುಕುತ್ತಾ ಹೋದರೆ ಅಲ್ಲಿಯೇ ಉತ್ತರ ದೊರೆಯುತ್ತದೆ. ಉತ್ತರ ಭಾರತದಿಂದ ದಕ್ಷಿಣ ಭಾರತದವರೆಗೆ ರಾಮಾಯಣದಲ್ಲಿ ಉಕ್ತವಾಗಿರುವ ಭೌಗೋಳಿಕ ಸ್ಥಳಗಳ ವರ್ಣನೆಗಳು ಇಂದಿಗೂ ನಿತ್ಯ ಸತ್ಯವಾಗಿವೆ. ದಕ್ಷಿಣ ಭಾರತದಲ್ಲಿರುವ ಕಿಷ್ಕಿಂದೆ, ಪಂಪಾ ಸರೋವರ, ಶಬರಿ ಆಶ್ರಮ, ಅಂಜನಾದ್ರಿ, ವಾಲಿ-ಸುಗ್ರೀವರ ಪ್ರದೇಶಗಳು ರಾಮಾಯಣ ಕಾವ್ಯದಲ್ಲಿ ಉಲ್ಲೇಖವಾದ ಸ್ಥಳಗಳಿಗೆ ಸಾಕ್ಷಿಯಾಗಿವೆ. ಹೀಗಿದ್ದರೂ ತಿರುಪತಿಯ ಹೆಸರು ಮಾತ್ರ ಅಲ್ಲಿ ಎಲ್ಲಿಯೂ ಪ್ರಸ್ತಾಪವಾಗದಿರುವುದು ಇದಕ್ಕೆ ದೊರೆತ ಉತ್ತರ!

ತಿರುಪತಿ ಮತ್ತು ವೆಂಕಟರಮಣರ ಚರಿತ್ರೆಯು ವಿಷ್ಣು, ಪದ್ಮ, ಸ್ಕಂದ ಹಾಗೂ ಭಾಗವತ ಪುರಾಣಗಳಲ್ಲಿ ಪ್ರಸ್ತಾಪವಾಗಿರಬೇಕು. ಸತ್ಯವತಿ ಸುತ ವೇದವ್ಯಾಸರು ರಚಿಸಿದ ಭಾಗವತಾದಿ ಹದಿನೆಂಟು ಪುರಾಣಗಳ ಕಾಲವು ವಾಲ್ಮೀಕಿ ರಾಮಾಯಣ ಕಾವ್ಯದ ರಚನೆಯ ಕಾಲಕ್ಕಿಂತ ತದನಂತರದ್ದು ಎಂಬುದು ನಿರ್ವಿವಾದ! ವ್ಯಾಸರ ಪುರಾಣಗಳಲ್ಲಿ ಉಕ್ತವಾಗಿರುವ ಅದೆಷ್ಟೋ ಪುರಾಣ ಪ್ರಸಂಗಗಳು ರಾಮಾಯಣ ಕಾವ್ಯದಲ್ಲಿ ಪ್ರಸ್ತಾಪವಾಗಿವೆ. ಇಕ್ಷ್ವಾಕು ವಂಶ, ಸಗರ, ರಘು, ದಿಲೀಪ, ಭಗೀರಥ, ರಾಮ, ಪರಶುರಾಮ, ಗಂಗಾವತರಣ, ಶಿವಧನುಸ್ಸು ಇತ್ಯಾದಿ ವಿವರಗಳು ರಾಮಾಯಣದ ಪ್ರಾಚೀನತೆಗೆ ಸಾಕ್ಷಿಯೆನಿಸಿವೆ. ಇದಕ್ಕಿಂತ ಮಹತ್ವದ್ದೆಂದರೆ ರಾಮ ಭಕ್ತ, ಚಿರಂಜೀವಿ, ಮುಂದಿನ ಬ್ರಹ್ಮ ಪದವಿ ಪಡೆಯುವ, ಹನುಮ-ಭೀಮ-ಮುನಿ ಮೂರೂ ಅವತಾರಿಯಾಗಿ ಯುಗ ಯುಗಗಳಿಂದ ಸಾಗಿ ಬಂದು ಇಂದಿಗೂ ಪ್ರಾಣದೇವರೆಂದು ಪೂಜ್ಯನಾದ ಆಂಜನೇಯನನ್ನು ಸೃಷ್ಟಿಸಿದ ರಾಮಾಯಣ ಕಾವ್ಯ ಮತ್ತು ವಾಲ್ಮೀಕಿ ಪೂಜನೀಯರು.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಆಡು ಆಡು ಆಟ ಆಡೂ...

ಕ್ರಿಕೆಟ್, ಸಿನಿಮಾ ಅತಿರಥ ಮಹಾರಥರೆಲ್ಲ
ಉತ್ತೇಜಿಸುತ್ತಿದ್ದಾರೆ ನಮ್ಮ ಯುವಜನರಿಗೆ
ಆಡಿ ರಮ್ಮಿ, ಮೈ ಇಲೆವೆನ್, ಎಂಪಿಎಲ್,
ಗೆಲ್ಲಿ ಕೋಟಿ ಕೋಟಿ ಎಂದು
ತಾವು ಕೋಟಿ ಕೋಟಿ ಪಡೆದು,
ನಮ್ಮವರು ಆಡಿ ಕಳೆದುಕೊಳ್ಳುತ್ತಿದ್ದಾರೆ
ಕೂಡಿಟ್ಟ ಅಷ್ಟೋ ಇಷ್ಟೋ ಉಳಿತಾಯದ ಮನಿ
ಜೊತೆಗೆ ದಾಸರಾಗುತ್ತಿದ್ದಾರೆ ಆನ್‌ಲೈನ್ ಜೂಜಿಗೆ
ತಮ್ಮ ಆದರ್ಶ ಪುರುಷರ ಜಾಹೀರಾತು ದರ್ಶನ ಪಡೆದು!

ಸರ್ದಾರ್ ಎಂ. ತನಾಝ್, ಅರಸೀಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸೌಹಾರ್ದ ಯುಗಾದಿ

ಮನುಷ್ಯರ ನಡುವೆ ಅಪನಂಬಿಕೆ ಹೆಚ್ಚುತ್ತಿರುವ ವಿಷಮ ಕಾಲಘಟ್ಟದಲ್ಲಿ ಮನಸ್ಸಿಗೆ ಮುದ ನೀಡುವ ಯುಗಾದಿ ಬಂದಿದೆ. ಹೊಸ ವರ್ಷದ ಹರ್ಷದ ಜತೆಗೆ ಈ ಯುಗಾದಿಯು ಮನಸ್ಸುಗಳನ್ನು ಬೆಸೆಯುವ ಸಂದರ್ಭವೂ ಹೌದು. ರಾಜ್ಯದ ಕೆಲವೆಡೆಗಳಲ್ಲಿರುವ ಮಾದರಿ ಎನ್ನಬಹುದಾದ ಸಾಮರಸ್ಯದ ನಿದರ್ಶನಗಳನ್ನು ಹೆಕ್ಕಿ ತಂದು ನಿಮ್ಮ ಮುಂದಿರಿಸಿದ್ದೇವೆ



ಸಾಮರಸ್ಯ ಲಕ್ಕಸಕೊಪ್ಪದ ಅಂತಃಕರಣ

• ವೆಂಕಟೇಶ ಜಿ.ಎಚ್


ಬಾದಾಮಿ ತಾಲ್ಲೂಕು ಲಕ್ಕಸಕೊಪ್ಪದ ಭಜನಾ ತಂಡ

ಬಾಗಲಕೋಟೆ: 'ನಮ್ಮಲ್ಲಿ ಅವರಿವರು ಅನ್ನೋ ಭೇದ-ಭಾವ ಇಲ್ರೀ ಸರ. ರಮ್ಜಾನ ಹಬ್ಬದಾಗ ಹಿಂದೂ ಹುಡುಗರು ರೋಜಾ ಇರ್ತಾರ. ಯುಗಾದಿ ಹಬ್ಬದಾಗ ನಾವು ಅವರೊಂದಿಗೆ ಸೇರಿ ಜಾಗರಣ ಮಾಡ್ತೀವಿ.. ಊರು ಹುಟ್ಟಿದಾಗಿನಿಂದಲೂ ನಮ್ಮ ಹಿರೇರು ಇಂತಹದ್ದೊಂದು ಶ್ರದ್ಧಾ ಪಾಲಿಸಿಕೊಂಡು ಬಂದಾರ, ನಾವು ಅದನ್ನೇ ಮುಂದುವರೆಸೀವಿ...'

ಹೀಗೆಂದು ತಮ್ಮೂರಿನ ಸಾಮರಸ್ಯದ ಅಂತಃಕರಣವನ್ನು ಬಾದಾಮಿ ತಾಲ್ಲೂಕಿನ ಲಕ್ಕಸಕೊಪ್ಪದ ಶಿಕ್ಷಕ ಪೀರ್‌ಸಾಬ್ ವಾಲೀಕಾರ ಅನಾವರಣಗೊಳಿಸಿದರು.

ಲಕ್ಕಸಕೊಪ್ಪದಲ್ಲಿ ಶೇಕಡ 40ರಷ್ಟು ಮುಸ್ಲಿಮರು ಇದ್ದಾರೆ. ಉಳಿದ ಸಮಾಜದವರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. ಬಹುತೇಕರು ಕೃಷಿಯನ್ನೇ ಬದುಕನ್ನಾಗಿಸಿಕೊಂಡಿದ್ದಾರೆ.

ಗಂಗೆಪೂಜೆಯ ಸಂಪ್ರದಾಯ...: ಯುಗಾದಿ ದಿನ ಊರಿನ ಉಳಿದ ಸಮುದಾಯದವರಂತೆ ನಾವೂ ಕೊಳವೆಬಾವಿಗಳಿಗೆ ಪೂಜೆ ಸಲ್ಲಿಸಿ ಗಂಗಮ್ಮನ ಗೌರವಿಸುತ್ತೇವೆ ಎಂದು ವಾಲೀಕಾರ ಹೇಳುತ್ತಾರೆ. ಪಾಡ್ಯದ ದಿನ ಕೊಳವೆ ಬಾವಿಗೆ ಚಪ್ಪರ ಹಾಕಿ ನೆರಳು ಮಾಡುತ್ತೇವೆ. ಅಂದು ಇಡೀ ದಿನ ಊರಿನ ಐವರು ಹೆಣ್ಣುಮಕ್ಕಳು ಉಪವಾಸ ಇದ್ದು, ಸಂಜೆ ಕೊಳವೆಬಾವಿ ಬಳಿ ಬಂದು ಗಂಗೆಪೂಜೆ ನೆರವೇರಿಸುತ್ತಾರೆ. ಈ ವೇಳೆ ಅವರಿಗೆ ಉಡಿ ತುಂಬಿ, ಹೋಳಿಗೆ, ಸಜ್ಜಕ, ಕರ್ಚಿಕಾಯಿ, ಸಂಡಿಗೆ, ಬದನಿಕಾಯಿ ಪಲ್ಲೆ, ತರಹೇವಾರಿ ಚಟ್ನಿ, ಅನ್ನ, ಸಾಂಬಾರು–ಹೀಗೆ ಬಗೆ ಬಗೆಯ ಭಕ್ಷ್ಯಗಳನ್ನು ಒಳಗೊಂಡ ಊಟ ಮಾಡಿಸಲಾಗುವುದು. ಗಂಗಾಪೂಜೆ ನೆರವೇರಿಸುವ ಹೆಣ್ಣುಮಕ್ಕಳಲ್ಲಿ ಎಲ್ಲ ಸಮಾಜದವರು ಇರುವುದು ವಿಶೇಷ.

ಭಜನೆ–ರಿವಾಯತು...: ಯುಗಾದಿ ಅಮಾವಾಸ್ಯೆಯಂದು ಲಕ್ಕಸಕೊಪ್ಪದ ಸಿದ್ಧಾರೂಢ ಮಠದಲ್ಲಿ (ಶಿವಶರಣರ ಮಠ) ಜಾಗರಣೆ ನಡೆಯುತ್ತದೆ. ಈ ವೇಳೆ ಭಜನೆ–ರಿವಾಯತು ಪದಗಳನ್ನು ಹಾಡಲಾಗುತ್ತದೆ. ಭಜನಾ ತಂಡದಲ್ಲಿ ಹಿರಿಯರಾದ ಲಾಲ್‌ಸಾಬ್ ವಾಲೀಕಾರ ಹಾರ್ಮೋನಿಯಂ ನುಡಿಸಿದರೆ, ಮೊಗಲ್‌ಸಾಬ್ ಜಲಗೇರಿ, ಮನ್ಸೂರ್‌ಸಾಬ್, ರೆಹಮಾನ್‌ಸಾಬ್ ವಾಲೀಕಾರ ಭಜನಾ ಪದಗಳನ್ನು ಹಾಡುತ್ತಾರೆ. ಮಹಾದೇವಪ್ಪ ಗೌಡರು, ಮಲ್ಲನಗೌಡ ಗೌಡರು, ವಿಠ್ಠಲ ತಳವಾರ, ಪಾಂಡು ಆಡಿನ, ಯಲ್ಲಪ್ಪ ಕೊಪ್ಪದ ಭಜನಾ ತಂಡದ ಪ್ರಮುಖರು.

ಮಠಕ್ಕೆ ಹರಕೆ ಹೊತ್ತವರು, ಅಂದು ಭಜನೆ ಮಾಡುವವರು ಹಾಗೂ ಕೇಳುವವರಿಗೆ ಮುಂಜಾನೆ ಉಪಹಾರದ ವ್ಯವಸ್ಥೆ ಮಾಡುತ್ತಾರೆ.

ಬಸವ ಸನ್ನಿಧಿಯ ಭಾವೈಕ್ಯ

• ಬಿ.ಜಿ. ಪ್ರವೀಣಕುಮಾರ



ಯಾದಗಿರಿ: ಹುಣಸಗಿ ತಾಲ್ಲೂಕಿನ ಪುಟ್ಟ ಗ್ರಾಮ ಕೋಡೆಕಲ್ಲ, ಕಾಲಜ್ಞಾನಿ ಬಸವೇಶ್ವರ ದೇವಸ್ಥಾನದಿಂದ ಪ್ರಸಿದ್ಧ. ಇದು ಭಾವೈಕ್ಯದ ತಾಣವಾಗಿಯೂ ಹೆಸರು ಪಡೆದಿದೆ. ಯುಗಾದಿ ಹಬ್ಬದ ವೇಳೆ ಇಲ್ಲಿ ವಿಶಿಷ್ಟ ಪೂಜೆ ಜರುಗುತ್ತದೆ.

ಗ್ರಾಮದ ಪಕ್ಕದಲ್ಲಿರುವ ಕೃಷ್ಣಾ ನದಿಯಿಂದ ಪರಿಶಿಷ್ಟ ಸಮುದಾಯದವರು ತರುವ ನೀರಿನಿಂದ ಕೋಡೆಕಲ್ಲ ಕಾಲಜ್ಞಾನಿ ಬಸವೇಶ್ವರ ಗದ್ದುಗೆಗೆ ಗಂಧದ ಲೇಪನ ಮಾಡಲಾಗುತ್ತದೆ. ಹಲವಾರು ದಶಕಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಿದು.

ಯುಗಾದಿ ಅಮಾವಾಸ್ಯೆ ದಿನ ನಸುಕಿನ 5 ಗಂಟೆಗೆ ಪರಿಶಿಷ್ಟರು ನದಿಯಲ್ಲಿ ಸ್ನಾನ ಮಾಡಿಕೊಂಡು ಅಲ್ಲಿಂದ ಮಡಿ ನೀರು ಹೊತ್ತು ತರುತ್ತಾರೆ. ಅವರೆಲ್ಲ ಗ್ರಾಮದ ಸಮೀಪದ ಒಂದು ಕಟ್ಟೆಯಲ್ಲಿ ಕುಳಿತುಕೊಳ್ಳುತ್ತಾರೆ. ನಂತರ ಗ್ರಾಮಸ್ಥರು ಅವರನ್ನು ವಾದ್ಯಮೇಳ ಮೆರವಣಿಗೆಯೊಂದಿಗೆ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ.

ಆ ನೀರಿನಿಂದಲೇ ಸ್ನಾನ ಮಾಡಿ ಬಸವೇಶ್ವರ ಗದ್ದುಗೆಗೆ ಗಂಧ ಲೇಪನ ಮಾಡುತ್ತಾರೆ. ಆ ನಂತರ ಮತ್ತೊಮ್ಮೆ ಸ್ನಾನ ಮಾಡುತ್ತಾರೆ. ಹೀಗೆ ಎಲ್ಲ ಪೂಜೆ ಮುಗಿದ ನಂತರ ಮುಸ್ಲಿಮರಿಂದ ಕುರಾನ್ ಪಠಣವೂ ನಡೆಯುತ್ತದೆ. ಈ ಮೂಲಕ ಕೋಡೆಕಲ್ಲ ಮಠದಲ್ಲಿ ಭಾವೈಕ್ಯದ ಆರಾಧನೆ ನಡೆಯುತ್ತದೆ.

'ಇದು ತಲೆತಲಾಂತರದಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಬಸವೇಶ್ವರರ ಲೆಕ್ಕದಲ್ಲಿ ಎಲ್ಲ ಸಮುದಾಯವರು ಒಂದೇ. ಹೀಗಾಗಿ ಒಂದೊಂದು ಸಮುದಾಯಕ್ಕೆ ಒಂದೊಂದು ಸೇವೆ ಸಲ್ಲಿಸುವ ಅವಕಾಶ ಇಲ್ಲಿದೆ. ಈ ಬಾರಿ ಕೊರೊನಾ ಕಾರಣದಿಂದ ಸರಳವಾಗಿ ಪೂಜೆ ನೆರವೇರಿಸಲಾಗುವುದು' ಎಂದು ಮಹಲಿನಮಠ ದೇವಸ್ಥಾನದ ವೃಷಭೇಂದ್ರ ಅಪ್ಪ ಅವರು ಮಾಹಿತಿ ನೀಡಿದರು.

ಪ್ಲವ ಸಂವತ್ಸರದ ಯುಗಾದಿ

• ಹಿತ್ತಲ್ಳಿ ಸೂರ್ಯನಾರಾಯಣ ಭಟ್ಟ



ಶಾರ್ವರಿ ಸಂವತ್ಸರ ಕಳೆದು ಪ್ಲವ ಸಂವತ್ಸರ ಆರಂಭವಾಗಲಿದೆ. ಕಳೆದ ಶಾರ್ವರಿಯು ಕತ್ತಲೆಯನ್ನು ತೋರಿಸಿದೆ ಎಂದರೆ ತಪ್ಪಾಗಲಾರದು. ಕೊರೊನಾದ ಕರಿನೆರಳು ಇನ್ನೇನು ಕಡಿಮೆಯಾಯಿತು ಎನ್ನುವಷ್ಟರಲ್ಲಿ ಮರಳಿ ಬಂದಿದೆ. ಆದರೆ ಪ್ಲವ ಸಂವತ್ಸರ ಅದನ್ನು ಪರದೆಯ ಹಿಂದೆ ಸರಿಸಲಿ ಹಾಗೂ ಜಗತ್ತನ್ನು ಜಾಗೃತಿಯ ಕಡಲಲ್ಲಿ ಮುನ್ನಡೆಸಲಿ.

ಮಂಗಳವಾರ ಮತ್ತು ಬುಧವಾರ (2021ರ ಏಪ್ರಿಲ್ 13 ಮತ್ತು 14) ಕ್ರಮವಾಗಿ ಚಾಂದ್ರ ಮತ್ತು ಸೌರ ಯುಗಾದಿ. ಚಾಂದ್ರ ಸಂವತ್ಸರವು ಎಲ್ಲರಿಗೂ ಮಂಗಳದ ಮುಂಬೆಳಗಾಗಲಿ ಹಾಗೂ ಸೌರ ಸಂವತ್ಸರವು ಸೌಖ್ಯಕ್ಕಾಗಿ ಎಲ್ಲರ ಬುದ್ಧಿಯನ್ನು ಪ್ರಚೋದಿಸಲಿ. ಅಂದು ದೇವರನ್ನು ಸ್ಮರಿಸುತ್ತಾ ಬೆಳಗಿನಲ್ಲಿಯೇ ಎದ್ದು ಎಣ್ಣೆ ಹಚ್ಚಿ ಸ್ನಾನ ಮಾಡಿ ಹೊಸ ಬಟ್ಟೆಯನ್ನುಟ್ಟು ಹೊಸ ವರ್ಷದ ಪಂಚಾಂಗವನ್ನು ದೇವರ ಸಮ್ಮುಖದಲ್ಲಿಟ್ಟು ಪೂಜಿಸಿ ಬೇವು-ಬೆಲ್ಲ ಸೇವಿಸೋಣ.

ಕಹಿಯಾದ ಬೇವು ದುಃಖವನ್ನು ಸೂಚಿಸಿದರೆ ಸಿಹಿಯಾದ ಬೆಲ್ಲ ಸುಖವನ್ನು ಸೂಚಿಸುತ್ತದೆ. ಬಾಳು ಸಿಹಿ–ಕಹಿಗಳ ಮಿಶ್ರಣವೆಂದೂ ಅದನ್ನು ಹಾಗೆಯೇ ಸ್ವೀಕರಿಸುವುದು ಎಲ್ಲರಿಗೂ ಅನಿವಾರ್ಯವೆಂದೂ ಬೇವು–ಬೆಲ್ಲವನ್ನು ಸಾಂಕೇತಿಕವಾಗಿ ಪ್ರಸಾದವೆಂದು ಸ್ವೀಕರಿಸುವಾಗ ಹೇಳುವ ಶ್ಲೋಕದ ಅರ್ಥ ಹೀಗಿದೆ: ಬೇವಿನ ಚಿಗುರನ್ನು ಸವಿಯುವುದರಿಂದ ಆಯುಷ್ಯ ನೂರಾಗುತ್ತದೆ, ಶರೀರವು ವಜ್ರದಂತೆ ಬಲಗೊಳ್ಳುತ್ತದೆ, ಸಮಸ್ತ ಸಂಪತ್ತೂ ಲಭ್ಯವಾಗುತ್ತದೆ, ಎಲ್ಲಾ ಅನಿಷ್ಟಗಳೂ ನಿವಾರಣೆಯಾಗುತ್ತವೆ.


ಪಂಚಾಂಗ ಶ್ರವಣ: ಶ್ರೀ ಶಾಲಿವಾಹನ ಗತ ಶಕ 1943 ಪ್ಲವ ಸಂವತ್ಸರ, ಚೈತ್ರ ಮಾಸ, ಶುಕ್ಲ ಪಕ್ಷ, ವಸಂತ ಋತು, ಉತ್ತರಾಯಣ, ಪ್ರತಿಪತ್ ತಿಥಿ, ಮಂಗಳವಾರ, ಅಶ್ವಿನಿ ನಕ್ಷತ್ರ, ವಿಷ್ಕಂಭ ಯೋಗ ಮತ್ತು ಬವ ಕರಣ. ಹೀಗೆ ಚಾಂದ್ರ ಯುಗಾದಿಯ ಪಂಚಾಂಗ ಸಾರಾಂಶ. ಸೌರ ಯುಗಾದಿಯು ಬಿದಿಗೆ ಬುಧವಾರ, ಭರಣಿ ನಕ್ಷತ್ರ, ಪ್ರೀತಿ ಯೋಗ, ಕೌಲವ ಕರಣದಲ್ಲಿ ಬಂದಿದೆ.

ಫಲಶ್ರುತಿ: ಪ್ಲವ ಸಂವತ್ಸರದ ಫಲವು ಒಟ್ಟಿನಲ್ಲಿ ಒಳ್ಳೆಯದಲ್ಲ. ರಾಜನೂ ಮಂತ್ರಿಯೂ ಅರ್ಘಾಧಿಪನೂ ಮೇಘಾಧಿಪನೂ ಅಶುಭನಾದ ಕುಜನೇ ಆಗಿದ್ದಾನೆ. ಚಂದ್ರನು ಸೇನಾಧಿಪತಿಯೂ ಶುಕ್ರನು ಸಸ್ಯ ಮತ್ತು ನೀರಸಗಳ ಅಧಿಪತಿಯೂ ಬುಧನು ಧಾನ್ಯಾಧಿಪತಿಯೂ ಆಗಿರುವುದು ಶುಭವನ್ನು ಸೂಚಿಸುತ್ತದೆ. ಆದರೆ ರವಿಯು ರಸೇಶನಾಗಿರುವುದು ಒಳ್ಳೆಯದಲ್ಲ. ನವ ನಾಯಕರ ಫಲ. ಉಪನಾಯಕ ಫಲವೂ ತ್ರಯೋದಶ ನಾಯಕರ ಫಲವೂ ಹೀಗೆಯೇ ಮಿಶ್ರವಾಗಿದೆ.

ಸಂಕ್ರಾಂತಿ ಫಲ: ಈ ವರ್ಷ ಮಹೋದರೀ ಎಂಬ ಹೆಸರಿನ ಕಾಲ ಪುರುಷನು ಚೈತ್ರ ಶುಕ್ಲ ಪಾಡ್ಯ, ಮಂಗಳವಾರ, ರಾತ್ರಿ 2.40ಕ್ಕೆ ಮೇಷರಾಶಿಯನ್ನು ಪ್ರವೇಶಿಸುವನು. ಅವನು ಗೇರಿನ ಎಣ್ಣೆಯನ್ನು ಮೈಗೆ ಪೂಸಿಕೊಂಡು ಗಂಗಾ ನದಿಯಲ್ಲಿ ಸ್ನಾನ ಮಾಡಿ ಚಿತ್ರ ವಿಚಿತ್ರವಾದ ಬಟ್ಟೆಯನ್ನೂ ಬೆಳ್ಳಿಯ ಒಡವೆಯನ್ನೂ ಧರಿಸಿ, ರಕ್ತ ಚಂದನವನ್ನು ಲೇಪಿಸಿಕೊಂಡು, ರಂಜಲು ಹೂವಿನ ಮಾಲೆಯನ್ನು ಹಾಕಿಕೊಂಡು, ಸಣ್ಣಕ್ಕಿಯನ್ನು ಹಣೆಗೆ ಇಟ್ಟುಕೊಂಡು, ತಾಮ್ರ ಪಾತ್ರದಲ್ಲಿ ತಿನ್ನುತ್ತಾ, ಮಾವಿನ ಹಣ್ಣನ್ನು ಕೈಯಲ್ಲಿ ಹಿಡಿದು ಕೊಂಡು ಹಂದಿಯ ಮೇಲೆ ಕುಳಿತು, ಕಬ್ಬಿಣದ ಆಯುಧದೊಂದಿಗೆ ಹಳೆಯ ಕೊಡೆಯನ್ನು ಹಿಡಿದುಕೊಂಡು, ಮೃದಂಗ ವಾದ್ಯಗಳನ್ನು ಬಾರಿಸುವಾಗ, ವರ್ತಕರೊಂದಿಗೆ ನಾಚಿಕೆಯನ್ನು ಹೊಂದಿ, ಉತ್ತರ ದಿಕ್ಕಿನಿಂದ ಬಂದು ವಾಯವ್ಯ ದಿಕ್ಕನ್ನು ನೋಡುತ್ತಾ ಪಶ್ಚಿಮ ದಿಕ್ಕಿಗೆ ಪ್ರಯಾಣಿಸುತ್ತಾನೆ.

ಸಂಕ್ರಾಂತಿ ಪುರುಷನು ಉಪಯೋಗಿಸಿದ ವಸ್ತುಗಳು ತುಟ್ಟಿಯಾಗುವವು. ಅವನು ಹೋಗಿರುವ ಪಶ್ಚಿಮ ಹಾಗೂ ನೋಡಿರುವ ವಾಯವ್ಯದಿಕ್ಕಿಗೆ ಹಾನಿಯಾಗುತ್ತದೆ. ಅವನು ಬಂದಿರುವ ಉತ್ತರ ದಿಕ್ಕಿಗೆ ಶುಭವಾಗುತ್ತದೆ.

ಯುಗಾದಿ ಭವಿಷ್ಯ 2021


ಸಮೀರ ಆಚಾರ್ಯ ಮಣ್ಣೂರ

ಭವಿಷ್ಯ ತಿಳಿಯಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3wlmoCJ

ಯುಗಾದಿ ಪ್ಲವನಾಮ ಸಂವತ್ಸರ ಭವಿಷ್ಯ
ಏ. 13, 2021ರಿಂದ ಏ.1ರ 2022ರ ವರೆಗೆ

ಮೇಷ: ದಶಮಭಾವದ ಶನಿ ಮಕರ ರಾಶಿಯಲ್ಲಿದ್ದಾನೆ. ಅಧಿಕಾರ ಪ್ರಾಪ್ತಿ, ಉನ್ನತ ಹುದ್ದೆಯಲ್ಲಿ ಅಧಿಪತ್ಯ ಯೋಗವಿದೆ. ಸರ್ಕಾರಿ ನೌಕರಿ ಪ್ರಯತ್ನ ಮಾಡುವವರಿಗೆ ಅನುಕೂಲವಾಗಲಿದೆ. ಮನೆಯಲ್ಲಿ ಕಲಹಗಳು ಆಗುತ್ತವೆ. ಹಲ್ಲಿನ ತೊಂದರೆ, ಸರ್ಪ ಭಯ ಕಾಡಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಫಲ ಪಡೆಯುತ್ತಾರೆ. ಜಾಗ, ವಾಹನ ಖರೀದಿಗೆ ಯೋಗವಿದೆ, ಸರ್ಕಾರಿ ಕಾರ್ಯಗಳು, ದುರ್ಗಾರಾಧನೆ, ಉದ್ದಿನಬೇಳೆ ದಾನ ಮಾಡಿದರೆ ಒಳಿತಾಗುತ್ತದೆ.

ವೃಷಭ: ಸಾಧಾರಣ ಗುರುಬಲವಿದೆ. ಶನಿ ಭಾಗ್ಯಸ್ಥಾನದಲ್ಲಿ ಇರುವುದರಿಂದ ಹಣದ ಹರಿವು ನಿಧಾನವಾಗುತ್ತದೆ. ಕಾರ್ಯ ಕಲಾಪಗಳು ಮಂದಗತಿಯಲ್ಲಿ ಸಾಗುತ್ತವೆ. ಏಪ್ರಿಲ್ ಮತ್ತು ಮೇ ಬಳಿಕ ಹೊಸ ಮನೆ ನಿರ್ಮಾಣ, ವಾಹನ ಖರೀದಿಗೆ ಉತ್ತಮ ಸಮಯ. ಸರ್ಕಾರಿ ನೌಕರಿಯಲ್ಲಿ ಇರುವವರಿಗೆ ಬಡ್ತಿ ಸಿಗಲಿದೆ. ಆಸ್ತಿ ವಿಷಯದಲ್ಲಿ ತೊಂದರೆಯಾಗಲಿದೆ. ವೃದ್ಧರಿಗೆ ಹಾಗೂ ತಾಂತ್ರಿಕ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ದಕ್ಷಿಣ ದೇಶಗಳ ತೀರ್ಥಯಾತ್ರೆ ಮಾಡಲು ಈ ವರ್ಷ ಸಕಾಲ. ಸ್ತ್ರೀ ದೇವರ ಆರಾಧನೆ, ದುರ್ಗಾ ಪಾರಾಯಣ, ಪವಮಾನ ಹೋಮ ಕಷ್ಟಗಳನ್ನು ದೂರ ಮಾಡುತ್ತದೆ.

ಮಿಥುನ: ಶರೀರದ ಕೆಳಭಾಗದ ಅಂಗಗಳಿಗೆ ಅನಾರೋಗ್ಯ ಕಾಡುವ ಭೀತಿಯಿರುತ್ತದೆ. ಚರ್ಮರೋಗ ಸಂಭವಿಸಬಹುದು. ಸಾಲದ ಬಾಧೆ ಕಾಡಲಿದ್ದು, ಮಕ್ಕಳ ವಿಚಾರದಲ್ಲಿ ಪೋಷಕರಿಗೆ ಚಿಂತೆ ಬಾಧಿಸಲಿದೆ. ಹಿರಿಯರು ಮನಸ್ಸು ವಿಚಲಿತಗೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಜೂನ್, ಜುಲೈ ವೇಳೆಗೆ ಆಸ್ತಿ ವಿಷಯದಲ್ಲಿ ಸಮಸ್ಯೆಯಾಗಲಿದೆ. ಪರಿಹಾರಾರ್ಥ 23 ಸಾವಿರ ಶನಿಜಪ, ಎಣ್ಣೆ, ಕಂಬಳಿ ಹಾಗೂ ಧಾನ್ಯಗಳನ್ನು ದಾನ ಮಾಡಬೇಕು. ಅಶ್ಲೇಷ ಬಲಿ, ಸುಬ್ರಹ್ಮಣ್ಯ ದೇವರ ಪೂಜೆ, ಶನಿದೇವರ ಆರಾಧನೆ ಸೂಕ್ತ

ಕರ್ಕ: ರಕ್ತಕ್ಕೆ ಸಂಬಂಧಿಸಿದ ಕಾಯಿಲೆಗಳು, ಕೆಲಸಕ್ಕೆ ಆಲಸ್ಯತನ ಕಾಡುತ್ತದೆ. ಮನೆ ಹಾಗೂ ಕೆಲಸ ಮಾಡುವ ವಾತಾವರಣದಲ್ಲಿ ವಿರಸ ಉಂಟಾಗುತ್ತದೆ. ಸ್ತ್ರೀಯರಿಂದ ಪುರುಷರು ಅಪಮಾನಕ್ಕೆ ಒಳಗಾಗುವ ಸಾಧ್ಯತೆಯಿರುತ್ತದೆ. ಸರ್ಪ ಭಯ, ಮಾನಸಿಕ ಹಾಗೂ ದೈಹಿಕ ಬಾಧೆ ಇರುತ್ತದೆ. ವಿದ್ಯಾರ್ಥಿಗಳಿಗೆ ಏಕಾಗ್ರತೆ ಕಡಿಮೆಯಾಗುತ್ತದೆ. ಅಧಿಕಾರಿಗಳಿಗೆ ಬಡ್ತಿ ಕಠಿಣವಿದೆ. ಗುರುಚರಿತ್ರೆಯ ಪಾರಾಯಣ, ಜನ್ಮ ನಕ್ಷತ್ರದ ಆಧಾರದ ಮೇಲೆ ಶನಿದೇವರಿಗೆ ಅಭಿಷೇಕ ಮಾಡಿಸಿ.

ಸಿಂಹ: ಶನಿ ಮಹಾರಾಜ ಒಳ್ಳೆಯ ಫಲಗಳನ್ನು ನೀಡಲಿದ್ದಾನೆ. ಕುಟುಂಬದಲ್ಲಿ ಪ್ರೀತಿ, ವಾತ್ಸಲ್ಯದಿಂದ ನಡೆದುಕೊಂಡು ಹೋಗುವ ವಾತಾವರಣ ನಿರ್ಮಾಣವಾಗಲಿದೆ. ಜೂನ್‌ನಿಂದ ಎಲ್ಲ ಕೆಲಸಗಳು ಮಂದಗತಿಯಲ್ಲಿ ಸಾಗುತ್ತವೆ. ಸಾಲದ ಹಾವತ್ತಾರಗಳನ್ನು ಜವಾಬ್ದಾರಿಯುತವಾಗಿ ನಿಭಾಯಿಸಿದರೆ ನಿಮ್ಮ ಹಣ ನಿಮಗೆ ವಾಪಸ್ ಬರುತ್ತದೆ. ಸರ್ಕಾರಿ ನೌಕರಿ, ಬ್ಯಾಂಕ್, ಶೈಕ್ಷಣಿಕ ರಂಗದಲ್ಲಿ ಕೆಲಸ ಮಾಡುತ್ತಿರುವವರಿಗೆ ಉತ್ತಮ ಲಾಭ. ಏಪ್ರಿಲ್ ಹಾಗೂ ಮೇನಲ್ಲಿ ಆಸ್ತಿ ಖರೀದಿ ಸಾಧ್ಯತೆ. ರಾಜಕಾರಣಿಗಳಿಗೆ ಜನ ಬೆಂಬಲ ಸಿಗುತ್ತದೆ. ದುರ್ಗಾ ಸ್ತುತಿ, ಸುಬ್ರಹ್ಮಣ್ಯ ದೇವರ ಆರಾಧನೆ, ದಾನ ಮತ್ತು ಚಂಡಿ ಹೋಮ ಮಾಡಬೇಕು.

ಕನ್ಯಾ: ದ್ವಂದ್ವ ಹಾಗೂ ಚಂಚಲದ ಮನಸ್ಥಿತಿ ಇರಲಿದ್ದು, ಪಂಚಮದಲ್ಲಿ ಶನಿದೇವರ ಕಾಟ ಇರಲಿದೆ. ವರ್ಷಪೂರ್ತಿ ಚಿಂತೆಯಲ್ಲಿ ಕಳೆದುಹೋದೆನೆಲ್ಲ ಎನ್ನುವ ಮನಸ್ಥಿತಿ ಕಾಡುತ್ತದೆ. ದಾಂಪತ್ಯದ ಭಿನ್ನಾಭಿಪ್ರಾಯ ಕುಟುಂಬದ ಕಲಹಕ್ಕೆ ಕಾರಣವಾಗುತ್ತದೆ. ಗುರು ಕುಂಭ ರಾಶಿಯಲ್ಲಿ ಸಂಚಾರ ಮಾಡುವ ಕಾರಣ ಹಳೆಯ ಮನೆ ಹಾಗೂ ವಾಹನ ಖರೀದಿ ಸಾಧ್ಯತೆಯಿದೆ. ದುಶ್ಚಟಗಳನ್ನು ಬಿಡಲು ಸರಿಯಾದ ಸಮಯ. ಹೆಣ್ಣುಮಕ್ಕಳಿಗೆ ಗುರು ಬಲವಿದೆ. ಅವರು ಮಾಡುವ ಕೆಲಸದಲ್ಲಿ ಉನ್ನತಿ ಸಿಗಲಿದೆ. ಶನಿದೇವರ ಪೂಜೆ, ಆರಾಧನೆ ಮತ್ತು ವಸ್ತ್ರ ದಾನ ಮಾಡಬೇಕು.

ತುಲಾ: ಕುಟುಂಬದಲ್ಲಿ ಕಲಹ ಕಾಡುತ್ತದೆ. ಮುಖದ ರೋಗಗಳು ಬಾಧಿಸಲಿವೆ. ಮನಸ್ಸಿನ ಸುಖ ಕ್ಷೀಣಿಸುತ್ತದೆ. ಮಕ್ಕಳಿಗೆ ಮಂಗಳ ಕಾರ್ಯಕ್ಕೆ ನವೆಂಬರ್ ಬಳಿಕ ಉತ್ತಮ ಸಮಯ. ವಿದ್ಯಾರ್ಥಿಗಳಿಗೆ ಹಿನ್ನಡೆ ಕಾಣಲಿದ್ದು, ಮುಂದೆ ಬರಲು ಗುರುಸ್ಮರಣೆ ಮಾಡಬೇಕು. ಅಧಿಕಾರಿಗಳಿಗೆ ಅಷ್ಟೊಂದು ಜನಬಲವಿಲ್ಲ. ದ್ವೇಷಿಸುವ ಜನರೇ ಪ್ರೀತಿಯಿಂದ ಕಾಣುವಂತಾಗುತ್ತದೆ. ತುಲಾ ರಾಶಿಯವರು ಹೋಗುವ ಕ್ಷೇತ್ರಗಳಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಶನಿ ಜಪ, ಶನಿ ಶಾಂತಿ, ದುರ್ಗಾ ನಮಸ್ಕಾರ ಪೂಜೆ ಮಾಡಿ; ಕಂಬಳಿ, ಕಬ್ಬಿಣದ ವಸ್ತುಗಳನ್ನು ದಾನ ಮಾಡಬೇಕು.

ವೃಶ್ಚಿಕ: ಈ ರಾಶಿಯವರು ಸ್ಥಿರ ಮನಸ್ಥಿತಿ ಹೊಂದಿರುತ್ತಾರೆ. ಎಲ್ಲವನ್ನೂ ಗುಟ್ಟಾಗಿ ಇಟ್ಟುಕೊಳ್ಳಬೇಕು ಎಂದು ಬಯಸುತ್ತಾರೆ. ನ್ಯಾಯಾಲಯದ ವಿಚಾರಗಳಲ್ಲಿ ಮುಂದಕ್ಕೆ ಹೋಗಲು ಸರಿಯಾದ ಸಮಯವಲ್ಲ. ಮೂರನೇ ಶನಿ ಸಂಪತ್ತು ಕೊಟ್ಟರೂ ಗುರುಬಲವಿಲ್ಲದ ಕಾರಣ ಕೈಗೆ ಸಿಗುವುದಿಲ್ಲ. ಸಂಗೀತ, ಕಲೆ, ವಕೀಲ, ವೈದ್ಯ ಹಾಗೂ ವಿದ್ಯಾರ್ಥಿಗಳಿಗೆ ಸಾಧಾರಣ ಫಲಗಳಿವೆ. ಜೂನ್, ಜುಲೈನಲ್ಲಿ ಹಿರಿಯರಿಗೆ ಶಸ್ತ್ರಚಿಕಿತ್ಸೆ ಮಾಡಿಸುವ ಸಾಧ್ಯತೆಯಿದೆ. ನೌಕರಿಯಲ್ಲಿ ಸ್ಥಾನಪಲ್ಲಟ, ಸರ್ಕಾರಿ ನೌಕರರಿಗೆ ಭಯದ ವಾತಾವರಣ ಉಂಟಾಗಲಿದೆ. ಗುರುಚರಿತ್ರೆ ಪಾರಾಯಣ, ಗುರುಜಪ ಹಾಗೂ ಗುರು ಶಾಂತಿ ಮಾಡಬೇಕು.

ಧನು: ದ್ವಂದ್ವ ಸ್ವಭಾವ ಈ ರಾಶಿಯವರದ್ದು. ದೇಹಾರೋಗ್ಯ ಹದಗೆಡುವ ಸ್ಥಿತಿ ಇದೆ. ಆಹಾರ, ವಿಹಾರದಲ್ಲಿ ಎಚ್ಚರಿಕೆಯಿಂದ ಇರಬೇಕು. ಸಾಲದ ಬಾಧೆ ಕಾಡಲಿದೆ. ಗುರುಗ್ರಹ ಪೂಜೆ ಮಾಡಿದರೆ ವಿವಾಹಕ್ಕೆ ಉತ್ತಮ ಫಲ ಸಿಗುತ್ತದೆ. ವಾಹನ, ಭೂಮಿ ಖರೀದಿಗೆ ಮುಂದಾದರೆ ಮೋಸ ಹೋಗುವ ಸಾಧ್ಯತೆಯಿದೆ. ಏಪ್ರಿಲ್ ಹಾಗೂ ಮೇನಲ್ಲಿ ಮನೆಯಲ್ಲಿ ಒಳ್ಳೆಯ ಕಾರ್ಯಕ್ರಮ ನಡೆಯಲಿವೆ. ರೈತರಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯ ಸಿಗುವುದಿಲ್ಲ. ಶನಿ ಜಪ, ರಾಹು ಜಪ, ಉದ್ದು, ಹುರುಳಿ ಮತ್ತು ಎಳ್ಳು ದಾನ ಮಾಡಬೇಕು.

ಮಕರ: ಪ್ರಾರಂಭದಲ್ಲಿ ಭಿನ್ನಾಭಿಪ್ರಾಯಗಳು, ಆರೋಗ್ಯ ಸಮಸ್ಯೆ ಕಾಡುತ್ತವೆ. ಜನ್ಮರಾಶಿಯಲ್ಲಿ ಶನಿ ಇರುವ ಕಾರಣ ದುಃಖ ಹೆಚ್ಚಿರುತ್ತದೆ. ಹಣ ವ್ಯರ್ಥವಾಗಿ ಖರ್ಚಾಗುತ್ತದೆ. ಮೂಲ ಜಾತಕದಲ್ಲಿ ಶನಿ ಬಲಿಷ್ಠವಾಗಿದ್ದರೆ ಮಾತ್ರ ದುಷ್ಪರಿಣಾಮಗಳು ಉತ್ತಮ ಪರಿಣಾಮಗಳಾಗಿ ಬದಲಾಗುತ್ತವೆ. ವಿದ್ಯಾರ್ಥಿಗಳಿಗೆ ಓದಿನತ್ತ ಆಸಕ್ತಿ ಕಡಿಮೆ ಇರುತ್ತದೆ. ಗುರುವಿನ ಅನುಗ್ರಹವಿದ್ದು, ಗುರುವಿನ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ಕುಟುಂಬದಲ್ಲಿ ಅನಾರೋಗ್ಯಕರ ಪರಿಸ್ಥಿತಿ, ಉದ್ಯೋಗದಲ್ಲಿ ಸ್ಥಾನಪಲ್ಲಟವಾಗಲಿದೆ. ರಾಜಕೀಯದಲ್ಲಿ ಇರುವವರಿಗೆ ಮಂತ್ರಿಸ್ಥಾನ ಸಿಗುವ ಯೋಗವಿದೆ. ಶನಿ ಶಾಂತಿ, ಶನಿ ಜಪ, ಸ್ತೋತ್ರಗಳ ಪಠಣ, ಲಕ್ಷ್ಮಿ ನರಸಿಂಹದೇವರ ಧ್ಯಾನ ಮಾಡಬೇಕು.

ಕುಂಭ: ಸಾಡೇಸಾಥಿಯ ಪ್ರಾರಂಭ. ಜನ್ಮರಾಶಿಯಲ್ಲಿ ಶನಿ ಇರಲಿದ್ದು, ಸಾಲದ ಬಾಧೆ ಹೆಚ್ಚಾಗಲಿದೆ. ಕುಟುಂಬದಲ್ಲಿ ಮನಸ್ತಾಪ ಉಂಟಾಗಿ ಅಶಾಂತಿ ಕಾಡುತ್ತದೆ. ಆಸ್ತಿ ವಿಷಯದಲ್ಲಿ ಅಣ್ಣ–ತಮ್ಮಂದಿರ ಕಲಹವಾಗಲಿದೆ. ಶನಿದೇವರ ಆರಾಧನೆಯೊಂದೇ ಜೀವನ ಉತ್ತಮವಾಗಿಸುತ್ತದೆ. ವಕೀಲ, ವಿದ್ಯಾರ್ಥಿಗಳಿಗೆ ಶುಭಕರವಲ್ಲ. ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು. ವ್ಯಾಪಾರಿಗಳಿಗೆ ಲಾಭ ಸಿಗಲಿದೆ. ವೈದ್ಯರಿಗೆ, ಸಾರ್ವಜನಿಕರಿಂದ ತೊಂದರೆಯಾಗಲಿದೆ. ವಾಹನ ಹಾಗೂ ಸ್ಥಿರಾಸ್ತಿಗಳ ಖರೀದಿಗೆ ಯೋಗ್ಯ ಸಮಯವಲ್ಲ. ಕಂಬಳಿ ದಾನ, ಶನಿ ಜಪ, ಗಣಹೋಮ ಮಾಡಬೇಕು.

ಮೀನ: ಚರ್ಮರೋಗ ಕಾಡಲಿದೆ. ಸರ್ಕಾರಕ್ಕೆ ಮರಳಿ ಹಣ ಕೊಡುವ ಸ್ಥಿತಿ ಬರಬಹುದು. ಹಿರಿಯರ ಜೊತೆ ಜಗಳವಾಗುವ ಪರಿಸ್ಥಿತಿಯಿರಲಿದೆ. ಉಪನಯನಕ್ಕೆ ಗುರುಬಲವಿಲ್ಲ. ಶಿಕ್ಷಣದಲ್ಲಿ ಬದಲಾವಣೆ ಆಗುತ್ತದೆ. ಓದಬೇಕು ಎನ್ನುವ ಛಲ ಬೆಳೆಯುತ್ತದೆ. ವಕೀಲರಿಗೆ ಶುಭಪ್ರದವಾಗಲಿದೆ. ದೂರದಲ್ಲಿ ಉದ್ಯೋಗ ಸಿಗುತ್ತದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಗುರಿ ಸಾಧನೆಗೆ ಅವಕಾಶವಿದೆ. ದುರ್ಗಾ ಶಾಂತಿ, ಶನಿಶಾಂತಿ ಹೋಮ ಹಾಗೂ ಗುರುವಿನ ಆರಾಧನೆ ಮಾಡಬೇಕು.

ಹೀಗಿರಲಿದೆ ವರ್ಷ ಭವಿಷ್ಯ

ಪ್ಲವನಾಮ ಸಂವತ್ಸರದಲ್ಲಿ ರಾಜ, ಮಂತ್ರಿ, ಸೈನ್ಯ ಎಲ್ಲವೂ ಮಂಗಳನಾಗಿದ್ದಾನೆ. ಮೊದಲ ಆರು ತಿಂಗಳು ಶುಕ್ರ ಸಸ್ಯಾಧಿಪತಿಯಾಗಿದ್ದು, ಮೇಷಕ್ಕೆ ಮಂಗಳವೇ ಅಧಿಪತಿ. ಮೇಷಾಧಿಪತಿ ಕುಜವೂ ಆಗಿರುವುದರಿಂದ ಪಶುಪಕ್ಷಿಗಳ ಬೆಳವಣಿಗೆ ಸಮೃದ್ಧಿಯಾಗಲಿದೆ. ಮಳೆ ಜೋರಾಗಿ ಬಂದು ಬೆಳೆ ನಾಶವಾಗುವ ಭೀತಿಯಿದೆ. ಹೀಗಾಗಿ ಯಾವುದೇ ಧಾನ್ಯವಾದರೂ ಎಚ್ಚರಿಕೆ ವಹಿಸಿ, ಬೆಳೆ ಬಂದ ತಕ್ಷಣ ಕಟಾವು ಮಾಡಬೇಕು. ನಿರುದ್ಯೋಗ ಹಾಗೂ ಕಳ್ಳರ ಕಾಟ ಹೆಚ್ಚಾಗಲಿದೆ. ಧರ್ಮ ಮಾರ್ಗ ಬಿಟ್ಟು ಸಾಗುವುದಿಂದ ಅಪರಾಧಗಳು ಹೆಚ್ಚಾಗುತ್ತವೆ. ರೋಗ ವ್ಯಾಪಕವಾಗಿ ಹರಡುತ್ತದೆ. ಮಂಗಳ ಕೋಪಿಷ್ಠವಾಗಿ ಭೂಮಿಯಿಂದ ದೂರವಿರುವ ಗ್ರಹ. ಆದ್ದರಿಂದ ರಾಜರ ನಡುವೆ ಹಾಗೂ ನೆರೆ ದೇಶಗಳ ಜೊತೆಗೆ ಯುದ್ಧವಾಗುವ ಭೀತಿಯಿದೆ. ಗುಜರಾತ್ ಹಾಗೂ ನಾಗಪುರ ಪ್ರದೇಶದಲ್ಲಿ ಹೆಚ್ಚು ಪ್ರಮಾದಗಳು ಕಂಡುಬರುತ್ತವೆ. ಆಪತ್ತು, ಸಂಪತ್ತು ಹಾಗೂ ವಿಪತ್ತೂಗಳು ಇವೆ. ಇವೆಲ್ಲದರ ನಡುವೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಘನತೆ ಉತ್ತುಂಗಕ್ಕೆ ಏರಲಿದೆ. ದೇವಸ್ಥಾನಗಳಿಗೆ ಹೋಗುವುದಷ್ಟೇ ಮನುಷ್ಯ ಧರ್ಮವಲ್ಲ. ಕೆಳಗೆ ಬಿದ್ದ ವ್ಯಕ್ತಿಯನ್ನು ಕೈ ಹಿಡಿದು ಎತ್ತುವುದೇ ಶ್ರೇಷ್ಠ ಧರ್ಮ. ಇದು ಈಗ ಆಗಬೇಕಾದ ತುರ್ತು ಕೆಲಸ. ಯುಗದ ಆದಿಯೇ ಯುಗಾದಿ; ಬದಲಾವಣೆಗೆ ಸಕಾಲವೂ ಹೌದು. ಏನೇ ಕಷ್ಟಗಳು ಎದುರಾದರೂ ನವಗ್ರಹ ದೇವರು, ಸೂರ್ಯ, ಗುರು ಹಾಗೂ ಶುಕ್ರನ ಆರಾಧನೆಯಿಂದ ಒಳಿತಾಗುತ್ತದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಆತ್ಮವಿಕಾಸ ಕ್ರಮ

ನರನಾರಿಮೋಹದಿಂ ವಂಶವದಕಾಗಿ ಮನೆ |
ನೆರೆ ಹೊರೆಗಳೂರು ರಾಷ್ಟ್ರಗಳು ಸಂಘಗಳು ||
ಕೆರೆಯೊಂದು ಕೇಂದ್ರದಿಂದಲೆಯ ಬಳೆಗಳು ನೂರು |
ಹರಿವಂತೆ ಸಂಸಾರ – ಮಂಕುತಿಮ್ಮ || 406 ||

ಪದ-ಅರ್ಥ: ನರನಾರಿಮೋಹದಿಂ = ನರ + ನಾರಿ + ಮೋಹದಿಂ, ವಂಶವದಕಾಗಿ = ವಂಶ + ಅದಕಾಗಿ, ಹೊರೆಗಳೂರು = ಹೊರೆಗಳು + ಊರು, ಕೇಂದ್ರದಿಂದಲೆಯ = ಕೇಂದ್ರದಿಂದ + ಅಲೆಯ


ವಾಚ್ಯಾರ್ಥ: ಸ್ತ್ರೀ ಪುರುಷರ ಮೋಹದಿಂದ ವಂಶ, ಅದಕಾಗಿ ಮನೆ, ನೆರೆಹೊರೆ, ಊರು, ರಾಷ್ಟ್ರ, ಸಂಘಗಳು ಹುಟ್ಟಿಕೊಳ್ಳುತ್ತವೆ. ಕೆರೆ ಒಂದೇ ಆದರೂ ಅದರ ಮಧ್ಯದಿಂದ ಹುಟ್ಟಿದ ನೂರಾರು ಅಲೆಗಳು ಹರಿಯುವಂತೆ ಸಂಸಾರ.

ವಿವರಣೆ: ಈ ಕಗ್ಗದಲ್ಲಿ ಡಿ.ವಿ.ಜಿ ಹೇಳುವುದು ಆತ್ಮವಿಕಾಸದ ಕ್ರಮ. ಅದು ಪ್ರಾರಂಭವಾಗುವುದು ಒಬ್ಬ ವ್ಯಕ್ತಿಯಿಂದ. ಒಂದು ಸರೋವರದ ದಂಡೆಯ ಮೇಲೆ ನಿಂತು ನೀರಿನ ಮಧ್ಯಭಾಗದಲ್ಲಿ ಒಂದು ಕಲ್ಲನ್ನು ಎಸೆದಾಗ ಅಲ್ಲಿ ಒಂದು ಅಲೆ ಹುಟ್ಟಿ, ಅದು ಅಲೆಅಲೆಯಾಗಿ ಎಲ್ಲ ದಿಕ್ಕಿಗೂ ಹರಡಿ ದಡವನ್ನು ತಲುಪುತ್ತದೆ. ಅದರಂತೆಯೇ ನಮ್ಮ ಆತ್ಮವೂ ಅಲೆಅಲೆಯಾಗಿ ಹರಡಿ ಇಡೀ ಪ್ರಪಂಚವನ್ನು ಆವರಿಸಬೇಕು. ಅದು ಆತ್ಮವಿಕಾಸ. ಡಿ.ವಿ.ಜಿ ತಮ್ಮ 'ಬಾಳಿಗೊಂದು ನಂಬಿಕೆ' ಗ್ರಂಥದಲ್ಲಿ ತಿಳಿಸಿದ ಆತ್ಮವಿಕಾಸದ ಕ್ರಮ, ಈ ಕಗ್ಗಕ್ಕೆ ವಿವರಣೆಯಂತೆ ಇದೆ. ಆತ್ಮವಿಕಾಸಕ್ಕೆ ಅವರು ಆರು ತರಂಗ ವಲಯಗಳನ್ನು ಗುರುತಿಸುತ್ತಾರೆ. ಮೊದಲನೆಯದು ವ್ಯಕ್ತಿ, ಅವನ ಪರಿವಾರದ ಜನ. ಎರಡನೆಯದು ನೆರೆಹೊರೆಯವರು, ಜೊತೆಗೆ ಕೆಲಸ ಮಾಡುವವರು. ಮೂರನೆಯದು ವ್ಯಕ್ತಿಯ ಊರು. ನಂತರ ನಾಲ್ಕನೆಯದು ರಾಜ್ಯ. ಐದನೆಯದು ನಮ್ಮ ದೇಶ. ಆರನೆಯದು ಪ್ರಪಂಚದಲ್ಲಿರುವ ಇಡೀ ಮಾನವ ವರ್ಗ. ಇದು ವಿಶ್ವಾತ್ಮಭಾವ. ಎಲ್ಲರೂ ನಮ್ಮವರೇ ಎಂಬ ವಿಶಾಲ ಮನೋಭಾವ. ಅದಕ್ಕೇ 'ಉದಾರ ಚರಿತಾನಾಂ ತು ವಸುದೈವ ಕುಟುಂಬಕಂ' ಎಂದು ಹಿರಿಯರು ಹೇಳಿದರು. ನಮ್ಮ ಆತ್ಮವೂ ಏಳುಸುತ್ತಿನ ಮಲ್ಲಿಗೆಯಂತೆ ಅರಳಬೇಕು.

ಆದರೆ ಬಹಳಷ್ಟು ಜನರಿಗೆ ಈ ವಿಸ್ತಾರ ಕೇವಲ ತನ್ನ ಪರಿವಾರ, ತನ್ನ ಮನೆ, ಬಂಧುಬಳಗಕ್ಕೇ ನಿಂತು ಹೋಗುತ್ತದೆ. ಸ್ವಾರ್ಥತೆ ಕರಗಿ ಮುಂದೆ ಹರಿಯುವುದಿಲ್ಲ. ಆತ್ಮ ಅರಳದೆ ಮನೆಯ ಹೊಸ್ತಿಲ ಮೇಲೆ ಕರಡು ಕಟ್ಟುತ್ತದೆ. ಲೋಕದ ಚಿಂತೆ ಹಾಗಿರಲಿ, ನಮ್ಮ ಊರಿನ, ನಮ್ಮ ರಾಜ್ಯದ ಚಿಂತೆ ಕೂಡ ನಮಗೆ ಬರುವುದಿಲ್ಲ. ನಮ್ಮ ಬಾಯಿಯಲ್ಲಿ ಬರುವ ವೇದಾಂತ ದೊಡ್ಡದು. ಆದರೆ

ನಡತೆಯಲ್ಲಿ ಅದು ಬಂದದ್ದು ಕಾಣುವುದಿಲ್ಲ. ಕಗ್ಗದಲ್ಲಿ ಹೇಳಿರುವ ಎಲ್ಲ ಅಲೆಗಳು ನಮ್ಮ ಮನಸ್ಸಿಗೆ ಸಂಸ್ಕಾರವನ್ನು ನೀಡುತ್ತವೆ. ಆತ್ಮ ವಿಸ್ತಾರವಾದಂತೆ ನಮ್ಮ ದೃಷ್ಟಿ ವಿಶಾಲವಾಗುತ್ತದೆ, ಸಣ್ಣತನ ಸವೆಯುತ್ತದೆ. ಬಿಡಿಯಾಗಿ ನೋಡಿದರೆ, ಸಣ್ಣವನೆಂದು ಕಾಣುವ ಮನುಷ್ಯನ ಜೀವನಕ್ಕೂ ವಿಶಾಲವಾದ ಲೋಕ ಜೀವನಕ್ಕೂ ಮೆಟ್ಟಿಲಿನಂತೆ ಇರುವ ಸಂಬಂಧ ತಪ್ಪದೆ ಇದೆ. ಆ ಸಂಬಂಧವನ್ನು ಗಮನಿಸಿ, ಸಕಲ ಜೀವಕೋಟಿಯನ್ನು ನಮ್ಮ ಸ್ನೇಹ ವಾತ್ಸಲ್ಯದ ಛತ್ರಛಾಯೆಯಲ್ಲಿ ತರಲು ಪ್ರಯತ್ನಿಸಿದರೆ ವ್ಯಕ್ತಿ ದೊಡ್ಡವನಾಗುತ್ತಾನೆ. ಇಲ್ಲವಾದರೆ ಅನಾಮಧೇಯನಾಗಿ, ಯಾವ ಹೆಜ್ಜೆಯ ಗುರುತೂ ಮೂಡಿಸದೆ ಕರಗಿ ಹೋಗುತ್ತಾನೆ. ❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ 13 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನಿ ಪ್ರತಿಪದೆ ಗಂ. 5-21 (ಬೆ. 8-24) ಮಂಗಳವಾರ ನಿತ್ಯ ನಕ್ಷತ್ರ ಅಶ್ವಿನಿ ಗಂ. 16-11 (ಹ 12-44) ವಿಷ್ಕಂಭ ನಾಮ ಯೋಗ ಗಂ 19-11 ಬವ ಕರಣ ಗಂ. 5-21 ವಿಷ ಗಂ. 6-17 ಪುರ್‍ವಿಷ ಗಂ. 43-3 ಅಮೃತ ಶೇಷ ಗಂ. 0-48: ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-12 ಸೂರ್ಯಾಸ್ತ: 6-28 ಅದೃಷ್ಟ ಸಂಖ್ಯೆ 2, 6, 7

ಮೇಷ: ಮಹತ್ತರವಾದ ಕನಸೊಂದು ಈಡೇರುವ ದಿಶೆಯಲ್ಲಿ ಬಂಧುಗಳಿಂದ ಸಲಹೆಗಳು ಬರುವ ಸಾಧ್ಯತೆ. ನಿಮ್ಮ ದಿಟ್ಟ ನಿಲುವಿನಿಂದ ಹಿಂದೆ ಸರಿಯುವ ಅವಶ್ಯಕತೆ ಇಲ್ಲ. ಯಾವುದೇ ಕೆಲಸಕ್ಕೂ ದುಡುಕದೇ ಮತ್ತೊಮ್ಮೆ ಯೋಚಿಸಿ.

ವೃಷಭ: ಅಡೆತಡೆಗಳ ನಡುವೆಯೂ ಉದ್ದೇಶಿತ ಕಾರ್ಯಗಳಲ್ಲಿ ಯಶಸ್ಸು. ಬುದ್ಧಿವಂತಿಕೆಯಿಂದ ಕಾರ್ಯ ಸಾಧನೆ ಮಾಡುವಿರಿ. ಮಹಿಳೆಯರಿಂದ ಬಂದ ಸಲಹೆಗಳಿಗೆ ಆದ್ಯತೆ. ದೇವಿಯ ದರ್ಶನ ಯೋಗ. ಮಾನಸಿಕ ಶಾಂತಿ ಲಭಿಸಲಿದೆ.

ಮಿಥುನ: ಎದುರಾದ ಸಮಸ್ಯೆಗಳನ್ನು ಮೆಟ್ಟಿ ನಿಲ್ಲುವ ದಿಟ್ಟ ಸಾಮರ್ಥ್ಯ ನಿಮ್ಮದು. ಯಾವುದೇ ವಿಚಾರದಲ್ಲಿ ರಾಜಿಯಾಗದ ಮನಸ್ಥಿತಿ. ಪ್ರೀತಿಪಾತ್ರರಿಂದ ಸಮಯೋಚಿತ ಭರವಸೆಯ ಬಲ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ.

ಕರ್ಕಾಟಕ: ಅನಿವಾರ್ಯ ಒತ್ತಡಕ್ಕೆ ಒಳಗಾಗಿ ಎಲ್ಲವನ್ನು ತಾಳಿಕೊಳ್ಳಬೇಕಾದೀತು. ಒಳ್ಳೆಯ ಯೋಜನೆಯೊಂದಕ್ಕೆ ಮುನ್ನುಡಿ ಹಾಡುವ ಸಾಧ್ಯತೆ. ವಿಶ್ವಾಸ, ಪ್ರೀತಿಪಾತ್ರ ನಡೆಗಳಿಂದಾಗಿ ಎಲ್ಲರಲ್ಲೂ ಪ್ರಶಂಸೆಗೆ ಪಾತ್ರರಾಗುವಿರಿ.

ಸಿಂಹ: ನಿಮ್ಮ ಹವ್ಯಾಸವೇ ನಿಮಗೊಂದು ವೃತ್ತಿಯಾಗಿ ಮಾರ್ಪಾಡಾಗುವ ಸಾಧ್ಯತೆ. ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿದ್ದೀರಿ. ಸಂದರ್ಭೋಚಿತವಾದ ಸಲಹೆ, ಸಹಕಾರ ದೊರೆತು ಲಾಭ.

ಕನ್ಯಾ: ಆಕರ್ಷಣೀಯ ವ್ಯಕ್ತಿತ್ವದ ಜೊತೆಗೆ ನಡವಳಿಕೆಯಿಂದಾಗಿ ಅಭಿಮಾನಿಗಳು ಹೆಚ್ಚುವ ಸಾಧ್ಯತೆ. ಸಮರ್ಥ ಕಾರ್ಯ ಯೋಜನೆಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ಗೌರವ ಸಂಪಾದನೆ.

ತುಲಾ: ನಿಮ್ಮ ಗುರಿಸಾಧನೆಯಲ್ಲಿ ಯಶಸ್ಸು. ಅಂದುಕೊಂಡ ಕಾರ್ಯ ಸಾಧನೆಗಾಗಿ ಸಮರ್ಥ ಮಾರ್ಗ ಗೋಚರವಾಗಲಿದೆ. ಸರ್ಕಾರಿ ಉದ್ಯೋಗಿಗಳು ಸ್ವಲ್ಪಮಟ್ಟಿನ ವಿರೋಧಗಳನ್ನು ಎದುರಿಸಬೇಕಾದೀತು.

ವೃಶ್ಚಿಕ: ಕಾರ್ಯಯೋಜನೆಯ ಯಶಸ್ಸಿಗಾಗಿ ಅನೇಕ ಸಲಹೆಗಳು ಬಂದರೂ ಸ್ವಯಂ ತುಲನೆ ಮಾಡಿ ನಿರ್ಧಾರಕ್ಕೆ ಬರುವುದು ಒಳ್ಳೆಯದು. ಉದ್ಯೋಗದಲ್ಲಿ ಅಡೆತಡೆಗಳು ಕಂಡುಬಂದರೂ ನಿವಾರಣೆ ಕಂಡುಕೊಳ್ಳುವಿರಿ.

ಧನು: ಏಕಕಾಲದಲ್ಲಿ ಅನೇಕ ಕಾರ್ಯಗಳನ್ನು ಮಾಡಿ ಮುಗಿಸುವ ತವಕದಿಂದಾಗಿ ಗೊಂದಲ. ದುಂದುವೆಚ್ಚವನ್ನು ಭರಿಸಬೇಕಾಗಬಹುದು. ಕಾರ್ಯಯೋಜನೆಯಿಂದ ವೆಚ್ಚವನ್ನು ಕಡಿತಗೊಳಿಸುವ ಸಾಧ್ಯತೆ.

ಮಕರ: ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣಿತ ವ್ಯಕ್ತಿಗಳೊಂದಿಗೆ ಸಮಾಲೋಚನೆ ಸಾಧ್ಯತೆ. ಸರಿಯಾದ ನಿರ್ಧಾರದಿಂದಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ನಿಶೆ ಏರಿಸುವ ವಸ್ತುಗಳಿಂದ ದಿನದಮಟ್ಟಿಗೆ ದೂರವಿರಿ.

ಕುಂಭ: ಸ್ವತಂತ್ರ ನಿರ್ಧಾರ ಕೈಗೊಳ್ಳುವಲ್ಲಿ ಹಿಂಜರಿಕೆ ಇಲ್ಲ. ಸಮತೋಲನ ಕಾಯ್ದುಕೊಳ್ಳುವ ಚಾಣಾಕ್ಷತೆಯಿಂದಾಗಿ ಮಾನಸಿಕ ನೆಮ್ಮದಿ. ಸ್ನೇಹಿತರೊಂದಿಗೆ ಹಿತವಾದ ಚರ್ಚೆಗಳು ನಡೆದು ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ.

ಮೀನ: ಕುಟುಂಬದ ಸದಸ್ಯರೊಂದಿಗೆ ಸಂತಸದ ದಿನವನ್ನು ಕಳೆಯುವಿರಿ. ಉದ್ಯೋಗದಲ್ಲಿ ಬಡ್ತಿ ಅಥವಾ ಪ್ರಗತಿ ಸಾಧ್ಯತೆ. ಶಿಸ್ತಿನ ನಡವಳಿಕೆ. ಸಮಸ್ಯೆಗಳಿಗೆ ಸುಲಭ ಪರಿಹಾರ ದೊರೆಯಲಿದೆ. ಸಂಬಂಧಿಗಳ ದರ್ಶನ ಸಾಧ್ಯತೆ.

ನಿಮ್ಮ ಜನ್ಮದಿನ 13-ಏಪ್ರಿಲ್: ಈ ದಿನ ಅತ್ಯಂತ ಶುಭಕರ. ರಾಜಕೀಯದ ಬಗೆಗಿನ ಉನ್ನತ ವಿಚಾರ ಚಿಂತನೆಗಳಿಂದಾಗಿ ಸಾಮಾಜಿಕ ಗೌರವಗಳು ಪ್ರಾಪ್ತವಾಗುವವು. ಹೂವು, ಹಣ್ಣು, ತರಕಾರಿ ಮುಂತಾದ ವ್ಯಾಪಾರಗಳಲಿ ತೊಡಗಿದವರಿಗೆ ವ್ಯಾಪಾರ ವೃದ್ಧಿಯಾಗಿ ಆರ್ಥಿಕ ಸಂಕಷ್ಟಗಳು ನಿವಾರಣೆಯಾಗಲಿವೆ.

ಪದಬಂಧ 4566

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಡುವೆ ಮಂಜನಿದ್ದಾಗ ಇದು ಸೂಕ್ತ! (4)
3.ಮಜವಾಗಿ ಪ್ರಾರಂಭಿಸಿದ ವಿಷಯದ ನಿರೂಪಣೆ (4)
5. ಆನೆಯ ದಾಡೆ (3)
6.ಹಾರವನ ವ್ಯಾಪಾರ (4)
7.ಮಾಡಿದ ತಪ್ಪಿಗಾಗಿ ಮರುಗುವಿಕೆ (4)
9.ಗಂಡೂ ಅಲ್ಲದ ಹೆಣ್ಣೂ ಅಲ್ಲದ ವ್ಯಕ್ತಿ (4)
11.ಕನ್ನಡಿಗನಿಗೆ ಸಿಕ್ಕಿರುವ ಟ್ರೈನಿಂಗ್ (4)
13.ಪಿತನ ಬಳಿ ಕ್ಷೌರಿಕನಿದ್ದಾನೆ (3)
15.ಸ್ಮಶಾನವನ್ನು ಹೀಗೂ ಹೇಳುವರು (4)
16.ಅತ್ಯಧಿಕವಾದ ಲವಲವಿಕೆ (4)

ಮೇಲಿಂದ ಕೆಳಕ್ಕೆ
1.ಪುಸ್ತಕದ ಒಂದು ಅಧ್ಯಾಯ (2)
2.ದಾರ ಹಿಡಿದಿರುವ ಮುಖಂಡ (4)
3.ಮನದಿಂದ ಮೂಡಿದ ದ್ವೇಷ (4)
4.ಜರೂರಾಗಿ ಹಾಕಿದ ಸಹಿ (2)
6.ವ್ಯವಸಾಯಗಾರ ತೋಡಿಕೊಂಡ ದುಃಖ (3)
8.ಪತಿ ಹತ್ತಿರವಿರುವ ಕಾಲಾಳು (3)
10.ಕನ್ನಡನಾಡನ್ನು ಹೀಗೂ ಕರೆವರು (4)
11.ತಮ್ಮನಿಗೆ ಈ ತರ,ತೋರಿದ ಭೇದ ಭಾವ (4)
12.ಹೆರಿಗೆಯ ಸತ್ತೆ (2)
14.ಸಂದೇಹದಲ್ಲಿರುವ ಕಾಯ ಕಾಣುತ್ತಿದೆಯೇ? (2)

1			2	■	3			4
	■	■	5			■	■	
■	■	■		■		■	■	■
6				■	7			8
	■	■	■	■	■	■	■	
9			10	■	11			
■	■	■		■		■	■	■
12	■	■	13			■	■	14
15				■	16			

4565ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮಾರಣಹೋಮ 4.ಪ್ರತಾಪ 5.ರಭಸ 7.ತಿದಿ 8.ಲಕಾ 11.ಮಿಥುನ 13.ನವೀನ 14.ವಿವೇಕಶೂನ್ಯ

ಮೇಲಿಂದ ಕೆಳಕ್ಕೆ: 1.ಅಣಬೆ 2.ಮಾಪಕ 3.ಮರವೆ 4.ಪ್ರಗತಿಗಾಮಿ 6.ಸಮಕಾಲೀನ 9.ಮನವಿ 10.ಅನನ್ಯ 12.ಸೂಕರ

ಸುಡೊಕು 4952

					1		2	6
8		7		3				9
		5			9		8	
	6			4		3		8
	7	4	1	8	3			
3						5		1
	8		3		4			5
		1		9		8		4
4			5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4951 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

‘ಪ್ರಜಾವಾಣಿ’ ಫೇಸ್‌ಬುಕ್ ಲೈವ್ ಸಂವಾದದಲ್ಲಿ ನಿರ್ದೇಶಕದ್ವಯರ ಒತ್ತಾಯ

ಪ್ರೌಢಶಾಲೆಯಿಂದಲೇ ಸಿನಿಮಾ ಶಿಕ್ಷಣ ಆರಂಭಿಸಿ’

‘ಸಿನಿಮಾ ಶಿಕ್ಷಣ ಇಲ್ಲದ ಕಡೆ ಸಿನಿಮಾ ಸಂಸ್ಕೃತಿ ಬೆಳೆಯಲು ಸಾಧ್ಯವಿಲ್ಲ. ಹೀಗಾಗಿ ಪ್ರೌಢಶಾಲಾ ಹಂತದಿಂದಲೇ ಸಿನಿಮಾ ಶಿಕ್ಷಣವು ಪಠ್ಯಕ್ರಮದ ಭಾಗವಾಗಬೇಕು’ ಎಂಬ ಒಮ್ಮತದ ಆಗ್ರಹವನ್ನು ವ್ಯಕ್ತಪಡಿಸಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ ಹಾಗೂ ಚಿತ್ರ ನಿರ್ದೇಶಕ ಬಿ.ಸುರೇಶ್. ‘ಕನ್ನಡ ಚಿತ್ರರಂಗದ ನೈಜ ಸಮಸ್ಯೆಗಳೇನು?’ ಎಂಬ ವಿಷಯದ ಕುರಿತು ನಡೆದ ಪ್ರಜಾವಾಣಿ ಫೇಸ್‌ಬುಕ್ ಲೈವ್ ಸಂವಾದದಲ್ಲಿ ಮಾತನಾಡಿದ ಇವರು, ಚಿತ್ರಮಂದಿರಗಳಲ್ಲಿ ಸಿನಿಮಾ ವೀಕ್ಷಣೆ ಮೇಲೆ ಒಟಿಟಿ ಪರಿಣಾಮ, ಚಿತ್ರರಂಗ ಎದುರಿಸಬೇಕಾದ ಸವಾಲುಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು.

ಮಕ್ಕಳಿಗೆ ದೃಶ್ಯಭಾಷೆಯ ಅರಿವಾಗಬೇಕು

‘ಸಿನಿಮಾ ಶಿಕ್ಷಣವನ್ನು ಪ್ರೌಢಶಾಲೆ ಹಂತದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಲು ಸರ್ಕಾರವು ಕ್ರಮಕೈಗೊಳ್ಳಬೇಕು. ಮಕ್ಕಳಿಗೆ ದೃಶ್ಯಭಾಷೆ ಏನೆಂದು ಗೊತ್ತಾಗಬೇಕು. ನಂತರದಲ್ಲಿ ಪತ್ರಿಕೋದ್ಯಮ ಪದವಿ ಇರುವಂತೆ ಉನ್ನತ ಶಿಕ್ಷಣದಲ್ಲೂ ಸಿನಿಮಾ ಶಿಕ್ಷಣ ತರಲಿ’ ಎಂದು ಬಿ.ಸುರೇಶ್ ಆಗ್ರಹಿಸಿದರು.

‘ಸಿನಿಮಾ ಶಿಕ್ಷಣ ಇಲ್ಲದ ಕಡೆ ಸಿನಿಮಾ ಸಂಸ್ಕೃತಿ ಬೆಳೆಯಲು ಸಾಧ್ಯವಿಲ್ಲ. ಸರ್ಕಾರವೇ ಇದನ್ನು ಮಾಡಬೇಕು ಎಂದಲ್ಲ, ಸಿನಿಮಾದಲ್ಲಿದ್ದ ದೊಡ್ಡ ಶಕ್ತಿಗಳು ಇದಕ್ಕೆ ಕೈಹಾಕಬೇಕು. ಸೈದ್ಧಾಂತಿಕ ಶಿಸ್ತು ಬೇಕು. ಸಿನಿಮಾಗೆ ಪಠ್ಯಕ್ರಮದ ಚೌಕಟ್ಟನ್ನು ರೂಪಿಸಬೇಕು’ ಎಂದು ನಾಗಾಭರಣ ಕೂಡಾ ಸಹಮತ ವ್ಯಕ್ತಪಡಿಸಿದರು.

ಪ್ರಜಾವಾಣಿ ಸಂವಾದ

ಹೊಸ ಚಿತ್ರಮಂದಿರಗಳ ನಿರ್ಮಾಣ ಅಗತ್ಯ: ‘ಕೆಲ ವರ್ಷಗಳ ಹಿಂದೆ ರಾಜ್ಯದಲ್ಲಿ ಚಿತ್ರಮಂದಿರಗಳ ಸಂಖ್ಯೆ 1 ಸಾವಿರ ದಾಟುವ ವೇಗದಲ್ಲಿ ಬೆಳೆಯುತ್ತಿತ್ತು. ಇದೀಗ ಈ ಸಂಖ್ಯೆ 630ರ ಗಡಿಯಲ್ಲಿದ್ದು, ಕೋವಿಡ್‌ನಿಂದಾಗಿ ಮತ್ತಷ್ಟು ಚಿತ್ರಮಂದಿರಗಳಿಗೆ ಬೀಗ ಬಿದ್ದಿದ್ದು, ಇದೀಗ 570ರ ಆಸುಪಾಸಿನಲ್ಲಿದೆ. ಕೆಲವು ಊರಿನಲ್ಲಿ ಚಿತ್ರಮಂದಿರಗಳೇ ಇಲ್ಲ. ಜನತಾ ಚಿತ್ರಮಂದಿರ ಮಾಡುತ್ತೇವೆ ಎಂದರು ಆದರೆ ಅದೂ ಆಗಿಲ್ಲ. ಹೊಸ ಚಿತ್ರಮಂದಿರಗಳಲ್ಲಿ ವಿಷಯಾಧಾರಿತ ಚಿತ್ರಗಳಿಗೆ ಆದ್ಯತೆ ದೊರೆಯಬೇಕು. ಊರೂರು ತಿರುಗಿ ‘ಪುಟ್ಟಕ್ಕನ ಹೈವೆ’ ಚಿತ್ರ ತೋರಿಸುವ ಪರಿಸ್ಥಿತಿ ನನಗೆ ಎದುರಾಗಿತ್ತು’ ಎಂದು ಸುರೇಶ್ ಹೇಳಿದರು.

ಸರ್ಕಾರ ಬೆನ್ನುತಟ್ಟುವ ಕೆಲಸ ಮಾಡಲಿ: ‘ಕನ್ನಡ ಚಿತ್ರರಂಗ ಮತ್ತಷ್ಟು ಬೆಳೆಯಲು ನಿರ್ಮಾಪಕ, ವಿತರಕ, ಪ್ರದರ್ಶಕ ಒಂದು ಕುಟುಂಬ ಎಂದು ಯೋಚನೆ ಮಾಡಬೇಕು. ಸರ್ಕಾರವೂ ಸಮಯಕ್ಕೆ ಸರಿಯಾಗಿ ಪ್ರೋತ್ಸಾಹಿಸಬೇಕು. 2016ರವರೆಗೆ ಮಾತ್ರ ಸಬ್ಸಿಡಿ ಬಿಡುಗಡೆ ಆಗಿದೆ. ಸಕಾಲಕ್ಕೆ ಪ್ರಶಸ್ತಿಗಳ ಘೋಷಣೆ ಆಗಬೇಕು’ ಎಂದು ಹೇಳಿದರು.

ಪ್ರತ್ಯೇಕ ಇಲಾಖೆ ಹಾಗೂ ಸಚಿವರ ಅಗತ್ಯತೆ

‘ದೃಶ್ಯ ಮಾಧ್ಯಮಕ್ಕೆ ಸಂಬಂಧಿಸಿದಂತೆ ಒಂದು ಇಲಾಖೆ ಆಗಬೇಕು. ಅದಕ್ಕೆ ಪ್ರತ್ಯೇಕ ಸಚಿವರು ಇರಬೇಕು’ ಎಂದು ಟಿ.ಎಸ್.ನಾಗಾಭರಣ ಪ್ರತಿಪಾದಿಸಿದರು.

‘ಸಿನಿಮಾವನ್ನು ವಾರ್ತಾ ಮತ್ತು ಪ್ರಸಾರ ಇಲಾಖೆ ಅಡಿ ಇಟ್ಟಿರುವುದೇ ದೊಡ್ಡ ತಪ್ಪು. ಸಂಸ್ಕೃತಿ ಇಲಾಖೆ ಕೆಳಗಡೆ ಇದು ಬರಬೇಕು’ ಎನ್ನುವ ಬಿ.ಸುರೇಶ್ ಅವರ ಮಾತಿಗೆ ಸಹಮತವ್ಯಕ್ತಪಡಿಸಿದ ನಾಗಾಭರಣ, ‘ಹಾಲಿವುಡ್‌ಗೆ ಬೇಕಾದ ವಿಎಫ್‌ಎಕ್ಸ್ ಕರ್ನಾಟಕದಲ್ಲಿ ಆಗುತ್ತಿದೆ. ಆದರೆ, ಕನ್ನಡ ಚಿತ್ರರಂಗಕ್ಕೆ ಇದರಿಂದ ಯಾವುದೇ ಉಪಯೋಗವಾಗುತ್ತಿಲ್ಲ. ಐಟಿ ಇಲಾಖೆಗೆ ಇದನ್ನು ಸೇರಿಸಿದ ಪರಿಣಾಮ ಹೀಗಾಗಿದೆ. ವಿಎಫ್‌ಎಕ್ಸ್, ಅನಿಮೇಷನ್, ಗೇಮಿಂಗ್ ಅಲ್ಲಿಗೆ ಹೊರಟು ಹೋಗಿದೆ. ನೀತಿಯಲ್ಲೂ ಬದಲಾವಣೆ ಆಗಬೇಕಾಗಿದೆ. ಪ್ರತ್ಯೇಕ ಇಲಾಖೆಗೆ ಚಿತ್ರರಂಗದ ಹಿನ್ನೆಲೆಯಿಂದ ಬಂದ ಸಚಿವರೇ ಆಗಬೇಕು ಎಂದೇನಿಲ್ಲ, ಅವರಿಗೆ ಒಳ್ಳೆಯ ಕಿವಿ ಇದ್ದರೆ ಸಾಕು’ ಎಂದರು.

ಪಾರದರ್ಶಕತೆ ಇರಲಿ: ಕೇವಲ ಕೊರೊನಾ, ಕೊರೊನೋತ್ತರದಲ್ಲಿ ಮಾತ್ರ ಕನ್ನಡ ಚಿತ್ರರಂಗ ಸಮಸ್ಯೆ ಎದುರಿಸುತ್ತಿದೆ ಎನ್ನುವುದು ತಪ್ಪು. ಸಹೋದರ ಭಾಷೆಗಳ ಜೊತೆಗಿನ ಸ್ಪರ್ಧೆ, ಬಾಲಿವುಡ್ ಸಿನಿಮಾಗಳ ನಡುವೆ ಕನ್ನಡ ಚಿತ್ರಗಳು ಸಿಲುಕುತ್ತಿವೆ. ಇಲ್ಲಿ ಬಲಿಷ್ಠವಾದವರ ಆಟ ಮಾತ್ರ ನಡೆಯುತ್ತಿತ್ತು. ಈ ಎಲ್ಲ ಸ್ಪರ್ಧೆಗಳನ್ನು ಎದುರಿಸಿ ನಿಲ್ಲಲು, ವಿತರಕರು ಹಾಗೂ ಪ್ರದರ್ಶಕರ ನಡುವಿನ ಪಾರದರ್ಶಕತೆ ಮುಖ್ಯ. ವೀಕ್ಷಕರಲ್ಲೂ ಮಲ್ಟಿಪ್ಲೆಕ್ಸ್ ಗುಣ ಬಂದಿದೆ ಎಂದು ತಿಳಿದ ಮೇಲೆ ಅದನ್ನೇ ನಿರ್ದೇಶಕ, ನಿರ್ಮಾಪಕ ಬಳಸಿಕೊಂಡು ಪ್ರತಿಸ್ಪರ್ಧಿಯಾಗಬೇಕು’ ಎಂದು ಕಿವಿಮಾತು ಹೇಳಿದರು.

ಒಟಿಟಿ ಪರ್ಯಾಯ ಅಲ್ಲ: ‘ಪ್ರಸ್ತುತ ಸಂದರ್ಭದಲ್ಲಿ ಒಟಿಟಿ ಪರ್ಯಾಯವಲ್ಲ. ಈಗ ಟಿ.ವಿ ಬದಲು ಒಟಿಟಿಗೆ ಸಿನಿಮಾ ಮಾರುತ್ತಾರೆ. ಚಿತ್ರಮಂದಿರದಲ್ಲೇ ಚಿತ್ರ ನೋಡುವ ದೊಡ್ಡ ಪಡೆಯೇ ಇದೆ. ತನ್ನ ಸಿನಿಮಾ ಬೇರೆ, ಹೆಂಡತಿ ಸಿನಿಮಾ ಬೇರೆ... ಹೀಗಾಗಿ ಒಟಿಟಿಗೆ ಹೋಗುತ್ತಾರೆ, ವಿನಃ ಚಿತ್ರಮಂದಿರಗಳಲ್ಲೇ ಚಿತ್ರವನ್ನು ನೋಡುವವರ ಸಂಖ್ಯೆ ಇನ್ನೂ ಹೆಚ್ಚಿದೆ. ಎಲ್ಲರಲ್ಲೂ ಸ್ಮಾರ್ಟ್‌ಫೋನ್ ಇದೆ ಅಂದಾಕ್ಷಣ ಒಟಿಟಿಯಲ್ಲಿ ಇರುತ್ತಾರೆ ಎಂದಲ್ಲ’ ಎಂದರು.

‘ಹೊಸ ತಂತ್ರಜ್ಞಾನ ಬಂತು ಎಂದರೆ ಕಥನ ಮಾಧ್ಯಮ ಸಾಯುವುದಿಲ್ಲ. ಒಟಿಟಿ ಬಂತು ಎಂದರೆ ಸಿನಿಮಾ ಸಾಯುವುದಿಲ್ಲ’ ಎಂದು ಬಿ.ಸುರೇಶ್ ಕೂಡಾ ಒಮ್ಮತ ವ್ಯಕ್ತಪಡಿಸಿದರು.



ಬಿ.ಸುರೇಶ್ ಹಾಗೂ ಟಿ.ಎಸ್.ನಾಗಾಭರಣ

ಆನ್‌ಲೈನ್ ಕ್ರೌಡ್‌ಫಂಡಿಂಗ್‌ನಲ್ಲಿ ₹ 20 ಲಕ್ಷ ಸಂಗ್ರಹ

ಸುಟ್ಟ ಗ್ರಂಥಾಲಯ ಮರು ನಿರ್ಮಾಣಕ್ಕೆ ಗ್ರಂಥಾಲಯ ಸಮಿತಿ ನೇತೃತ್ವ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಶಾಂತಿನಗರದಲ್ಲಿ ಈಚೆಗೆ ಸುಟ್ಟು ಹೋದ, ಸೈಯದ್ ಇಸಾಕ್ ಅವರ ಗ್ರಂಥಾಲಯವನ್ನು ಮರು ನಿರ್ಮಿಸಲು ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಹಾಗೂ ಗ್ರಂಥಾಲಯ ಇಲಾಖೆ ನಿರ್ಧರಿಸಿವೆ. ಈ ಕಾರ್ಯಕ್ಕೆ, ಮೇಯರ್ ಅಧ್ಯಕ್ಷತೆಯ ಗ್ರಂಥಾಲಯ ಸಮಿತಿ ನೇತೃತ್ವ ವಹಿಸಲಿದೆ.

ದೇಣಿಗೆ ನೀಡುವವರು ಗ್ರಂಥಾಲಯ ಸಮಿತಿಗೇ ನೀಡಬೇಕು ಎಂದು ಮನವಿ ಮಾಡಲಾಗಿದ್ದು, ಸದ್ಯದಲ್ಲೇ ಪ್ರತ್ಯೇಕ ಖಾತೆ ಸಂಖ್ಯೆ ನೀಡಲಾಗುವುದು ಎಂದು ತಿಳಿಸಲಾಗಿದೆ.

ಪಾಲಿಕೆ ಆಯುಕ್ತರಾದ ಶಿಲ್ಪಾ ನಾಗ್, ಮುಡಾ ಆಯುಕ್ತ ಡಿ.ಬಿ. ನಟೇಶ್, ಗ್ರಂಥಾಲಯ ಇಲಾಖೆಯ ಉಪನಿರ್ದೇಶಕ ಬಿ.ಮಂಜುನಾಥ್ ಅವರು ಸೋಮವಾರ ಸ್ಥಳದ ಸಮೀಕ್ಷೆ ನಡೆಸಿ, ಈ ನಿರ್ಧಾರಕ್ಕೆ ಬಂದರು.

‘ಗ್ರಂಥಾಲಯ ಸಮಿತಿಯಲ್ಲಿ ಸೈಯದ್ ಇಸಾಕ್ ಅವರಿಗೆ ಗೌರವ ಸದಸ್ಯತ್ವ ನೀಡಲಾಗುವುದು. ಈಗ ಗ್ರಂಥಾಲಯ ಮರು ನಿರ್ಮಾಣಕ್ಕಾಗಿ ಬಂದಿರುವ ಎಲ್ಲ ದೇಣಿಗೆಯನ್ನೂ ಈ ಸಮಿತಿಗೆ ಬರುವಂತೆ ಮಾಡಲಾಗುವುದು. ಆದಷ್ಟು, ಇದೇ ಜಾಗದಲ್ಲಿ ಸುಸಜ್ಜಿತವಾದ ಮಾದರಿ ಗ್ರಂಥಾಲಯ ನಿರ್ಮಿಸಲಾಗುವುದು’ ಎಂದು ಶಿಲ್ಪಾ ನಾಗ್ ತಿಳಿಸಿದರು.

‘ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿದ ಈ ಜಾಗವನ್ನು, ನಾಗರಿಕ ಸೌಕರ್ಯ ನಿವೇಶನ (ಸಿ.ಎ ನಿವೇಶನ)ದ ಸ್ವರೂಪದಲ್ಲಿ ಬೋರಾ ಸಂಸ್ಥೆಗೆ ತುಂಬಾ ಹಿಂದೆಯೇ ನೀಡಲಾಗಿತ್ತು. ಕಡತವನ್ನು ಪರಿಶೀಲಿಸಿ, ಷರತ್ತುಗಳು ಉಲ್ಲಂಘನೆಯಾಗಿದ್ದರೆ ಬೋರಾ ಸಂಸ್ಥೆಯಿಂದ ಸಿ.ಎ ನಿವೇಶನವನ್ನು ವಾಪಸ್ ತೆಗೆದುಕೊಳ್ಳಲಾಗುವುದು. ಷರತ್ತು ಉಲ್ಲಂಘನೆ ಆಗಿರದೇ ಇದ್ದಲ್ಲಿ, ಅವರಿಗೆ ಬೇರೊಂದು ಕಡೆ ನಿವೇಶನ ನೀಡಿ, ಈ ನಿವೇಶನದಲ್ಲಿಯೇ ಗ್ರಂಥಾಲಯ ಸ್ಥಾಪಿಸಲಾಗುವುದು’ ಎಂದು ಮುಡಾ ಆಯುಕ್ತ ಡಿ.ಬಿ.ನಟೇಶ್ ತಿಳಿಸಿದರು.

ಈ ವೇಳೆ ಸೈಯದ್ ಇಸಾಕ್, ‘ಇದೇ ಜಾಗದಲ್ಲಿ ಕನ್ನಡ ಗ್ರಂಥಾಲಯ ಆರಂಭವಾಗಬೇಕು’ ಎಂದು ಒತ್ತಾಯಿಸಿದರು. ಸ್ಥಳೀಯರು, ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ತಮಗೂ ಅವಕಾಶ ನೀಡಬೇಕು ಎಂದು ಅಧಿಕಾರಿಗಳಲ್ಲಿ ಮನವಿ ಮಾಡಿದರು. ಗ್ರಂಥಾಲಯದ ಜತೆಗೆ ಕಂಪ್ಯೂಟರ್ ಕಲಿಕಾ ಕೇಂದ್ರ, ಡಿಜಿಟಲ್ ಗ್ರಂಥಾಲಯ, ಸ್ಪರ್ಧಾತ್ಮಕ ಪರೀಕ್ಷೆಗಳ ಅಭ್ಯಾಸಕ್ಕೆ ಪ್ರತ್ಯೇಕ ವಿಭಾಗಗಳನ್ನೂ ತೆರೆಯಬೇಕು ಎಂದು ಆಗ್ರಹಿಸಿದರು.

ಅವರ ಮನವಿಯನ್ನು ಪರಿಗಣಿಸುವುದಾಗಿ ಹೇಳಿದ ಅಧಿಕಾರಿಗಳು, ಸೈಯದ್ ಇಸಾಕ್ ಅವರಿಗೆ ಗೌರವಧನ ನೀಡುವ ಕುರಿತೂ ಚಿಂತಿಸಲಾಗುವುದು ಎಂದು ತಿಳಿಸಿದರು.

₹ 20 ಲಕ್ಷ ಸಂಗ್ರಹ

ಗ್ರಂಥಾಲಯದ ಮರುನಿರ್ಮಾಣಕ್ಕಾಗಿ, ಮೈಸೂರಿನ ಇನ್ಫೊಸಿಸ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಫತೇನ್ ಮಿಸ್ಬಾ, ಆನ್‌ಲೈನ್‌ನಲ್ಲಿ ಆರಂಭಿಸಿರುವ ಕ್ರೌಡ್‌ಫಂಡಿಂಗ್‌ನಲ್ಲಿ ₹ 20 ಲಕ್ಷ ಹಣ ಸಂಗ್ರಹವಾಗಿದೆ. 1,260 ಮಂದಿ ದೇಣಿಗೆ ನೀಡಿದ್ದಾರೆ.

₹ 50 ಸಾವಿರ ದೇಣಿಗೆ

‘ಗ್ರಂಥಾಲಯದ ಜಾಗಕ್ಕೆ ಸಂಬಂಧಿಸಿದಂತೆ ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಜೊತೆ ಮಾತನಾಡುವೆ. ಸುಟ್ಟ ಜಾಗದಲ್ಲೇ, ಸೈಯದ್ ಹೆಸರಿನಲ್ಲೇ ನೂತನ ಗ್ರಂಥಾಲಯ ನಿರ್ಮಾಣವಾಗಬೇಕು. ನನ್ನ ಆತ್ಮೀಯರೊಬ್ಬರು ನೀಡಿದ ₹ 50 ಸಾವಿರವನ್ನು ಇಸಾಕ್ ಅವರಿಗೆ ಸೋಮವಾರ ಕೊಟ್ಟಿರುವೆ’ ಎಂದು ಸಂಸದ ಪ್ರತಾಪ ಸಿಂಹ ತಿಳಿಸಿದರು.



ಗ್ರಂಥಾಲಯವಿದ್ದ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ ಪರಿಶೀಲಿಸಿದ ಪಾಲಿಕೆ ಆಯುಕ್ತರಾದ ಶಿಲ್ಪಾ ನಾಗ್, ಪಾಲಿಕೆ ಸದಸ್ಯ ಅಯೂಬ್‌ಖಾನ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಡಿ.ಬಿ.ನಟೇಶ್ ಅವರು, ಸೈಯದ್ ಇಸಾಕ್ ಅವರೊಂದಿಗೆ ಮಾತನಾಡಿದರು

ಪ್ರಕಾಶಕರ ಸಂಘದ ನೆರವು

ಬೆಂಗಳೂರು: ಮೈಸೂರಿನ ಸೈಯದ್ ಐಸಾಕ್ ಅವರಿಗೆ ಗ್ರಂಥಾಲಯವನ್ನು ಪುನರ್ ಸ್ಥಾಪಿಸಲು 5 ಸಾವಿರ ಪುಸ್ತಕಗಳನ್ನು ಉಚಿತವಾಗಿ ನೀಡಲಾಗುವುದು ಎಂದು ಕರ್ನಾಟಕ ಪ್ರಕಾಶಕರ ಸಂಘ ಘೋಷಿಸಿದೆ.

ಗ್ರಂಥಾಲಯಕ್ಕೆ ಬೆಂಕಿ ಇಟ್ಟ ದುಷ್ಕೃತ್ಯ ಖಂಡನೀಯ. ಅದೇ ಸ್ಥಳದಲ್ಲಿ ಗ್ರಂಥಾಲಯ ಪುನರ್ ಸ್ಥಾಪನೆಯಾಗಬೇಕು. ಸಂಘದ ವತಿಯಿಂದ 5 ಸಾವಿರ ಪುಸ್ತಕಗಳನ್ನು ನೀಡಲು ತೀರ್ಮಾನಿಸಲಾಗಿದೆ. ನವಕರ್ನಾಟಕ ಪಬ್ಲಿಕೇಷನ್ಸ್, ಅಂಕಿತ ಪುಸ್ತಕ, ಛಂದ ಪುಸ್ತಕ, ಸೃಷ್ಟಿ ಪಬ್ಲಿಕೇಷನ್ಸ್, ಚಾರುಮತಿ ಪ್ರಕಾಶನ, ಅಭಿನವ, ಸಿರಿವರ ಪ್ರಕಾಶನ, ವಿಕಾಸ ಪ್ರಕಾಶನ, ಭೂಮಿ ಬುಕ್ಸ್ ಸೇರಿದಂತೆ ವಿವಿಧ ಪ್ರಕಾಶನ ಸಂಸ್ಥೆಗಳು ಪುಸ್ತಕಗಳನ್ನು ಕೊಡಲು ಮುಂದೆ ಬಂದಿವೆ. ಇದೇ 23ರಂದು ವಿಶ್ವ ಪುಸ್ತಕ ದಿನದ ಪ್ರಯುಕ್ತ ಸಾಂಕೇತಿಕವಾಗಿ ಪುಸ್ತಕಗಳನ್ನು ನೀಡಲು ತೀರ್ಮಾನಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಪ್ರಕಾಶ್ ಕಂಬತ್ತಳ್ಳಿ ತಿಳಿಸಿದ್ದಾರೆ.

ವರನಟ ಡಾ.ರಾಜ್‌ಕುಮಾರ್ ಸ್ಮರಣೆ

ಬೆಂಗಳೂರು: ‘ಅಭಿಮಾನಿಗಳೇ ದೇವರು’ ಎಂದ ನಟಸಾರ್ವಭೌಮ, ವರನಟ ಡಾ.ರಾಜ್‌ಕುಮಾರ್ ಅವರ 15ನೇ ವರ್ಷದ ಪುಣ್ಯತಿಥಿಯಂದು, ಕುಟುಂಬ ಸದಸ್ಯರು, ನಟರು ಹಾಗೂ ಅಭಿಮಾನಿಗಳು ಅವರೊಡಗಿನ ಒಡನಾಟದ ನೆನಪನ್ನು ಟ್ವೀಟ್ ವೇದಿಕೆಯಲ್ಲಿ ಹಂಚಿಕೊಂಡರು.

ಕಂಠೀರವ ಸ್ಟುಡಿಯೋದಲ್ಲಿರುವ ರಾಜ್‌ಕುಮಾರ್ ಹಾಗೂ ಪಾರ್ವತಮ್ಮ ರಾಜ್‌ಕುಮಾರ್ ಅವರ ಪುಣ್ಯಭೂಮಿಗೆ ಕುಟುಂಬ ಸದಸ್ಯರ ಜೊತೆಗೂಡಿ ಪುತ್ರರಾದ ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಪುಷ್ಪನಮನವನ್ನು ಸಲ್ಲಿಸಿದರು.

ಹಾಡಿನ ಮೂಲಕ ರಾಜ್‌ಕುಮಾರ್ ಅವರನ್ನು ನೆನೆದ ರಾಘವೇಂದ್ರ ರಾಜ್‌ಕುಮಾರ್, ‘ನೂರಾರು ನೆನಪಿನ ಸಂತಸ ತುಂಬಿದ ಹಾಡು ಇದು, ಏಳೇಳು ಜನಮಕೂ ಬೆಸುಗೆ ಹಾಕುವ ಹಾಡು ಇದು. ಬಾಳಿನ ಬಾನಿನಲಿ ಪ್ರೇಮದ ಚಂದಿರ ಸಂಚಾರ. ಹುಣ್ಣಿಮೆ ರಾಶಿಯಲಿ ನಮ್ಮದು ಸುಂದರ ಸಂಸಾರ’ ಎಂದು ಸ್ವತಃ ರಾಜ್‌ಕುಮಾರ್ ಅವರೇ ಹಾಡಿರುವ ವಿಡಿಯೊ ಅಪ್‌ಲೋಡ್ ಮಾಡಿದ್ದಾರೆ. ಇದರಲ್ಲಿ ರಾಜ್‌ಕುಮಾರ್ ಅವರ ಜೊತೆಗೆ ಕುಟುಂಬದ ಸದಸ್ಯರು ಇರುವ ಸಂಗ್ರಹ ಚಿತ್ರಗಳಿವೆ.

ಮಗನಾಗಿ ಹುಟ್ಟಿರುವುದಕ್ಕೆ ಹೆಮ್ಮೆ ಇದೆ: ‘ಕಳೆದ 15 ವರ್ಷದಲ್ಲಿ ಅಪ್ಪಾಜಿ ಇಲ್ಲ ಎನ್ನುವ ಭಾವನೆ ಮೂಡೇ ಇಲ್ಲ. ನೆನಪು, ಪ್ರೀತಿ, ವಿಶ್ವಾಸ ಅವರು ನಮ್ಮಲ್ಲಿ ಬಿಟ್ಟುಹೋಗಿದ್ದಾರೆ. ಕುಟುಂಬದ ಜೊತೆ ಹೇಗಿರಬೇಕು ಎನ್ನುವುದನ್ನು ಅವರು ಕಲಿಸಿದ್ದಾರೆ. ಜನರ ಪ್ರೀತಿ ಗಳಿಸಿದ್ದೇವೆ. ಅವರ ಮಗನಾಗಿ ಹುಟ್ಟಿರುವುದಕ್ಕೆ ಹೆಮ್ಮೆ ಪಡುತ್ತೇನೆ’ ಎಂದು ಪುನೀತ್ ಹೇಳಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಟ್ವೀಟ್ ಮಾಡಿ, ‘ಅಪ್ರತಿಮ ಕಲಾವಿದ, ಕನ್ನಡ ಚಿತ್ರರಂಗದ ಮೇರುನಟ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪುರಸ್ಕೃತ, ಪದ್ಮಭೂಷಣ, ಕರ್ನಾಟಕ ರತ್ನ ಡಾ. ರಾಜ್ ಕುಮಾರ್ ಅವರ ಪುಣ್ಯತಿಥಿಯಂದು ಅಭಿಮಾನಪೂರ್ವಕ ನಮನಗಳು. ಕೋಟ್ಯಂತರ ಅಭಿಮಾನಿಗಳ ಪಾಲಿನ ನೆಚ್ಚಿನ ‘ಅಣ್ಣಾವ್ರು’, ಕನ್ನಡಿಗರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ’ ಎಂದು ಉಲ್ಲೇಖಿಸಿದ್ದಾರೆ.

‘ನಮ್ಮ ಕರುನಾಡಿಗೆ ಅಪಾರ ಸೇವೆ ಸಲ್ಲಿಸಿ ಕನ್ನಡಿಗರ ಮನದಲ್ಲಿ ಸದಾ ರಾಜನಾಗಿ ಉಳಿದಿರುವ ಅಣ್ಣಾವ್ರ ಡಾ.ರಾಜ್ ಅವರ ಪುಣ್ಯಸ್ಮರಣೆ. ಮರೆಯಲಾಗದ ಮಾಣಿಕ್ಯ’ ಎಂದು ನಟ ದರ್ಶನ್ ಟ್ವೀಟ್ ಮೂಲಕ ನಮನ ಸಲ್ಲಿಸಿದರು.

ಭಾವುಕರಾದ ಜಗ್ಗೇಶ್: ನಟ ಜಗ್ಗೇಶ್ ಅವರು ಟ್ವೀಟ್ ಮೂಲಕ ‘ರಾಜಣ್ಣ ನನ್ನ ಹೃದಯದಲ್ಲೇ ಲೀನವಾಗಿದ್ದಾರೆ! ಮತ್ತೆ ಬನ್ನಿ ಅಣ್ಣ’ ಎಂದು ಬರೆದಿದ್ದಾರೆ.



ಪುಣ್ಯಸ್ಮರಣೆ ಅಂಗವಾಗಿ ರಾಜ್‌ಕುಮಾರ್ ಪುಣ್ಯಭೂಮಿಯನ್ನು ಹೂವುಗಳಿಂದ ಅಲಂಕರಿಸಿರುವುದು

ಕಸಾಪ ಚುನಾವಣೆ: ಅಂತಿಮ ಕಣದಲ್ಲಿ 21 ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರಲ್ಲಿ ಒಬ್ಬರು ನಾಮಪತ್ರ ಹಿಂಪಡೆದಿದ್ದಾರೆ. ಇದರಿಂದಾಗಿ ಅಂತಿಮ ಚುನಾವಣೆ ಕಣದಲ್ಲಿ 21 ಅಭ್ಯರ್ಥಿಗಳಿದ್ದಾರೆ.

ಪರಿಷತ್ತಿನ ರಾಜ್ಯಾಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ರಂದು ಚುನಾವಣೆ ನಡೆಯಲಿದೆ. ನಾಮಪತ್ರ ವಾಪಸ್ ಪಡೆಯಲು ಸೋಮವಾರ ಕಡೆಯ ದಿನವಾಗಿತ್ತು. ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಬೆಂಗಳೂರಿನ ಕೆ.ಎಂ. ರೇವಣ್ಣ ನಾಮಪತ್ರ ಹಿಂಪಡೆದಿದ್ದಾರೆ.

ಕಣದಲ್ಲಿ ಮ.ಚಿ. ಕೃಷ್ಣ, ವ.ಚ. ಚನ್ನೇಗೌಡ, ಮಹೇಶ್ ಜೋಶಿ, ಸಂಗಮೇಶ ಬಾದವಾಡಗಿ, ಸಿ.ಕೆ. ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಶಿ. ಹಳ್ಳೂರ, ಬಾಡದ ಭದ್ರಿನಾಥ್, ಶಿವರಾಜ ಪಾಟೀಲ, ಸರಸ್ವತಿ ಶಿವಪ್ಪ ಚಿಮ್ಮಲಗಿ, ವೈ. ರೇಣುಕಾ, ಶೇಖರಗೌಡ ಮಾಲಿ ಪಾಟೀಲ, ಕೆ. ರತ್ನಾಕರ ಶೆಟ್ಟಿ, ವಾಲ್ಮೀಕಪ್ಪ ಹ. ಯಕ್ಕರನಾಳ, ಮಾಯಣ್ಣ, ಪ್ರಮೋದ್ ಹಳಕಟ್ಟಿ, ಶಿವಪ್ಪ ಮಲ್ಲಪ್ಪ ಬಾಗಲ, ಕೆ. ರವಿ ಅಂಬೇಕರ, ನ.ಶ್ರೀ. ಸುಧೀಂದ್ರರಾವ್, ಶರಣಬಸಪ್ಪ ಕಲ್ಲಪ್ಪ ದಾನಕೈ ಹಾಗೂ ಶಿವರುದ್ರಸ್ವಾಮಿ ಉಳಿದಿದ್ದಾರೆ.

ತಮಿಳುನಾಡು ಘಟಕಕ್ಕೆ ಸ್ಪರ್ಧಿಸಿದವರಲ್ಲಿ ತಮಿಳ್ ಸೆಲ್ವಿ ಮಾತ್ರ ಸ್ಪರ್ಧೆಯಲ್ಲಿದ್ದು, ಉಳಿದವರ ನಾಮಪತ್ರ ತಿರಸ್ಕೃತಗೊಂಡಿದೆ. ಆಂಧ್ರಪ್ರದೇಶ ಗಡಿನಾಡ ಘಟಕಕ್ಕೆ ನಾಮಪತ್ರ ಸಲ್ಲಿಸಿದವರಲ್ಲಿ ಶಶಿಧರ್ ಎನ್ನುವವರು ಕಣದಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ, ಕುಣೆ ಬಾಲರಾಜ, ಅಂಜನ್ ಕುಮಾರ್ ಹಾಗೂ ಎಸ್.ಕೆ. ಜಯಶಂಕರ್ ಅವರು ಅಂತಿಮ ಸ್ಪರ್ಧೆಯಲ್ಲಿದ್ದಾರೆ. ಮಹಾರಾಷ್ಟ್ರ ಗಡಿನಾಡ ಘಟಕಕ್ಕೆ ಸಂಬಂಧಿಸಿದಂತೆ ಸೋಮಶೇಖರ ಜಮಶೆಟ್ಟಿ ಮತ್ತು ಮಲ್ಲಿಕಾಜಪ್ಪ ಸೋಮಶೇಖರ ಮಡ್ಡೆ ನಡುವೆ ಸ್ಪರ್ಧೆ ಇದೆ.

ಕೇರಳ ಗಡಿನಾಡ ಘಟಕಕ್ಕೆ ನಡೆಯಲಿರುವ ಚುನಾವಣೆಗೆ ಅಂತಿಮವಾಗಿ ರಾಧಾಕೃಷ್ಣ ಮತ್ತು ಸುಬ್ರಹ್ಮಣ್ಯ ವಿ. ಭಟ್ಟ ಅವರು ಸ್ಪರ್ಧೆಯಲ್ಲಿದ್ದಾರೆ ಎಂದು ವಿಶೇಷ ಚುನಾವಣಾಧಿಕಾರಿ ತಿಳಿಸಿದ್ದಾರೆ.



ಅಮರನಾಥ ಯಾತ್ರೆ: ಏ.15 ರಿಂದ ಆನ್‌ಲೈನ್ ನೋಂದಣಿ

ಶ್ರೀನಗರ: ಅಮರನಾಥ ಯಾತ್ರೆಯ ಪ್ರಸಕ್ತ ವರ್ಷದ ಆನ್‌ಲೈನ್ ನೋಂದಣಿ ಪ್ರಕ್ರಿಯೆಯು ಇದೇ 15ರಿಂದ ಪಂಜಾಬ್ ನ್ಯಾಷನಲ್ ಬ್ಯಾಂಕ್, ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಹಾಗೂ ಯೆಸ್ ಬ್ಯಾಂಕ್‌ನ ಆಯ್ದ 446 ಶಾಖೆಗಳಲ್ಲಿ ಪ್ರಾರಂಭವಾಗಲಿದೆ.

‘ಬಾಲ್ತಾಲ್ ಮತ್ತು ಚಂದನ್ವಾರಿ ಮಾರ್ಗಗಳಿಗೆ ಏಕಕಾಲದಲ್ಲಿ ನೋಂದಣಿ ಶುರುವಾಗಲಿದೆ. ಈ ವರ್ಷದ ತೀರ್ಥಯಾತ್ರೆ ಕೈಗೊಳ್ಳಲು ಬಯಸುವ ಯಾತ್ರಿಗಳು ದೇಶದಾದ್ಯಂತ ನಿಗದಿಪಡಿಸಿದ 446 ಬ್ಯಾಂಕ್ ಶಾಖೆಗಳ ಮೂಲಕ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು’ ಎಂದು ಅಮರನಾಥ ದೇಗುಲ ಮಂಡಳಿಯ (ಎಸ್‌ಎಎಸ್‌ಬಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಿತೀಶ್ವರ್ ಕುಮಾರ್ ತಿಳಿಸಿದ್ದಾರೆ.

ಯಾತ್ರಿಕರು URL: www.jksasb.nic.inಗೆ ಭೇಟಿ ನೀಡಿ, REGISTER ಕ್ಲಿಕ್ ಮಾಡಬೇಕು. ನಂತರ ಅನುಸರಿಸಬೇಕಾದ ಕ್ರಮಗಳಿಗೆ ಯಾತ್ರಿ ಮಾರ್ಗದರ್ಶನ ನೀಡಲಿದೆ. ಆನ್‌ಲೈನ್ ಅರ್ಜಿ ನಮೂನೆಯಲ್ಲಿ ವಿವರಗಳನ್ನು ಭರ್ತಿ ಮಾಡಿ ತಮ್ಮ ಭಾವಚಿತ್ರ ಮತ್ತು ಆರೋಗ್ಯ ಪ್ರಮಾಣಪತ್ರವನ್ನು (ಸಿಎಚ್‌ಸಿ) ಕಡ್ಡಾಯ ಲಗತ್ತಿಸಬೇಕು. ಮಾರ್ಚ್ 15ರ ನಂತರ ನೀಡಲಾದ ಆರೋಗ್ಯ ಪ್ರಮಾಣಪತ್ರಗಳು ಮಾತ್ರ ಪರಿಗಣಿಸಲಾಗುತ್ತದೆ. ಆನ್‌ಲೈನ್ ನೋಂದಣಿಗೆ ಯಾತ್ರಿಗಳು ಅನುಸರಿಸಬೇಕಾದ ಕ್ರಮಗಳನ್ನು ಮಂಡಳಿಯ ವೆಬ್‌ಸೈಟ್ www.shriamarnathjishrine.comನಲ್ಲಿ ಗಮನಿಸಬಹುದು. ಯಾತ್ರೆಯು ಜೂನ್ 28ರಂದು ಪ್ರಾರಂಭವಾಗಿ ಆಗಸ್ಟ್ 22ರಂದು ಮುಕ್ತಾಯಗೊಳ್ಳಲಿದೆ.

ಕಠಿಣ ತೀರ್ಮಾನಕ್ಕೆ ವಾರಾಂತ್ಯ ಸಭೆ

ಒಂದನೇ ಪುಟದಿಂದ

‘ಸರ್ವ ಪಕ್ಷ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗುವುದು. ಎಲ್ಲ ನಾಯಕರ ಅಭಿಪ್ರಾಯ ಪಡೆದ ನಂತರವೇ ಇನ್ನಷ್ಟು ಬಿಗಿ ಕ್ರಮ ಕೈಗೊಳ್ಳಲಾಗುವುದು’ ಎಂದು ಬರಲಿರುವ ಕಷ್ಟಕರ ದಿನಗಳ ಬಗ್ಗೆ ಮುನ್ಸೂಚನೆಯನ್ನೂ ನೀಡಿದರು.

‘ರಾಜ್ಯದಲ್ಲಿ ಒಂದು ವಾರದಲ್ಲಿ ಕೋವಿಡ್ ಪ್ರಕರಣಗಳು ನಿಯಂತ್ರಣಕ್ಕೆ ಬರುವ ವಿಶ್ವಾಸ ಇದೆ. ಕೋವಿಡ್ ಪರೀಕ್ಷೆ ಹೆಚ್ಚಿಸಲಾಗಿದೆ. ವಿರೋಧ ಪಕ್ಷಗಳಿಂದ ಟೀಕೆಗಳು ಬರುವುದು ಸಹಜ. ಅವುಗಳನ್ನು ಸಕಾರಾತ್ಮಕವಾಗಿ ತೆಗೆದುಕೊಂಡು ಕೆಲಸ ಮಾಡುತ್ತೇವೆ’ ಎಂದು ತಿಳಿಸಿದರು.

‘ಕೋವಿಡ್ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರವೂ ಅಗತ್ಯ’ ಎಂದು ಹೇಳುವುದನ್ನು ಅವರು ಮರೆಯಲಿಲ್ಲ.

ಬೆಂಗಳೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ‘ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಮುಂದಿನ ಎರಡು ತಿಂಗಳ ಕೊರೊನಾ ಸ್ಥಿತಿಗತಿಯನ್ನು ಅಂದಾಜಿಸಿ, ಸರ್ಕಾರವು ಯಾವೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದೆ. ಕಳೆದ ಒಂದು ವರ್ಷದ ಅನುಭವದಲ್ಲಿ ಕೋವಿಡ್ ಸ್ವರೂಪದ ಬಗ್ಗೆ ಗೊತ್ತಾಗಿದೆ. ಈ ಕಾಯಿಲೆ ಕಾಣಿಸಿಕೊಂಡ ಬಳಿಕ ಆರ್ಥಿಕ ನಷ್ಟ ಉಂಟಾಗಿದ್ದು, ಜನರು ಕಷ್ಟದಲ್ಲಿದ್ದಾರೆ. ಇಂತಹ ಸಮಯದಲ್ಲಿ ಲಾಕ್‌ಡೌನ್‌ನಂತಹ ಕಠಿಣ ಕ್ರಮಕ್ಕೆ ಮುಂದಾಗುವುದು ಕಷ್ಟ’ ಎಂದು ತಿಳಿಸಿದರು.

ಖಾಸಗಿ ಆಸ್ಪತ್ರೆಗಳ ಹಾಸಿಗೆ ಮೀಸಲು

ಮುಂದಿನ ಒಂದು ವಾರದೊಳಗೆ ಶೇ 50 ರಷ್ಟು ಹಾಸಿಗೆಗಳನ್ನು ಕೋವಿಡ್ ಪೀಡಿತರಿಗೆ ಮೀಸಲಿಡಲು ವ್ಯವಸ್ಥೆ ಮಾಡಿಕೊಳ್ಳುವಂತೆ ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರವು ಸೂಚಿಸಿದ್ದು, ಇದಕ್ಕೆ ಆಸ್ಪತ್ರೆಗಳ ಮುಖ್ಯಸ್ಥರು ಸಮ್ಮತಿಸಿದ್ದಾರೆ.

ರಾಜ್ಯದ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಜತೆಗೆ ಸೋಮವಾರ ಸಭೆ ನಡೆಸಿದ ಆರೋಗ್ಯ ಸಚಿವ ಡಾ.ಕೆ. ಸುಧಾಕರ್, ಕೋವಿಡ್ ಬಾಧಿತರಿಗೆ ಚಿಕಿತ್ಸೆ ಕೊಡಲು ಹಾಸಿಗೆಗಳನ್ನು ಸಜ್ಜುಗೊಳಿಸಿಕೊಳ್ಳಿ ಎಂದು ನಿರ್ದೇಶನ ನೀಡಿದರು.

ಕೋವಿಡೇತರ ರೋಗಿಗಳನ್ನು ಒಳರೋಗಿಗಳಾಗಿ ದಾಖಲು ಮಾಡಿಕೊಳ್ಳುವ ಅಗತ್ಯ ಇಲ್ಲದೇ ಇದ್ದರೆ, ಅಂತಹವರನ್ನು ಮನೆಗೆ ಕಳುಹಿಸಿ ಆರೈಕೆ ಮಾಡಿಕೊಳ್ಳಲು ವ್ಯವಸ್ಥೆ ಮಾಡಿ ಎಂದು ಸೂಚಿಸಿದ್ದಾರೆ.

ಬಳಿಕ ಮಾತನಾಡಿದ ಸುಧಾಕರ್, ರೋಗಲಕ್ಷಣ ಹಾಗೂ ಲಕ್ಷಣರಹಿತ ರೋಗಿಗಳಿಗೆ ಹೋಟೆಲ್‌ಗಳಲ್ಲಿ, ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ವ್ಯವಸ್ಥೆ ಮಾಡಬೇಕೆಂದು ಸೂಚಿಸಲಾಗಿದೆ ಎಂದೂ ಹೇಳಿದರು.

ಕುರಾನ್‌ನಲ್ಲಿನ 26 ವಚನ(ಆಯತ್) ತೆರವು ಕೋರಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಕುರಾನ್‌ನಲ್ಲಿನ 26 ವಚನ (ಆಯತ್) ಗಳನ್ನು ತೆಗೆದುಹಾಕುವಂತೆ ಕೋರಿದ್ದ ಅರ್ಜಿಯನ್ನು ವಜಾಗೊಳಿಸಿರುವ ಸುಪ್ರೀಂ ಕೋರ್ಟ್, ಅರ್ಜಿದಾರರಿಗೆ ₹50 ಸಾವಿರ ದಂಡ ವಿಧಿಸಿದೆ.

ಉತ್ತರ ಪ್ರದೇಶದ ಶಿಯಾ ವಕ್ಫ್ ಮಂಡಳಿಯ ಮಾಜಿ ಅಧ್ಯಕ್ಷ ವಾಸೀಮ್ ರಿಜ್ವಿ ಈ ಅರ್ಜಿ ಸಲ್ಲಿಸಿದ್ದರು. ‘ಈ ಅರ್ಜಿಯು ಗಂಭೀರ ಉದ್ದೇಶ ಹೊಂದಿಲ್ಲ. ಇದೊಂದು ಕ್ಷುಲ್ಲಕ ವಿಷಯ’ ಎಂದು ನ್ಯಾಯಾಲಯ ಹೇಳಿದೆ.

ನ್ಯಾಯಮೂರ್ತಿಗಳಾದ ಆರ್. ಎಫ್. ನಾರಿಮನ್, ಬಿ.ಆರ್. ಗವಾಯಿ ಮತ್ತು ಹೃಷಿಕೇಶ್ ರಾಯ್ ಅವರನ್ನೊಳಗೊಂಡ ಪೀಠವು ಅರ್ಜಿಯನ್ನು ತಿರಸ್ಕರಿಸಿದೆ.

‘26 ವಚನ (ಆಯತ್) ಗಳು ಭಯೋತ್ಪಾದನೆಗೆ ಉತ್ತೇಜನ ನೀಡುತ್ತವೆ. ಸಮಾನತೆ, ಕ್ಷಮಾದಾನ ಮತ್ತು ಸಹಿಷ್ಣುತೆಯೇ ಇಸ್ಲಾಂ ಧರ್ಮದ ಮೂಲ ಆಶಯಗಳು. ಆದರೆ, ಪವಿತ್ರ ಗ್ರಂಥದಲ್ಲಿನ ಈ ಪದ್ಯಗಳನ್ನು ವಿವಿಧ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಇದರಿಂದ ಮೂಲ ಆಶಯದಿಂದ ಧರ್ಮವು ದೂರ ಸರಿಯುತ್ತಿದೆ’ ಎಂದು ರಿಜ್ವಿ ಅವರು ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ರಿಜ್ವಿ ಸಲ್ಲಿಸಿದ್ದ ಅರ್ಜಿಯ ಬಗ್ಗೆ ಹಲವು ಮುಸ್ಲಿಂ ಸಂಘಟನೆಗಳ ಪದಾಧಿಕಾರಿಗಳು ಮತ್ತು ಮೌಲ್ವಿಗಳು ಆಕ್ರೋಶ ವ್ಯಕ್ತಪಡಿಸಿದ್ದರು. ಪ್ರತಿಭಟನೆಗಳು ಸಹ ನಡೆದಿದ್ದವು.

ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಕಳೆದ ತಿಂಗಳು ರಿಜ್ವಿ ಅವರ ವಿರುದ್ಧ ಬರೇಲಿಯಲ್ಲಿ ಎಫ್‌ಐಆರ್ ಸಹ ದಾಖಲಾಗಿತ್ತು.

ನ್ಯಾಷನಲ್ ಹೆರಾಲ್ಡ್ ಪ್ರಕರಣ: ಪ್ರತಿಕ್ರಿಯೆ ದಾಖಲಿಸಲು ಸಮಯ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಅವರ ಪುತ್ರ ರಾಹುಲ್ ಗಾಂಧಿ ಮತ್ತು ಇತರೆ ಆರೋಪಿಗಳಿಗೆ ಪ್ರತಿಕ್ರಿಯೆ ದಾಖಲಿಸಲು ದೆಹಲಿ ಹೈಕೋರ್ಟ್ ಇನ್ನಷ್ಟು ಸಮಯಾವಕಾಶ ನೀಡಿದೆ. ಬಿಜೆಪಿ ಸಂಸದ ಸುಬ್ರಹ್ಮಣಿಯನ್ ಸ್ವಾಮಿ ಈ ಕುರಿತು ಪ್ರಕರಣ ದಾಖಲಿಸಿದ್ದರು.

ನ್ಯಾಯಮೂರ್ತಿ ಸುರೇಶ್ ಕುಮಾರ್ ಅವರು ಪ್ರಕರಣದ ವಿಚಾರಣೆಯನ್ನು ಮೇ 18ಕ್ಕೆ ನಿಗದಿಪಡಿಸಿದರು. ಹಿರಿಯ ವಕೀಲರಾದ ಆರ್.ಎಸ್.ಚೀಮಾ ಮತ್ತು ತನನ್ನುಮ್ ಚೀಮಾ ಕಾಂಗ್ರೆಸ್ ಮುಖಂಡರ ಪರವಾಗಿ ಹಾಜರಿದ್ದು, ‘ಕೋವಿಡ್ ಕಾರಣದಿಂದ ಅವರ ಕಚೇರಿ ಮುಚ್ಚಿದ್ದು, ಪ್ರತಿಕ್ರಿಯೆ ದಾಖಲಿಸಲು ಆಗಿಲ್ಲ. ಇನ್ನಷ್ಟು ಸಮಯ ನೀಡಬೇಕು’ ಎಂದು ಮನವಿ ಮಾಡಿದರು.

ಪ್ರತಿಕ್ರಿಯೆ ದಾಖಲಿಸಲು ಸೂಚಿಸಿ ಫೆಬ್ರುವರಿ 22ರಂದು ನೋಟಿಸ್ ನೀಡಿದ್ದ ಹೈಕೋರ್ಟ್ ಅಲ್ಲಿಯವರೆಗೂ ವಿಚಾರಣೆಗೆ ತಡೆ ನೀಡಿತ್ತು.

ಮಾತುಕತೆಗೆ ಸಿದ್ಧ, ಬೇಡಿಕೆಗಳಲ್ಲಿ ಬದಲಾವಣೆ ಇಲ್ಲ: ಟಿಕಾಯತ್

ಗಾಜಿಯಾಬಾದ್ (ಪಿಟಿಐ): ‘ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಕೇಂದ್ರ ಸರ್ಕಾರ ಮಾತುಕತೆ ಆಹ್ವಾನಿಸಿದರೆ, ಅದಕ್ಕೆ ನಾವು ಸಿದ್ಧರಿದ್ದೇವೆ. ಆದರೆ, ನಮ್ಮ ಬೇಡಿಕೆಗಳಲ್ಲಿ ಬದಲಾವಣೆಯಿಲ್ಲ’ ಎಂದು ಬಿಕೆಯು ನಾಯಕ ರಾಕೇಶ್ ಟಿಕಾಯತ್ ಅವರು ತಿಳಿಸಿದ್ದಾರೆ.

ಜನವರಿ 22ರಂದು ಮಾತುಕತೆ ಯಾವ ಹಂತದಲ್ಲಿ ಸ್ಥಗಿತವಾಗಿತ್ತೋ, ಅಲ್ಲಿಂದಲೇ ಪುನರಾರಂಭವಾಗಬೇಕು. ಪ್ರತಿಭಟನಾನಿರತ ರೈತರ ಒಕ್ಕೂಟದ ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಸದಸ್ಯರನ್ನು ಸರ್ಕಾರ ಚರ್ಚೆಗೆ ಆಹ್ವಾನಿಸಬೇಕು ಎಂದು ಭಾನುವಾರ ತಿಳಿಸಿದರು.

‘ದೆಹಲಿ ಗಡಿ ಪ್ರದೇಶಗಳಲ್ಲಿ ಪ್ರತಿಭಟನೆ ನಡೆಯುತ್ತಿದೆ. ಮೂರು ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು’ ಎಂಬ ಬೇಡಿಕೆಯಲ್ಲಿ ಬದಲಾವಣೆಗಳಿಲ್ಲ‘ ಬಿಕೆಯು ರಾಷ್ಟ್ರೀಯ ವಕ್ತಾರ ಧರ್ಮೇಂದ್ರ ಮಲಿಕ್ ಅವರು ಈ ಕುರಿತ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ವಿರಾಟ್’ ಸಂರಕ್ಷಣೆ: ಖಾಸಗಿ ಸಂಸ್ಥೆಯ ಅರ್ಜಿ ವಜಾ ಮಾಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಸೇವೆ ಸ್ಥಗಿತಗೊಳಿಸಿರುವ ಭಾರತದ ವಿಮಾನವಾಹಕ ಯುದ್ಧನೌಕೆ ಐಎನ್‌ಎಸ್ ವಿರಾಟ್ ಅನ್ನು ವಸ್ತುಸಂಗ್ರಹಾಲಯವಾಗಿ ಮಾಡಿ ಸಂರಕ್ಷಿಸಬೇಕು ಎಂದು ಕೋರಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಮಾಡಿತು.

ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬಡೆ, ನ್ಯಾಯಮೂರ್ತಿಗಳಾದ ವಿ. ರಾಮಸುಬ್ರಹ್ಮಣಿಯನ್, ಎ.ಎಸ್.ಬೋಪಣ್ಣ ಅವರಿದ್ದ ಪೀಠವು, ‘ಈ ಸಂಬಂಧ ಖಾಸಗಿ ಸಂಸ್ಥೆಯು ಸಲ್ಲಿಸಿದ್ದ ಮನವಿಯನ್ನು ಈಗಾಗಲೇ ರಕ್ಷಣಾ ಇಲಾಖೆಯು ತಿರಸ್ಕರಿಸಿದೆ’ ಎಂಬ ಅಂಶವನ್ನು ಪರಿಗಣಿಸಿತು.

ನೀವು ಹೀಗೇ ಮಾಡಲಾಗದು. ಕೇಂದ್ರಕ್ಕೆ ಮನವಿ ಸಲ್ಲಿಸುವಂತೆ ಬಾಂಬೆ ಹೈಕೋರ್ಟ್ ತಿಳಿಸಿದ್ದು, ಅದರಂತೆ ಮಾಡಿದ್ದೀರಿ. ರಕ್ಷಣಾ ಇಲಾಖೆ ಅದನ್ನು ತಳ್ಳಿಹಾಕಿದೆ. ಮತ್ತೆ ಅದನ್ನು ಪ್ರಶ್ನಿಸಲಾಗದು ಎಂದು ಪೀಠವು ಹೇಳಿತು.



ವಿಡಿಯೊ ಕಾನ್ಫರೆನ್ಸ್‌ನಲ್ಲಿ ವಿಚಾರಣೆ ನಡೆಯಿತು. ಖಾಸಗಿ ಸಂಸ್ಥೆ ಎನ್ವಿಟೆಕ್ ಮರಿನ್ ಪ್ರತಿನಿಧಿಸಿದ್ದ ರೂಪಾಲಿ ಶರ್ಮಾ, ಇದು ರಾಷ್ಟ್ರೀಯ ಆಸ್ತಿ. ರಕ್ಷಿಸಿಡುವುದು ಅಗತ್ಯ ಎಂದು ವಾದಿಸಿದ್ದರು. ಇದನ್ನು ಪೀಠ ನಿರಾಕರಿಸಿತು.

ಕೇರಳ: ರಾಜ್ಯಸಭಾ ಚುನಾವಣೆಗೆ ಆದೇಶ

ಕೊಚ್ಚಿ (ಪಿಟಿಐ): ರಾಜ್ಯಸಭೆಯ ಮೂರು ಸ್ಥಾನಗಳಿಗೆ ಕೇರಳ ವಿಧಾನಸಭೆಯಿಂದ ನಡೆಯಬೇಕಿರುವ ದ್ವೈವಾರ್ಷಿಕ ಚುನಾವಣೆಯನ್ನು ಪ್ರಸಕ್ತ ವಿಧಾನಸಭೆಯ ಅವಧಿ ಮುಗಿಯುವ ಮುನ್ನವೇ ನಡೆಸಬೇಕು ಎಂದು ಕೇರಳ ಹೈಕೋರ್ಟ್ ಸೋಮವಾರ ಚುನಾವಣಾ ಆಯೋಗಕ್ಕೆ ಆದೇಶ ನೀಡಿದೆ.

ತೆರವಾಗುವ ಸ್ಥಾನಗಳು ಆದಷ್ಟು ಶೀಘ್ರ ಭರ್ತಿ ಆಗಬೇಕು. ಆಯೋಗವು ಈ ನಿಟ್ಟಿನಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೈಕೋರ್ಟ್ ಹೇಳಿದರು.

ಶೀಘ್ರ ಈ ಸ್ಥಾನಗಳನ್ನು ಭರ್ತಿ ಮಾಡುವುದು ನಮ್ಮ ಹೊಣೆ ಎಂದು ಆಯೋಗವೇ ಒಪ್ಪಿಕೊಂಡಿದೆ. ಹೀಗಾಗಿ, ಇನ್ನಷ್ಟು ವಿಳಂಬವಾಗದಂತೆ ಕ್ರಮವಹಿಸಬೇಕು. ಹೊಸ ಚುನಾಯಿತ ಪ್ರತಿನಿಧಿಗಳು ಬರುವ ಮೇ 2, 2021ರ ಒಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ನ್ಯಾಯಮೂರ್ತಿ ಪಿ.ವಿ.ಆಶಾ ಆದೇಶದಲ್ಲಿ ತಿಳಿಸಿದರು.

ಮಸ್ಕಿ ವಿಧಾನಸಭಾ ಕ್ಷೇತ್ರ ಉಪ ಚುನಾವಣೆ • ಬಿಜೆಪಿ–ಕಾಂಗ್ರೆಸ್‌ನಿಂದ ಜಾತಿವಾರು ಸಭೆ • 'ಸರ್ವಶಕ್ತಿ' ಧಾರೆ ಎರೆಯುತ್ತಿವೆ ಪಕ್ಷಗಳು

'ಹಳಬರ' ಮಧ್ಯೆ ಸಮಬಲದ ಹೋರಾಟ

• ನಾಗರಾಜ ಚಿನಗುಂಡಿ


ಪ್ರತಾಪಗೌಡ ಪಾಟೀಲ


ಬಸನಗೌಡ ತುರ್ವಿಹಾಳ

ಮಸ್ಕಿ (ರಾಯಚೂರು ಜಿಲ್ಲೆ): ಪರಿಶಿಷ್ಟ ಪಂಗಡಕ್ಕೆ ಮೀಸಲಿರುವ ಮಸ್ಕಿ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಎಂಟು ಅಭ್ಯರ್ಥಿಗಳು ಕಣದಲ್ಲಿದ್ದರೂ ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ.

ಅನುಷ್ಠಾನಗೊಳ್ಳಬೇಕಾದ ನೀರಾವರಿ ಯೋಜನೆಗಳು, ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ, ಭತ್ತದ ಬೆಳೆಗೆ ಸಮರ್ಪಕ ಕಾಲುವೆ ನೀರು ಒದಗಿಸುವಂತಹ ಅಭಿವೃದ್ಧಿ ವಿಷಯಗಳ ಜತೆಗೆ 'ಸ್ವಾಭಿಮಾನ' ಮತ್ತು 'ಪಕ್ಷಾಂತರ' ವಿಷಯಗಳೂ ಚರ್ಚೆಯಾಗುತ್ತಿವೆ.

ವಿಧಾನಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವೇಳೆ 2008ರಲ್ಲಿ ಈ ಕ್ಷೇತ್ರ ಅಸ್ತಿತ್ವಕ್ಕೆ ಬಂದಿದೆ. ಈವರೆಗೆ ನಡೆದ ಮೂರೂ ಚುನಾವಣೆಗಳಲ್ಲಿ ಪ್ರತಾಪಗೌಡ ಪಾಟೀಲ ಮೊದಲು ಬಿಜೆಪಿಯಿಂದ, ಆ ನಂತರ ಎರಡು ಬಾರಿ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದ್ದರು.

'ಆಪರೇಷನ್ ಕಮಲ'ದ ಭಾಗವಾಗಿ 2019ರಲ್ಲಿ ರಾಜ್ಯದ ವಿವಿಧ ಕಡೆಗಳ 17 ಶಾಸಕರೊಟ್ಟಿಗೆ ಇವರೂ ರಾಜೀನಾಮೆ ನೀಡಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾಗಲು ನೆರವಾದರು. ಅವಧಿಗೂ ಮುನ್ನ ರಾಜೀನಾಮೆ ನೀಡಿದ ಕಾರಣ ಉಪಚುನಾವಣೆ ನಡೆಯುತ್ತಿದೆ.

2018ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಕೇವಲ 213 ಮತಗಳಿಂದ ಪರಾಭವಗೊಂಡಿದ್ದ ಬಸನಗೌಡ ತುರ್ವಿಹಾಳ ಈಗ ಕಾಂಗ್ರೆಸ್ ಅಭ್ಯರ್ಥಿ. ಇವರು ಮೊದಲು ಕಾಂಗ್ರೆಸ್‌ನಿಂದ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಆ ನಂತರ ಬಿಜೆಪಿ ಸೇರಿದ್ದರು.

ಈಗ ಇವರಿಬ್ಬರೂ ಪಕ್ಷ ಬದಲಿಸಿ ಮತ್ತೆ ಎದುರಾಳಿಗಳಾಗಿದ್ದಾರೆ. 'ವ್ಯಕ್ತಿ ಕೇಂದ್ರಿತ'ವಾಗಿದ್ದ ಈ ಕ್ಷೇತ್ರದಲ್ಲಿ ಮೊದಲ ಬಾರಿ ಪಕ್ಷದ ಪ್ರತಿಷ್ಠೆ ಮುನ್ನೆಲೆಗೆ ಬಂದಿದೆ. ಜೆಡಿಎಸ್ ಇಲ್ಲಿ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ.

ಈ ಕ್ಷೇತ್ರ ಗೆಲ್ಲಲೇಬೇಕು ಎಂಬ ಪಣತೊಟ್ಟಂತಿರುವ ಬಿಜೆಪಿ, ತನ್ನ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಉಸ್ತುವಾರಿಯನ್ನಾಗಿ ನೇಮಿಸಿದೆ. ಬೇರೆ ಬೇರೆ ಜಿಲ್ಲೆಗಳ ಕಾರ್ಯಕರ್ತರು ಕ್ಷೇತ್ರದಲ್ಲಿ ಬೀಡು ಬಿಟ್ಟಿದ್ದಾರೆ. ಕಾಂಗ್ರೆಸ್ ಪಕ್ಷದ ಜಿಲ್ಲಾ ಹಾಗೂ ಸುತ್ತಲಿನ ಜಿಲ್ಲೆಗಳ ನಾಯಕರು, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಇಲ್ಲಿಯೇ ಬಿಡಾರ ಹೂಡಿದ್ದು, ಪಕ್ಷದ ಅಭ್ಯರ್ಥಿಯ ಗೆಲುವಿಗೆ ರಣತಂತ್ರ ರೂಪಿಸುತ್ತಿದ್ದಾರೆ.


ಪ್ರಚಾರದ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಜನರು 'ದೇಣಿಗೆ' ನೀಡುತ್ತಿರುವುದು ಬಿಜೆಪಿಗೆ ಬಿಸಿತುಪ್ಪವಾಗಿ ಪರಿಣಮಿಸಿದೆ. ಬಿಜೆಪಿ ಕಾರ್ಯಕರ್ತರು ಎನ್ನಲಾದ ಕೆಲವರು ಮತದಾರರಿಗೆ ಹಣ ಹಂಚಿದ್ದಾರೆ ಎನ್ನುವ ವಿಡಿಯೊ ವೈರಲ್ ಆಗಿರುವ ಕುರಿತು ಉಂಟಾಗಿರುವ ವಿವಾದವೂ ಹೆಚ್ಚು ಸದ್ದು ಮಾಡುತ್ತಿದೆ. 'ಹಾಲಾಪುರದಲ್ಲಿ ನಮ್ಮ ಕಾರ್ಯಕರ್ತನನ್ನು ಕಾಂಗ್ರೆಸ್ ಕಾರ್ಯಕರ್ತನೊಬ್ಬ ಹತ್ಯೆ ಮಾಡಿದ್ದಾನೆ' ಎಂದು ಹೇಳುತ್ತಾ ಬಿಜೆಪಿಯವರು ಇದನ್ನು ಚುನಾವಣಾ ವಿಷಯವನ್ನಾಗಿಸುತ್ತಿದ್ದಾರೆ.

ಕ್ಷೇತ್ರದಲ್ಲಿ ಸಂಚರಿಸಿದಾಗ 'ಹಳಬರ' ಮಧ್ಯೆ ಸಮಬಲದ ಹೋರಾಟ ಇರುವುದು ಗೋಚರಿಸುತ್ತದೆ.

ಅಖಾಡದಲ್ಲೊಂದು ಸುತ್ತು



ಮಹಿಳಾ ಮತದಾರರೇ ಹೆಚ್ಚು



ಎನ್‌ಆರ್‌ಬಿಸಿ 5ಎ ಕಾಲುವೆ

ಮಸ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿ ನಾರಾಯಣಪುರ ಬಲದಂಡೆ ಕಾಲುವೆ (ಎನ್‌ಆರ್‌ಬಿಸಿ)ಗೆ 5ಎ ಉಪಕಾಲುವೆ ನಿರ್ಮಿಸುವಂತೆ ರೈತರು 12 ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. ನಾಲ್ಕು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ರೈತರು 138 ದಿನಗಳಿಂದ ನಿರಂತರ ಧರಣಿ ಮಾಡುತ್ತಿರುವುದು ಚುನಾವಣೆಯ ಪ್ರಮುಖ ವಿಷಯವಾಗಿದೆ.

'ಉಪಚುನಾವಣೆ ಮುಗಿಯುತ್ತಿದ್ದಂತೆ ಕಾಲುವೆ ಮಾಡಲು ತಜ್ಞರ ತಂಡ ನೇಮಿಸುತ್ತೇವೆ. ಈ ಭಾಗಕ್ಕೆ ನೀರು ತಲುಪಿಸುತ್ತೇವೆ' ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. 'ಕಾಂಗ್ರೆಸ್ ಆಡಳಿತಾವಧಿಯಲ್ಲಿ ಪ್ರತಾಪಗೌಡ ಈ ಬಗ್ಗೆ ಗಮನ ಸೆಳೆಯಲಿಲ್ಲ. 2023 ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಎಷ್ಟೇ ವೆಚ್ಚವಾದರೂ 5ಎ ಕಾಲುವೆ ಮಾಡುತ್ತೇವೆ' ಎಂದು ಕಾಂಗ್ರೆಸ್ ನಾಯಕರು ಘೋಷಿಸಿದ್ದಾರೆ. ಹೋರಾಟ ನಿರತ ರೈತರಲ್ಲೂ ಈಗ ಎರಡು ಬಣಗಳಾಗುವಂತೆ ಈ ಪಕ್ಷಗಳು ನೋಡಿಕೊಂಡಿವೆ!

ಸಂಪೂರ್ಣ ಗ್ರಾಮೀಣ ಕ್ಷೇತ್ರ

ಮಸ್ಕಿ 2017ರಲ್ಲಿ ಹೊಸ ತಾಲ್ಲೂಕು ಕೇಂದ್ರವಾಗಿದೆ. ಈ ವಿಧಾನಸಭೆ ಕ್ಷೇತ್ರವು ಭೌಗೋಳಿಕವಾಗಿ ಮೂರು ತಾಲ್ಲೂಕುಗಳ ಗ್ರಾಮಗಳನ್ನು ಒಳಗೊಂಡಿದೆ.

ಮಾನ್ವಿ ತಾಲ್ಲೂಕಿನ 42 ಗ್ರಾಮಗಳು, ಲಿಂಗಸುಗೂರು ತಾಲ್ಲೂಕಿನ 54 ಗ್ರಾಮಗಳು ಹಾಗೂ ಸಿಂಧನೂರು ತಾಲ್ಲೂಕಿನ 74–ಹೀಗೆ ಒಟ್ಟು 170 ಗ್ರಾಮಗಳು ಹಾಗೂ 30 ಆಂಧ್ರ ಕ್ಯಾಂಪ್‌ಗಳು, 30 ಲಂಬಾಣಿ ತಾಂಡಾಗಳು ಹಾಗೂ 17 ಗೊಲ್ಲರಹಟ್ಟಿಗಳು ಈ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿವೆ.

ಕಾನೂನು ಹೋರಾಟ

2018ರ ಚುನಾವಣೆಯಲ್ಲಿ ಪ್ರತಾಪಗೌಡ ಪಾಟೀಲ ಅವರ ಪುತ್ರಿ ಅಮೆರಿಕದಲ್ಲಿದ್ದರೂ ಅವರ ಹೆಸರಿನಲ್ಲಿ ಮತದಾನವಾಗಿದೆ. ಮರಣ ಹೊಂದಿದವರ ಹೆಸರಿನಲ್ಲಿ ಮತದಾನವಾಗಿದ್ದು, ಚುನಾವಣಾ ಅಕ್ರಮ ನಡೆದಿದೆ ಎಂದು ಪರಾಜಿತ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಹೈಕೋರ್ಟ್ ಮೊರೆ ಹೋಗಿದ್ದರು. ಹೀಗಾಗಿ ಈ ಕ್ಷೇತ್ರದ ಉಪಚುನಾವಣೆ ವಿಳಂಬವಾಗಿ ನಡೆಯುತ್ತಿದೆ. ಬಿಜೆಪಿ ಸರ್ಕಾರ ರಚನೆಯಾದ ಕೆಲ ತಿಂಗಳ ನಂತರ ಬಸನಗೌಡರಿಗೆ ಟಿಎಲ್‌ಬಿಸಿ ಕಾಡಾ ಅಧ್ಯಕ್ಷ ಸ್ಥಾನ ನೀಡಿ ಪ್ರಕರಣ ವಾಪಸ್ ಪಡೆಯುವಂತೆ ಮಾಡಲಾಯಿತು. ಕಾಡಾ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ, ಕಾಂಗ್ರೆಸ್ ಸೇರಿದ ಅವರು ಪ್ರತಾಪಗೌಡರಿಗೆ ಮತ್ತೆ ಸೆಡ್ಡು ಹೊಡೆದಿದ್ದಾರೆ.

ಮುಖ್ಯಮಂತ್ರಿಯಿಂದ ಜಾತಿವಾರು ಸಭೆ: ಡಿಕೆಶಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಮತ ಕ್ಷೇತ್ರಗಳಿಗೆ ತೆರಳಿ ಜಾತಿವಾರು ಸಭೆಗಳನ್ನು ನಡೆಸುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡುತ್ತೇನೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಬಿಜೆಪಿ ಪರ ಪ್ರಚಾರಕ್ಕೆ ಬರುವವರಿಗೆ ಮಸ್ಕಿಯಲ್ಲಿ ತಲಾ ₹ 300 ಹಂಚುವುದು ದೃಢಪಟ್ಟಿದೆ. ಹೀಗಾಗಿ, ಬಿಜೆಪಿ ಅಭ್ಯರ್ಥಿಯನ್ನು ಸ್ಪರ್ಧೆಯಿಂದ ಅನರ್ಹಗೊಳಿಸುವಂತೆ ಕೂಡಾ ಮನವಿ ಮಾಡುತ್ತೇನೆ' ಎಂದರು.

'ರಾಜ್ಯದಲ್ಲಿ ಆಡಳಿತ ಕುಸಿದು ಹೋಗಿದೆ. ಈ ವರ್ಷ ನಡೆದಷ್ಟು ಪ್ರತಿಭಟನೆ, ಮುಷ್ಕರ ಎಂದೂ ನಡೆದಿಲ್ಲ. ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಎಲ್ಲ ವರ್ಗದವರಿಗೆ ಸಮಸ್ಯೆ ತಂದಿಟ್ಟಿದೆ. ಉಪಚುನಾವಣೆ ನಡೆಯಲಿರುವ ಮೂರೂ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ರಾಜ್ಯದಲ್ಲಿ ಬದಲಾವಣೆ ತರಬೇಕು ಎಂಬ ಅಭಿಪ್ರಾಯ ಎಲ್ಲ ಕಡೆ ವ್ಯಕ್ತವಾಗುತ್ತಿದೆ' ಎಂದರು.

'ಸಾರಿಗೆ ನೌಕರರ ಸಮಸ್ಯೆಯನ್ನು ಸರ್ಕಾರ ಆಲಿಸಬೇಕಿತ್ತು. ಆದರೆ, ಅದನ್ನು ಬಿಟ್ಟು ಸಾರಿಗೆಯನ್ನು ಖಾಸಗಿಯವರ ಕೈಗಿಡಲು ಹೊರಟಿದ್ದಾರೆ. ಕೆಎಸ್‌ಆರ್‌ಟಿಸಿ, ಬಿಎಂಟಿಸಿಯನ್ನು ಖಾಸಗಿಯವರಿಗೆ ಮಾರುವ ಒಳ ಸಂಚು ನಡೆದಿದೆ' ಎಂದೂ ಆರೋಪಿಸಿದರು.

'ಮತ್ತೆ ಕೊರೊನಾ ಆತಂಕ ಆರಂಭವಾಗಿದೆ. ಲಸಿಕೆ ಪಡೆದವರಿಗೂ ಕೊರೊನಾ ಬರುತ್ತಿದೆ. ರಾತ್ರಿ ಮಾತ್ರ ಕೊರೊನಾ ಹರಡುತ್ತದೆಯೇ? ಚಿತ್ರರಂಗ, ಜಿಮ್ ಸಮಸ್ಯೆಗೆ ಒಳಗಾಗಿವೆ. ಬೆಲೆ ಹೆಚ್ಚಳ ಮಿತಿ ಮೀರಿದೆ. ರಸಗೊಬ್ಬರ ದರ ಹೆಚ್ಚಾಗಿದೆ. ಪ್ರಧಾನಿ, ಮುಖ್ಯಮಂತ್ರಿ, ಸಂಸದರು ಏನೂ ಮಾತನಾಡುತ್ತಿಲ್ಲ. ನೀವು (ಸರ್ಕಾರ) ಜನರನ್ನು ಹಿಂಡುತ್ತಿದ್ದೀರಿ' ಎಂದು ಬೇಸರ ವ್ಯಕ್ತಪಡಿಸಿದರು.

'ಹೋರಾಟಗಾರರ ಪರವಾಗಿ ಕಾಂಗ್ರೆಸ್ ಇರಲಿದೆ. ಸರ್ಕಾರದ ವೈಫಲ್ಯ, ದುರಾಡಳಿತ ವಿರುದ್ಧ ದನಿಯಾಗಿ ಉಪಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಮತ ನೀಡಿ ಕಾಂಗ್ರೆಸ್ ಗೆಲ್ಲಿಸುವಂತೆ ಮತದಾರರಲ್ಲಿ ಮನವಿ ಮಾಡುತ್ತೇನೆ' ಎಂದು ಹೇಳಿದರು.

'ಯಡಿಯೂರಪ್ಪ, ಈಶ್ವರಪ್ಪನದು ಕಮಿಷನ್ ಜಗಳ'



ಬಸವಕಲ್ಯಾಣ: 'ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಸಚಿವ ಈಶ್ವರಪ್ಪ ನಡುವೆ ಕಮಿಷನ್‌ಗಾಗಿ ಜಗಳ ಹುಟ್ಟಿಕೊಂಡಿದ್ದು, ಈಶ್ವರಪ್ಪ ರಾಜ್ಯಪಾಲರಿಗೆ ಪತ್ರ ಬರೆದಿರುವುದೇ ಇದಕ್ಕೆ ಸಾಕ್ಷಿ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ಸಸ್ತಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಮಾಲಾ ಬಿ.ನಾರಾಯಣರಾವ್ ಪರ ಸೋಮವಾರ ಆಯೋಜಿಸಿದ್ದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಅವರದೇ ಪಕ್ಷದ ಬಸನಗೌಡ ಪಾಟೀಲ ಯತ್ನಾಳ ಅವರೇ ಯಡಿಯೂರಪ್ಪ ಅವರ ಇಡೀ ಕುಟುಂಬ ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಆರೋಪಿಸಿದ್ದಾರೆ. ಹೀಗಾಗಿ ಸರ್ಕಾರ ಅಸ್ಥಿರವಾಗಿದೆ' ಎಂದರು.

'ಕಾಂಗ್ರೆಸ್ ಜಾರಿಗೊಳಿಸಿದ ನರೇಗಾ ಹಾಗೂ ನಾನು ನೀಡಿದ ಉಚಿತ ಅಕ್ಕಿ ವಿತರಿಸುವ ಯೋಜನೆಗಳು ಇಲ್ಲದಿದ್ದರೆ ಕೊರೊನಾ ಸಮಯದಲ್ಲಿ ಜನರ ಪರಿಸ್ಥಿತಿ ಏನಾಗುತ್ತಿತ್ತು' ಎಂದು ಪ್ರಶ್ನಿಸಿ, ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸುವಂತೆ ಮನವಿ ಮಾಡಿದರು.

ಉಪ ಚುನಾವಣೆ ಅಖಾಡಕ್ಕೆ ಬಂದ ಬಾಲಚಂದ್ರ

'ಪಕ್ಷದ ಪರ ಪ್ರಚಾರ ಮಾಡುವೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬೇರೆ ಕೆಲಸದಲ್ಲಿ ಇದ್ದುದರಿಂದ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಮಂಗಲಾ ಅಂಗಡಿ ಪರವಾಗಿ ಪ್ರಚಾರ ನಡೆಸಲು ಈವರೆಗೆ ಸಾಧ್ಯವಾಗಿರಲಿಲ್ಲ. ಈಗ ಬಂದಿದ್ದೇನೆ. ಏ. 16ರವರೆಗೂ ಪ್ರಚಾರ ಕಾರ್ಯದಲ್ಲಿ ಭಾಗಿಯಾಗುತ್ತೇನೆ' ಎಂದು ಕೆಎಂಎಫ್ ಅಧ್ಯಕ್ಷರೂ ಆಗಿರುವ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಿಳಿಸಿದರು.

ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ದಿವಂಗತ ಸುರೇಶ ಅಂಗಡಿ ಅವರಿಗೆ ಬಂದಷ್ಟೇ ಲೀಡ್ ಈಗಲೂ ಬರುವಂತೆ ನೋಡಿಕೊಳ್ಳುತ್ತೇವೆ' ಎಂದರು.

'ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ನಮ್ಮ ಸಹೋದರ ಇರಬಹುದು. ಆದರೆ, ನಾನು ಮತ್ತು ರಮೇಶ ಜಾರಕಿಹೊಳಿ ನಮ್ಮ ಪಕ್ಷದ ಪರವಾಗಿ ಕೆಲಸ ಮಾಡುತ್ತೇವೆ. ಪಕ್ಷದ ಆದೇಶ ಪಾಲಿಸುತ್ತೇವೆ' ಎಂದು ಪ್ರತಿಕ್ರಿಯಿಸಿದರು.


ಬಾಲಚಂದ್ರ ಜಾರಕಿಹೊಳಿ

'ಸಹೋದರ ರಮೇಶಗೆ ಕೋವಿಡ್–19 ದೃಢಪಟ್ಟಿದ್ದು, ಸದ್ಯ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೆಗೆಟಿವ್ ವರದಿ ಬಂದರೆ ಪ್ರಚಾರ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುತ್ತಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಗೋಕಾಕ ಮತ್ತು ಅರಭಾವಿ ಮತ ಕ್ಷೇತ್ರದಲ್ಲಿ ಪ್ರಚಾರ ನಡೆಸಿದರೆ ಅವರೊಂದಿಗೆ ಭಾಗವಹಿಸುತ್ತೇವೆ' ಎಂದರು.

'ರಮೇಶ ಜಾರಕಿಹೊಳಿ ವಿರುದ್ಧದ ಸಿ.ಡಿ. ಪ್ರರಣಕ್ಕೆ ಸಂಬಂಧಿಸಿದಂತೆ ಕಾನೂನು ಹೋರಾಟ ನಡೆಸಿದ್ದೇವೆ. ಎಸ್‌ಐಟಿ ತನಿಖೆ ಪ್ರಗತಿಯಲ್ಲಿದೆ. ಆ ಯುವತಿಯು, ಸದಾಶಿವನಗರ ಠಾಣೆಯಲ್ಲಿ ರಮೇಶ ಜಾರಕಿಹೊಳಿ ದಾಖಲಿಸಿದ್ದ ಪ್ರಕರಣದಲ್ಲಿ ಸಾಕ್ಷ್ಯ ಹೇಳಲು ಒಪ್ಪಿರುವ ವಿಷಯ ಗೊತ್ತಿಲ್ಲ' ಎಂದರು.

ಉಪ ಚುನಾವಣೆ ಬಳಿಕ ನಾಯಕತ್ವ ಬದಲಾವಣೆ ಆಗುತ್ತದೆ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಲು ನಿರಾಕರಿಸಿದರು. 'ಚುನಾವಣೆ ಇದೆ. ಕಾರ್ಯಕರ್ತರಲ್ಲಿ ಗೊಂದಲ ಉಂಟಾಗಬಹುದು. ಹೀಗಾಗಿ, ಆ ಬಗ್ಗೆ ಏನನ್ನೂ ಮಾತನಾಡುವುದಿಲ್ಲ. ಕೆಎಂಎಫ್ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಆ ಕೆಲಸ ಮಾಡುತ್ತಿದ್ದೇನೆ. ದೈವದ ಬಲ ಇದ್ದವರು ಜಿಲ್ಲಾ ಉಸ್ತುವಾರಿ ಸಚಿವರಾಗುತ್ತಾರೆ' ಎಂದು ಹೇಳಿದರು.

ಸುಶೀಲ್ ಚಂದ್ರ ಮುಖ್ಯ ಚುನಾವಣಾ ಆಯುಕ್ತ



ನವದೆಹಲಿ (ಪಿಟಿಐ): ನೂತನ ಮುಖ್ಯ ಚುನಾವಣಾ ಆಯುಕ್ತರಾಗಿ ಸುಶೀಲ್ ಚಂದ್ರ ಅವರು ನೇಮಕಗೊಂಡಿದ್ದಾರೆ ಎಂದು ಕಾನೂನು ಸಚಿವಾಲಯದ ಹೇಳಿಕೆ ತಿಳಿಸಿದೆ.

ಚಂದ್ರ ಅವರು ಮಂಗಳವಾರ (ಏ. 13) ಅಧಿಕಾರ ಸ್ವೀಕರಿಸುವರು. ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಸುನಿಲ್ ಅರೋರಾ ಅವರ ಅಧಿಕಾರಾವಧಿ ಸೋಮವಾರ ಅಂತ್ಯಗೊಂಡಿತು.

ಸುಶೀಲ್ ಚಂದ್ರ ಅವರು ಚುನಾವಣಾ ಆಯುಕ್ತರಾಗಿ ಫೆಬ್ರುವರಿ 14, 2019ರಂದು ನೇಮಕವಾಗಿದ್ದರು. ಮುಖ್ಯ ಚುನಾವಣಾ ಆಯುಕ್ತರಾಗಿ ಇವರ ಅಧಿಕಾರಾವಧಿಯು ಮೇ 14, 2022ರವರೆಗೂ ಇದೆ.

ಚಂದ್ರ ಅವರ ನೇತೃತ್ವದಲ್ಲಿ ಆಯೋಗವು ಗೋವಾ, ಮಣಿಪುರ, ಉತ್ತರಾಖಂಡ, ಪಂಜಾಬ್ ರಾಜ್ಯಗಳ ಚುನಾವಣೆ ನಡೆಸಲಿದೆ. ಈ ರಾಜ್ಯಗಳಲ್ಲಿ ಸರ್ಕಾರಗಳ ಅವಧಿ ಮುಂದಿನ ವರ್ಷ ಮಾರ್ಚ್ ತಿಂಗಳಲ್ಲಿ ವಿವಿಧ ದಿನಾಂಕಗಳಲ್ಲಿ ಅಂತ್ಯಗೊಳ್ಳಲಿವೆ.

'ಬಸವಕಲ್ಯಾಣ ಸಮಗ್ರ ಅಭಿವೃದ್ಧಿ'

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: 'ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪ ನಿರ್ಮಾಣಕ್ಕೆ ₹500 ಕೋಟಿ ಪೈಕಿ ₹ 200 ಕೋಟಿ ಬಿಡುಗಡೆ ಮಾಡಲಾಗಿದೆ. ಅಂತರರಾಷ್ಟ್ರೀಯ ಪ್ರವಾಸಿತಾಣವಾಗಿ ಇದನ್ನು ಅಭಿವೃದ್ಧಿ ಪಡಿಸಲಾಗುವುದು' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದರು.

ತಾಲ್ಲೂಕಿನ ಲಾಡವಂತಿ ಗ್ರಾಮದಲ್ಲಿ ಸೋಮವಾರ ಬಿಜೆಪಿ ಅಭ್ಯರ್ಥಿ ಶರಣು ಸಲಗರ ಪರ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಬಸವಕಲ್ಯಾಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಉದ್ಯಾನ ನಿರ್ಮಾಣ, ಈ ಕ್ಷೇತ್ರದ ಪ್ರತಿ ಹಳ್ಳಿಯ ಅಭಿವೃದ್ಧಿ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು ಕ್ರಮ ಕೈಗೊಳ್ಳಲಾಗುವುದು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಎನ್ನುವ ತಾರತಮ್ಯ ಮಾಡದೇ ಎಲ್ಲ ಸಮುದಾಯಗಳ ಅಭಿವೃದ್ಧಿಗೆ ಬದ್ಧ' ಎಂದು ಅವರು ಹೇಳಿದರು.

'ಮರಾಠ ಸಮಾಜ 2ಎಗೆ ಸೇರಿಸುವ ಭರವಸೆ'

'ಮರಾಠ ಸಮಾಜವನ್ನು ಪ್ರವರ್ಗ 2ಎಗೆ ಸೇರಿಸುವುದಾಗಿ ಮುಖ್ಯಮಂತ್ರಿ ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸ್ಪಷ್ಟ ಭರವಸೆ ನೀಡಿದ್ದಾರೆ. ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಭಾನುವಾರ ನನ್ನ ಮನೆಗೆ ಬಂದು ಮತ್ತೆ ಈ ಭರವಸೆ ಕೊಟ್ಟಿದ್ದಾರೆ' ಎಂದು ಮಾಜಿ ಶಾಸಕ ಮಾರುತಿರಾವ್ ಮುಳೆ ಹೇಳಿದರು.

'ಮರಾಠ ಸಮಾಜವನ್ನು 2ಎಗೆ ಸೇರಿಸುವುದು, ಷಹಾಜಿ ಹಾಗೂ ಸಂಭಾಜಿ ಮಹಾರಾಜr ಸಮಾಧಿ, ಬಸವಕಲ್ಯಾಣದಲ್ಲಿ ಶಿವಾಜಿ ಪಾರ್ಕ್ ನಿರ್ಮಾಣದ ಬೇಡಿಕೆ ಒಪ್ಪಿಕೊಂಡಿದ್ದರಿಂದ ನಾನು ಬಿಜೆಪಿ ಸೇರಿದ್ದೇನೆ' ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಪಾಲ್ಗೊಂಡಿದ್ದ ಬಿಜೆಪಿ ಪ್ರಚಾರ ಸಭೆಯಲ್ಲಿ ಹೇಳಿದರು. ಆದರೆ, ಮೀಸಲಾತಿ ವಿಷಯದ ಬಗ್ಗೆ ಯಡಿಯೂರಪ್ಪ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಲಿಲ್ಲ.

'ಮತಎಣಿಕೆ ವಿಡಿಯೊ ಚಿತ್ರೀಕರಿಸಿ'

ಗುವಾಹಟಿ (ಪಿಟಿಐ): ಮತ ಎಣಿಕೆಯನ್ನು ವಿಡಿಯೊ ಚಿತ್ರೀಕರಣ ಮಾಡಬೇಕು ಎಂದು ಆಂಚಲಿಕ್ ಗಣ ಮೋರ್ಚಾ (ಎಜಿಎಂ) ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ.

ಪಕ್ಷದ ಅಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ ಅಜಿತ್ ಕುಮಾರ್ ಭೂಯನ್ ಅವರು ಪತ್ರ ಬರೆದಿದ್ದಾರೆ. 'ಮತಎಣಿಕೆಗೆ ಚುನಾವಣಾ ಆಯೋಗವು ಸಂಪೂರ್ಣವಾಗಿ ರಾಜ್ಯ ಸರ್ಕಾರಿ ನೌಕರರ ಮೇಲೆ ಅವಲಂಬಿತವಾಗಿದೆ. ಸರ್ಕಾರಿ ನೌಕರರಲ್ಲಿ ಹಲವರು ಬಿಜೆಪಿ ಬೆಂಬಲಿಗರಿದ್ದಾರೆ. ಅವರು ಎಣಿಕೆ ವೇಳೆ ವಂಚನೆ ಎಸಗುವ ಅಪಾಯವಿದೆ. ಹೀಗಾಗಿ ಮತ ಎಣಿಕೆಯ ವಿಡಿಯೊ ಚಿತ್ರೀಕರಣ ಮಾಡಬೇಕು. 1961ರ ಚುನಾವಣಾ ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆ' ಎಂದು ಹೇಳಿದ್ದಾರೆ.

ಎಂಇಎಸ್ ಪರ ಸಂಜಯ್ ರಾವುತ್ ಪ್ರಚಾರ ನಾಳೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಎಂಇಎಸ್ (ಮಹಾರಾಷ್ಟ್ರ ಏಕೀಕರಣ ಸಮಿತಿ) ಹಾಗೂ ಶಿವಸೇನಾ ಪಕ್ಷ ಬೆಂಬಲಿತ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಶುಭಂ ಶೆಳಕೆ ಪರವಾಗಿ ಮತ ಯಾಚಿಸುವುದಕ್ಕಾಗಿ ಮಹಾರಾಷ್ಟ್ರದ ಶಿವಸೇನಾ ವಕ್ತಾರ ಸಂಜಯ್ ರಾವುತ್ ಏ. 14ರಂದು ಇಲ್ಲಿಗೆ ಬರಲಿದ್ದಾರೆ.

ಈ ಬಗ್ಗೆ ಸೋಮವಾರ ಟ್ವೀಟ್ ಮಾಡಿರುವ ಅವರು, 'ಶೆಳಕೆಗೆ ಬೆಂಬಲ ನೀಡಿ ಪ್ರಚಾರ ನಡೆಸಲಿದ್ದೇನೆ' ಎಂದು ತಿಳಿಸಿದ್ದಾರೆ.

'ಕರ್ನಾಟಕ–ಮಹಾರಾಷ್ಟ್ರದ ಗಡಿ ವಿಚಾರವನ್ನು ಮುಂದಿಟ್ಟುಕೊಂಡು ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಎಂಇಸ್ ಹಾಗೂ ಶಿವಸೇನಾ ಮುಖಂಡರು ಸಭೆಯಲ್ಲಿ ನಿರ್ಧರಿಸಿದ್ದರು. ಅದರಂತೆ ಅಭ್ಯರ್ಥಿ ಕಣಕ್ಕಿಳಿಸಿವೆ. ಶಿವಸೇನಾದಿಂದ ಸ್ಪರ್ಧಿಸಿದ್ದ ಕೃಷ್ಣಾಜಿ ಪಾಟೀಲ ನಾಮಪತ್ರ ವಾಪಸ್ ಪಡೆದು ಕಣದಿಂದ ಹಿಂದಕ್ಕೆ ಸರಿದಿದ್ದರು.

ಬೆಳಗಾವಿ ಗ್ರಾಮೀಣ, ಬೆಳಗಾವಿ ದಕ್ಷಿಣ ಹಾಗೂ ಬೆಳಗಾವಿ ಉತ್ತರ ವಿಧಾನಸಭಾ ಕ್ಷೇತ್ರಗಳಲ್ಲಿ ಅದರಲ್ಲೂ ಮರಾಠಿ ಭಾಷಿಗರು ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶಗಳಲ್ಲಿ ಶೆಳಕೆ ಪ್ರಚಾರ ನಡೆಸುತ್ತಿದ್ದಾರೆ.

ಬಿಜೆಪಿ ಪರವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಏ.14ರಂದು ನಗರದಲ್ಲಿ ರೋಡ್ ಷೋ ನಡೆಸಲಿದ್ದಾರೆ. ಏ.15ರಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಕೂಡ ಪ್ರಚಾರಕ್ಕೆ ಬರುವ ನಿರೀಕ್ಷೆ ಇದೆ.

ಮಮತಾ ಪ್ರಚಾರಕ್ಕೆ ನಿಷೇಧ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು 24 ಗಂಟೆ ಪ್ರಚಾರ ನಡೆಸುವುದಕ್ಕೆ ನಿಷೇಧ ಹೇರಿ ಚುನಾವಣಾ ಆಯೋಗವು ಸೋಮವಾರ ಆದೇಶ ಹೊರಡಿಸಿದೆ. ಸೋಮವಾರ ರಾತ್ರಿ 8ರಿಂದ ಮಂಗಳವಾರ ರಾತ್ರಿ 8ರವರೆಗೆ ನಿಷೇಧ ಜಾರಿಯಲ್ಲಿ ಇರಲಿದೆ.

'ಧರ್ಮಕ್ಕೆ ಸಂಬಂಧಿಸಿದಂತೆ ಪ್ರಚೋದನಕಾರಿ ಮತ್ತು ಭದ್ರತಾಪಡೆಗಳ ವಿರುದ್ಧ ಮಮತಾ ಬ್ಯಾನರ್ಜಿ ಅವರು ನೀಡಿರುವ ಹೇಳಿಕೆಗಳು ರಾಜ್ಯದಾದ್ಯಂತ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತಂದಿದೆ. ಹೀಗಾಗಿ ಅವರ ಪ್ರಚಾರದ ಮೇಲೆ ನಿಷೇಧ ಹೇರಲಾಗಿದೆ' ಎಂದು ಚುನಾವಣಾ ಆಯೋಗವು ಹೇಳಿದೆ.

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇರುವವರೆಗೂ ಮಮತಾ ಅವರು ಇಂತಹ ಹೇಳಿಕೆ ನೀಡಬಾರದು ಎಂದು ಎಚ್ಚರಿಕೆ ನೀಡುತ್ತಿದ್ದೇವೆ' ಎಂದು ಆಯೋಗವು ಹೇಳಿದೆ.

ಮುಸ್ಲಿಮರು ಒಂದಾಗಬೇಕು. ಬಿಜೆಪಿ ವಿರುದ್ಧ ಮತ ಚಲಾಯಿಸಬೇಕು ಎಂದು ಮಮತಾ ಬ್ಯಾನರ್ಜಿ ಅವರು ಪ್ರಚಾರದಲ್ಲಿ ಹೇಳಿದ್ದರು. ಈ ಹೇಳಿಕೆಯು ನೀತಿ ಸಂಹಿತೆಯನ್ನು ಉಲ್ಲಂಘಿಸುತ್ತದೆ ಎಂದು ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿತ್ತು. 'ಭದ್ರತಾ ಪಡೆಗಳ ಮೇಲೆ ದಾಳಿ ನಡೆಸಿ ಎಂದು ಮಮತಾ ಅವರು ಜನರನ್ನು ಪ್ರಚೋದಿಸುತ್ತಿದ್ದಾರೆ' ಎಂದೂ ಬಿಜೆಪಿ ಮತ್ತೊಂದು ದೂರು ನೀಡಿತ್ತು. ಈ ದೂರುಗಳಿಗೆ ಸಂಬಂಧಿಸಿದಂತೆ ಆಯೋಗವು ಮಮತಾ ಅವರಿಗೆ ಎರಡು ನೋಟಿಸ್ ನೀಡಿತ್ತು. ಎರಡು ನೋಟಿಸ್‌ಗಳಿಗೂ ಮಮತಾ ಉತ್ತರ ನೀಡಿದ್ದರು.

ಈಗ ಚುನಾವಣಾ ಆಯೋಗವು ಈ ಸಂಬಂಧ ಮಮತಾ ಅವರ ಪ್ರಚಾರದ ಮೇಲೆ ನಿಷೇಧ ಹೇರಿ ಕ್ರಮ ತೆಗೆದುಕೊಂಡಿದೆ. ಆಯೋಗದ ಈ ಕ್ರಮವನ್ನು ಟಿಎಂಸಿ ಖಂಡಿಸಿದೆ. ಆಯೋಗವು ಬಿಜೆಪಿಯ ಅಣತಿಯಂತೆ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದೆ.

'ಪ್ರಜಾಪ್ರಭುತ್ವದ ಹತ್ಯೆ'


ಬಿಜೆಪಿಯ ಒಂದು ಘಟಕವೇನೋ ಎಂಬಂತೆ ಚುನಾವಣಾ ಆಯೋಗ ವರ್ತಿಸುತ್ತಿದೆ. ಈ ನಿಷೇಧವು ನಿರಂಕುಶವಾದ ಕ್ರಮ. ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ತಾವು ಸೋಲುತ್ತೇವೆ ಎಂದು ಬಿಜೆಪಿಗೆ ಮನದಟ್ಟಾಗಿದೆ. ಹೀಗಾಗಿ ಮಮತಾ ಬ್ಯಾನರ್ಜಿ ಅವರು ಪ್ರಚಾರ ಮಾಡುವುದನ್ನು ತಡೆಯುವ ಏಕೈಕ ಉದ್ದೇಶದಿಂದ ಚುನಾವಣಾ ಆಯೋಗವನ್ನು ಬಳಸಿಕೊಂಡು ಈ ನಿಷೇಧ ಹೇರಲಾಗಿದೆ. ನಾಚಿಕೆಯಾಗಬೇಕು

ಕುನಾಲ್ ಘೋಷ್, ಟಿಎಂಸಿ ನಾಯಕ



ಇ.ಸಿ (ಎಲೆಕ್ಷನ್ ಕಮಿಷನ್/ಚುನಾವಣಾ ಆಯೋಗ) ಎಂಬುದನ್ನು ಎಕ್ಸ್‌ಟ್ರೀಮ್ಲಿ ಕಾಂಪ್ರಮೈಸ್ಡ್ ಎಂದು ಕರೆಯಬಹುದು. ಏಪ್ರಿಲ್ 12 ಭಾರತದ ಪ್ರಜಾಪ್ರಭುತ್ವದ ಕರಾಳ ದಿನ

ಡೆರೆಕ್ ಒಬ್ರಿಯಾನ್, ಟಿಎಂಸಿ ಸಂಸದ



ಚುನಾವಣಾ ಆಯೋಗದ ಪ್ರಜಾಸತ್ತಾತ್ಮಕವಲ್ಲದ ಮತ್ತು ಸಂವಿಧಾನಬಾಹಿರವಾದ ಈ ನಿಷೇಧವನ್ನು ಖಂಡಿಸಿ, ಮಂಗಳವಾರ ಮಧ್ಯಾಹ್ನ ಕೋಲ್ಕತ್ತದ ಗಾಂಧಿ ಪ್ರತಿಮೆ ಎದುರು ಧರಣಿ ಕೂರುತ್ತೇನೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಚುನಾವಣಾ ಕಣದಲ್ಲಿ

- ಪರಿಶಿಷ್ಟ ಜಾತಿಯ ಜನರನ್ನು ಬಿಕ್ಷುಕರು ಎಂದು ಕರೆದಿರುವ ಟಿಎಂಸಿಯ ನಾಯಕರ ವಿರುದ್ಧ ಪ್ರಚಾರ ನಡೆಸುವ ಅಭಿಯಾನಕ್ಕೆ ಪಶ್ಚಿಮ ಬಂಗಾಳ ಬಿಜೆಪಿ ಘಟಕ ಸೋಮವಾರ ಚಾಲನೆ ನೀಡಿದೆ
- ಸೀತಾಲಕುಚಿ ಹತ್ಯಾಕಾಂಡವು ಅಮಿತ್ ಶಾ ಅವರ ಸಂಚಿನಂತೆಯೇ ನಡೆದಿದೆ. ಈ ಸಂಚಿನ ಸಂಪೂರ್ಣ ಮಾಹಿತಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತು ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ. ಈ ಆರೋಪವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಲ್ಲಗಳೆದಿದ್ದಾರೆ


ಪಶ್ಚಿಮ ಬಂಗಾಳದ ಸಿಲಿಗುರಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ರಾತ್ರಿ ರೋಡ್ ಶೋ ನಡೆಸಿದರು – ಪಿಟಿಐ ಚಿತ್ರ

ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್ ಹೇಳಿಕೆಗೆ ವ್ಯಾಪಕ ಟೀಕೆ

ಮತ್ತೆ ಗೋಲಿಬಾರ್, ಹತ್ಯೆಯ ಬೆದರಿಕೆ

ಪ್ರಜಾವಾಣಿ ವಾರ್ತೆ

ಬಾರಾನಗರ್ (ಪಶ್ಚಿಮ ಬಂಗಾಳ) (ಪಿಟಿಐ): ಸೀತಾಲಕುಚಿಯಲ್ಲಿನ ತುಂಟ ಹುಡುಗರು ಗುಂಡೇಟು ತಿಂದಿದ್ದಾರೆ. ಮುಂದಿನ ಹಂತದ ಮತದಾನದಲ್ಲಿ ತುಂಟತನ ತೋರಿದರೆ ಮತ್ತಷ್ಟು ಗುಂಡೇಟು ತಿನ್ನಬೇಕಾಗುತ್ತದೆ ಎಂದು ಪಶ್ಚಿಮ ಬಂಗಾಳ ಬಿಜೆಪಿ ಅಧ್ಯಕ್ಷ ದಿಲೀಪ್ ಘೋಷ್ ಬೆದರಿಕೆ ಹಾಕಿದ್ದಾರೆ.

ಬಾರಾನಗರ್‌ನಲ್ಲಿ ಭಾನುವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು ಕೂಚ್‌ಬಿಹಾರ್ ಗೋಲಿಬಾರ್ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಭಾಷಣದ ವಿಡಿಯೊ ಭಾನುವಾರ ವೈರಲ್ ಆಗಿದೆ.

'ಸೀತಾಲಕುಚಿಯಲ್ಲಿ ತುಂಟ ಹುಡುಗರು ಗುಂಡೇಟು ತಿಂದಿದ್ದಾರೆ. ಮತ್ತೆ ಬೇರೆ ತುಂಟ ಹುಡುಗರು ಅದೇ ರೀತಿ ಮಾಡಿದರೆ, ಸಿತಾಲಕುಚಿಯಲ್ಲಿ ಆದದ್ದೇ ಅವರಿಗೂ ಆಗುತ್ತದೆ' ಎಂದು ಅವರು ಹೇಳಿದ್ದಾರೆ.

'ಸಿಐಎಸ್‌ಎಫ್ ಸಿಬ್ಬಂದಿ ಕೈಯ್ಯಲ್ಲಿ ರೈಫಲ್ ಇರುವುದು ಕೇವಲ ಪ್ರದರ್ಶನಕ್ಕೆ ಎಂದು ಈ ತುಂಟ ಹುಡುಗರು ತಿಳಿದುಕೊಂಡಿರಬಹುದು. ಹಾಗೆ ತಿಳಿದುಕೊಂಡು ಮತ್ತದೇ ತುಂಟಾಟ ಆಡಿದರೆ, ಸೀತಾಲಕುಚಿಯಲ್ಲಿ ನಡೆದದ್ದು ಪುನರಾವರ್ತನೆಯಾಗುತ್ತದೆ. ಈ ಬಾರಿ ನಾಲ್ಕು ಜನರಲ್ಲ, ಅದಕ್ಕಿಂತಲೂ ಹೆಚ್ಚು ಜನರು ಬೀಳಬಹುದು' ಎಂದು ದಿಲೀಪ್ ಘೋಷ್ ಹೇಳಿದ್ದಾರೆ.

ದಿಲೀಪ್ ಅವರ ಈ ಹೇಳಿಕೆಗೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. 'ದಿಲೀಪ್ ಘೋಷ್ ಅವರ ಹೇಳಿಕೆ ಪ್ರಚೋದನಕಾರಿಯಾಗಿದೆ. ಮತ್ತಷ್ಟು ಹಿಂಸಾಚಾರಕ್ಕೆ ಪ್ರಚೋದನೆ ನೀಡುತ್ತದೆ. ಹೀಗಾಗಿ ಅವರನ್ನು ಕೂಡಲೇ ಬಂಧಿಸಬೇಕು' ಎಂದು ಟಿಎಂಸಿ ಸಂಸದ ಸುಕೇಂದು ಶೇಖರ್ ರಾಯ್ ಆಗ್ರಹಿಸಿದ್ದಾರೆ.

'ದಿಲೀಪ್ ಅವರ ಹೇಳಿಕೆ ಬಿಜೆಪಿಯ ನಿರಂಕುಶ ಮುಖವಾಡವನ್ನು ಜಗಜ್ಜಾಹೀರು ಮಾಡಿದೆ' ಎಂದು ಸಿಪಿಎಂ ನಾಯಕ ಸುಜನ್ ಚಕ್ರವರ್ತಿ ಟೀಕಿಸಿದ್ದಾರೆ.

ಸೀತಾಲಕುಚಿ ಗೋಲಿಬಾರ್‌ಗೆ ಸಂಬಂಧಿಸಿದ ಒಂದು ವಿಡಿಯೋ ಸಹ ಲಭ್ಯವಿಲ್ಲ. ಹೀಗಿದ್ದ ಮೇಲೆ ಸಿಐಎಸ್‌ಎಫ್ ಹೇಳಿದ ಕಥೆಯನ್ನು ಚುನಾವಣಾ ಆಯೋಗವು ನಂಬಿದ್ದು ಹೇಗೆ ಎಂದು ಎಡಪಕ್ಷಗಳು-ಕಾಂಗ್ರೆಸ್-ಐಎಸ್‌ಎಫ್ ಮೈತ್ರಿಕೂಟವು ಪ್ರಶ್ನಿಸಿದೆ. ಸೀತಾಲಕುಚಿಯಂತಹ ಘಟನೆಗಳು ಮರುಕಳಿಸುತ್ತವೆ ಎಂದಿರುವ ಬಿಜೆಪಿಯ ದಿಲೀಪ್ ಘೋಷ್ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.


ಉತ್ತರ 24 ಪರಗಣ ಜಿಲ್ಲೆಯಲ್ಲಿ ಸೋಮವಾರ ನಡೆದ ಪ್ರಧಾನಿ ನರೇಂದ್ರ ಮೋದಿ ಅವರ ಪ್ರಚಾರ ಸಭೆಯಲ್ಲಿ, ಮೋದಿ ಅವರ ಬೆಂಬಲಿಗನ ಅಭಿಮಾನದ ಪರಿ

ಪಿಟಿಐ ಚಿತ್ರ

ದೀದಿ ಕ್ಲೀನ್ ಬೋಲ್ಡ್: ಮೋದಿ

ವರ್ಧಮಾನ್/ಕಲ್ಯಾಣಿ (ಪಿಟಿಐ): ಮಮತಾ ಬ್ಯಾನರ್ಜಿ (ದೀದಿ) ಅವರು ನಂದಿಗ್ರಾಮದಲ್ಲೇ ಕ್ಲೀನ್‌ಬೋಲ್ಡ್ ಆಗಿದ್ದಾರೆ. ಅವರ ತಂಡದ ಆಟಗಾರರೆಲ್ಲರೂ ಔಟ್ ಆಗಿದ್ದಾರೆ. ಈಗ ಮಮತಾ ಅವರ ತಂಡದವರು ಮೈದಾನ ಬಿಟ್ಟು ಹೊರ ನಡೆಯಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಲೇವಡಿ ಮಾಡಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಬಿಜೆಪಿ ಈಗಾಗಲೇ ಸೆಂಚುರಿ ಬಾರಿಸಿದೆ ಎಂದು ಹೇಳಿದ್ದಾರೆ. 'ನಂದಿಗ್ರಾಮದಲ್ಲಿ ಜನರು ಬಿಜೆಪಿ ಪರವಾಗಿ ಬೌಂಡರಿ, ಸಿಕ್ಸರ್ ಬಾರಿಸಿದ್ದಾರೆ. ಹೀಗಾಗಿ ಬಿಜೆಪಿ ಈಗಾಗಲೇ ಶತಕ ಬಾರಿಸಿದೆ. ನಾಲ್ಕು ಹಂತದಲ್ಲೇ ಟಿಎಂಸಿ ಸೋತು ಸುಣ್ಣವಾಗಿದೆ. ಅರ್ಧ ಪಂದ್ಯದಲ್ಲೇ ಟಿಎಂಸಿಯನ್ನು ಕ್ಲೀನ್ ಸ್ವೀಪ್ ಮಾಡಿದ್ದೇವೆ' ಎಂದು ಮೋದಿ ಅವರು ಹೇಳಿದ್ದಾರೆ.

'ಪರಿಶಿಷ್ಟ ಜಾತಿಯ ಜನರು, ಬಡವರ ಹಕ್ಕುಗಳನ್ನು ಕಿತ್ತುಕೊಳ್ಳಲು ಮಮತಾ ಬ್ಯಾನರ್ಜಿ ಅವರ ಟಿಎಂಸಿ ಸಂಚು ನಡೆಸಿದೆ. ಕೂಚ್‌ಬಿಹಾರ್‌ನ ಹಿಂಸಾಚಾರವು ಈ ಸಂಚಿನ ಭಾಗವೇ ಆಗಿದೆ. ಸೋಲು ಮತ್ತು ಗೆಲುವು ಪ್ರಜಾಪ್ರಭುತ್ವದ ಭಾಗಗಳು. ಆದರೆ, ಇಲ್ಲಿ ಜನರ ಹಕ್ಕುಗಳನ್ನು ಕಿತ್ತುಕೊಳ್ಳಲು ಅವಕಾಶವಿಲ್ಲ.

'ಪ್ರಜಾಪ್ರಭುತ್ವದಲ್ಲಿ ಆಟವನ್ನು ಆರಂಭಿಸುವವರು ಜನರು. ಆಟವನ್ನು ಕೊನೆಮಾಡುವವರೂ ಜನರೇ. ಬಂಗಾಳದ ಜನರು ಈಗ ತಮ್ಮ ಆಟ ಆರಂಭಿಸಿದ್ದಾರೆ. ದೀದಿ ಎಲ್ಲವನ್ನೂ ತಮ್ಮ ಅಳಿಯನಿಗೆ ಕೊಡಲು ನಿರ್ಧರಿಸಿದ್ದರು. ಆದರೆ ನಿಮ್ಮ ಆಟವನ್ನು ನಿಲ್ಲಿಸಬೇಕು ಎಂದು ಜನರು ನಿರ್ಧರಿಸಿದ್ದಾರೆ' ಎಂದು ಮೋದಿ ಹೇಳಿದ್ದಾರೆ.

'ಬೆದರಿಕೆ ಹಾಕುವವರನ್ನು ನಿಷೇಧಿಸಿ'

ಸೀತಾಲಕುಚಿ ಹತ್ಯಾಕಾಂಡದಂತಹ ಘಟನೆಗಳು ಮರುಕಳಿಸುತ್ತವೆ ಎಂದು ಬೆದರಿಕೆ ಹಾಕುತ್ತಿರುವವರನ್ನು ರಾಜಕಾರಣದಿಂದ ನಿಷೇಧಿಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

ರಾಣಾಘಾಟ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಅವರು, 'ಸೀತಾಲಕುಚಿಯಂತಹ ಹತ್ಯಾಕಾಂಡಗಳು ಮರುಕಳಿಸುತ್ತವೆ ಎನ್ನುವ ಈ ರಾಜಕಾರಣಿಗಳು ಮನುಷ್ಯರೇ' ಎಂದು ಪ್ರಶ್ನಿಸಿದ್ದಾರೆ.

'ಕೆಲವು ರಾಜಕಾರಣಿಗಳು ಇಂತಹ ಹತ್ಯಾಕಾಂಡದ ಬೆದರಿಕೆ ಹಾಕುತ್ತಿದ್ದಾರೆ. ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚುತ್ತದೆ ಎಂದು ಬಹಿರಂಗವಾಗಿ ಘೋಷಿಸುತ್ತಿದ್ದಾರೆ. ಈ ಹೇಳಿಕೆಗಳನ್ನು ಕೇಳಿ ನನಗೆ ಆಘಾತವಾಗಿದೆ. ಈ ನಾಯಕರು ಏನು ಮಾಡಲು ಹೊರಟಿದ್ದಾರೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಟಿಎಂಸಿಗೆ ಕೆಟ್ಟ ಹೆಸರು ತರುವ ಉದ್ದೇಶದಿಂದ, ಬಿಜೆಪಿಯವರು ತಮ್ಮ ಪಕ್ಷದವರನ್ನೇ ಕೊಲ್ಲುತ್ತಿದ್ದಾರೆ. ತಮ್ಮ ವಾಹನಗಳಿಗೇ ಬೆಂಕಿ ಹಚ್ಚುತ್ತಿದ್ದಾರೆ. ಸೀತಾಲಕುಚಿಯಲ್ಲಿ ಹತ್ಯಾಕಾಂಡ ನಡೆಯುವ ಮುನ್ನ, ರಾಜಾಬೋಂಗ್ಷಿ ಎಂಬ ಬಿಜೆಪಿ ಕಾರ್ಯಕರ್ತನನ್ನು ಕೊಲ್ಲಲಾಗಿದೆ. ಆನಂತರ ಗೋಲಿಬಾರ್ ನಡೆದಿದೆ' ಎಂದು ಅವರು ಆರೋಪಿಸಿದ್ದಾರೆ.

'ನಾನು ಮತ್ತೆ ಅಧಿಕಾರಕ್ಕೆ ಬಂದ ನಂತರ ಈ ಹತ್ಯಾಕಾಂಡ ಮತ್ತು ಹತ್ಯೆಗಳ ಬಗ್ಗೆ ತನಿಖೆ ನಡೆಸುತ್ತೇನೆ' ಎಂದು ಅವರು ಘೋಷಿಸಿದ್ದಾರೆ.

ನುಡಿ–ಕಿಡಿ

ಅಸ್ಸಾಂನಲ್ಲಿ ಎನ್‌ಆರ್‌ಸಿಯಿಂದ 14 ಲಕ್ಷ ಬಂಗಾಳಿಗಳನ್ನು ಬಿಜೆಪಿ ಹೊರಗೆ ಇಟ್ಟಿದೆ. ಆ ಜನರೆಲ್ಲರನ್ನೂ ಬಂಧನ ಕೇಂದ್ರಗಳಿಗೆ ಬಿಜೆಪಿ ಅಟ್ಟಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೂ ಇದೇ ಆಗುತ್ತದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಬಗ್ಗೆ ಟಿಎಂಸಿ ಜನರಲ್ಲಿ ತಪ್ಪು ಮಾಹಿತಿ ನೀಡಿ, ಭಯಹುಟ್ಟಿಸುತ್ತಿದೆ. ಎನ್‌ಆರ್‌ಸಿಯನ್ನು ಇನ್ನೂ ಜಾರಿಗೆ ತಂದಿಲ್ಲ. ಜಾರಿಗೆ ತಂದರೂ ಅದರಿಂದ ಗೂರ್ಖಾ ಜನರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಗೂರ್ಖಾ ಸಮುದಾಯದ ಒಬ್ಬನೂ ಎನ್‌ಆರ್‌ಸಿಯಿಂದ ಹೊರಗುಳಿಯುವುದಿಲ್ಲ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಪ್ರಜಾವಾಣಿ ಫೋನ್– ಇನ್ ಕಾರ್ಯಕ್ರಮ • ಸಮಸ್ಯೆ ಹೇಳಿಕೊಂಡ ಸಾರ್ವಜನಿಕರು

ಪೊಲೀಸರ ಅನುಚಿತ ವರ್ತನೆಗೆ ಬೇಸರ, ಕರ್ತವ್ಯ ನಿಷ್ಠೆಗೆ ಮೆಚ್ಚುಗೆ

ಪ್ರಜಾವಾಣಿ ಫೋನ್–ಇನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ, ಬಿಸಿಲು, ದೂಳು, ಹೊಗೆ ಲೆಕ್ಕಿಸದೇ ಕಾರ್ಯ ನಿರ್ವಹಿಸುತ್ತಿರುವ ಸಂಚಾರ ಪೊಲೀಸರ ಕರ್ತವ್ಯ ನಿಷ್ಠೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಸಾರ್ವಜನಿಕರು, ಕೆಲ ಪೊಲೀಸರ ಅನುಚಿತ ವರ್ತನೆ ಕುರಿತು ತೀವ್ರ ಬೇಸರವನ್ನೂ ತೋಡಿಕೊಂಡರು.

'ಪ್ರಜಾವಾಣಿ' ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಫೋನ್–ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರ ಬಳಿ ಹೇಳಿಕೊಂಡರು. ವ್ಯವಸ್ಥೆ ಸುಧಾರಣೆಗೆ ಸಲಹೆಗಳನ್ನೂ ನೀಡಿದರು.

ಪೊಲೀಸ್ ಸಿಬ್ಬಂದಿಯ ಕಷ್ಟವನ್ನು ಜನರು ಹಾಗೂ ಜನರ ಸಂಕಟಗಳನ್ನು ಪೊಲೀಸ್ ಇಲಾಖೆಯವರು ಪರಸ್ಪರ ಅರ್ಥೈಸಿಕೊಳ್ಳುವುದಕ್ಕೆ ಈ ಕಾರ್ಯಕ್ರಮ ಸೇತುವೆಯಾಯಿತು. ನಗರದ ವಿವಿಧ ಭಾಗಗಳಿಂದ ಸಾರ್ವಜನಿಕರು ಕರೆ ಮಾಡಿದ್ದರು. ಎಲ್ಲ ಪ್ರಶ್ನೆಗಳಿಗೂ ರವಿಕಾಂತೇಗೌಡ ಅವರು ಸಮಚಿತ್ತದಿಂದ ಉತ್ತರಿಸಿದರು. ಸುಗಮ ಸಂಚಾರ ಹಾಗೂ ಅಪಘಾತರಹಿತ ನಗರ ನಿರ್ಮಾಣಕ್ಕಾಗಿ ಕೈ ಜೋಡಿಸುವಂತೆ ಸಾರ್ವಜನಿಕರಲ್ಲೂ ಮನವಿ ಮಾಡಿದರು.

ಅಮಾನವೀಯ ಮುಖ: 'ರಸ್ತೆಯಲ್ಲಿ ಪೊಲೀಸರ ವರ್ತನೆ ನೋಡಿದರೆ, ಇವರಿಗೆ ಮಾನವೀಯತೆಯೇ ಇಲ್ಲವೇ ಎಂಬ ಭಾವನೆ ಜನರಲ್ಲಿ ಬರುತ್ತಿದೆ. ಏಕೆ ಪೊಲೀಸರು ಈ ರೀತಿ ವರ್ತಿಸುತ್ತಾರೆ' ಎಂಬ ಪ್ರಶ್ನೆಗೆ ಉತ್ತರಿಸಿದ ರವಿಕಾಂತೇಗೌಡ, 'ಒಬ್ಬ ಪೊಲೀಸ್, ಬಿಸಿಲು, ಮಳೆ ಹಾಗೂ ಚಳಿಯಲ್ಲೂ ದಿನದಲ್ಲಿ ಸತತ 8 ಗಂಟೆ ರಸ್ತೆಯಲ್ಲಿ ಕೆಲಸ ಮಾಡುತ್ತಾರೆ. ದೂಳು, ಹೊಗೆ, ವಾಹನಗಳ ಶಬ್ದದಿಂದ ಕಿರಿಕಿರಿಗೆ ಒಳಗಾಗಿ ಒತ್ತಡಕ್ಕೆ ಸಿಲುಕುತ್ತಾರೆ. ಅದಕ್ಕೆ ಅವರು ಏರುಧ್ವನಿಯಲ್ಲಿ ಮಾತನಾಡಬಹುದು. ಇಂಥ ಸಂದರ್ಭದಲ್ಲಿ ಜನರೂ ಏರುಧ್ವನಿಯಲ್ಲಿ ಮಾತನಾಡಿದರೆ ಸಂಘರ್ಷ ಉಂಟಾಗುತ್ತದೆ. ಹೀಗಾಗಿ, ಸಂಯಮದಿಂದ ವರ್ತಿಸುವಂತೆ ನಾನು ಜನರಲ್ಲಿ ಕೋರುತ್ತೇನೆ' ಎಂದರು.

'ಪೊಲೀಸರಿಗೆ ವ್ಯಕ್ತಿತ್ವ ವಿಕಸನ ಹಾಗೂ ಒತ್ತಡ ನಿರ್ವಹಣೆ ಬಗ್ಗೆ ತರಬೇತಿ ನೀಡಲಾಗುತ್ತಿದೆ. ವಾಗ್ವಾದ ಅನುಚಿತ ವರ್ತನೆ ಹೀಗೆ.. ನಾನಾ ದೂರುಗಳು ಬರುತ್ತಿವೆ. ಪೊಲೀಸರಿಗೆ ದೇಹದಲ್ಲಿ ಧರಿಸುವ (ಬಾಡಿವೋರ್ನ್) ಕ್ಯಾಮೆರಾ ನೀಡಲಾಗುತ್ತಿದೆ. ಘಟನೆ ದೃಶ್ಯ ಈ ಕ್ಯಾಮೆರಾದಲ್ಲಿ ಸೆರೆಯಾಗುತ್ತದೆ.

ರಾಜಕಾರಣಿಗಳ ಮಕ್ಕಳಿಗೆ ಏಕೆ ವಿನಾಯಿತಿ?

ಮುನಿಯಪ್ಪ, 'ಸಾಮಾನ್ಯ ಜನರನ್ನು ಪೊಲೀಸರು ಅಡ್ಡಗಟ್ಟಿ, ನಿಮಿಷಗಟ್ಟಲೇ ನಿಲ್ಲಿಸಿಕೊಂಡು ದಂಡ ವಿಧಿಸುತ್ತಾರೆ. ಆದರೆ, ರಾಜಕಾರಣಿಗಳ ಮಕ್ಕಳು ಬಂದರೆ ಬಿಟ್ಟು ಕಳುಹಿಸುತ್ತಾರೆ. ಅಂಥವರಿಗೆ ಕಾನ್‌ಸ್ಟೆಬಲ್ ಸಹ ಹೆದರುತ್ತಾರೆ. ಏಕೆ ಈ ತಾರತಮ್ಯ' ಎಂದು ಪ್ರಶ್ನಿಸಿದರು.

ರವಿಕಾಂತೇಗೌಡ, 'ಕಾನೂನು ಎಲ್ಲರಿಗೂ ಒಂದೇ. ಸಂಚಾರ ನಿಯಮ ಉಲ್ಲಂಘಿಸುವ-ವರಿಗೆ ದಂಡ ವಿಧಿಸುವುದರಲ್ಲಿ ಯಾವುದೇ ರಾಜಿ ಇಲ್ಲ. ತಾರತಮ್ಯ ಮಾಡುವುದಿಲ್ಲ. ನಿರ್ದಿಷ್ಟ ಮಾಹಿತಿ ಇದ್ದರೆ ದೂರು ನೀಡಿ. ಕ್ರಮ ಕೈಗೊಳ್ಳುವೆ' ಎಂದರು.

ಅದನ್ನು ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದೂ ತಿಳಿಸಿದರು.

ಭ್ರಷ್ಟಾಚಾರಕ್ಕೆ ದಾರಿಯಾದ ದಂಡ ಹೆಚ್ಚಳ: ಹೆಣ್ಣೂರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಮುನಿರಾಜು, 'ದಂಡ ಹೆಚ್ಚಳ ಮಾಡಿರುವುದು ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ' ಎಂದರು.

ರವಿಕಾಂತೇಗೌಡ, 'ವ್ಯವಸ್ಥೆಯಲ್ಲಿ ಲೋಪಗಳು ಇವೆ. ಇಲ್ಲವೆಂದು ಹೇಳುವುದಿಲ್ಲ. ಸಂಸತ್‌ನಲ್ಲಿ ಸುದೀರ್ಘ ಚರ್ಚೆ ಮಾಡಿಯೇ 2019ರ ಸೆಪ್ಟೆಂಬರ್‌ನಲ್ಲಿ ದಂಡ ಹೆಚ್ಚಳ ಮಾಡಲಾಗಿದೆ' ಎಂದರು.

'ಕಣ್ಣಿಗೆ ಕಾಣುವಂತೆ ನಿಯಮ ಉಲ್ಲಂಘನೆಯಾದರೆ ಸಿಬ್ಬಂದಿ ಸ್ಥಳದಲ್ಲೇ ದಂಡ ವಿಧಿಸುತ್ತಾರೆ. ಉಳಿದಂತೆ, ನಿಯಮ ಉಲ್ಲಂಘನೆಯನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿದು ನೋಂದಣಿ ಸಂಖ್ಯೆ ಆಧರಿಸಿ ಸವಾರರ ಮನೆಗೆ ದಂಡದ ನೋಟಿಸ್ ಕಳುಹಿಸಲಾಗುತ್ತದೆ. ಇದು ಸಂಪರ್ಕರಹಿತ ದಂಡ ಸಂಗ್ರಹ ಪ್ರಕ್ರಿಯೆ' ಎಂದರು.

'ಭ್ರಷ್ಟಾಚಾರ ಮಾಡಿದವರನ್ನು ಅಮಾನತು ಮಾಡಲಾಗುವುದು. ಮೂರ್ನಾಲ್ಕು ಪ್ರಕರಣಗಳನ್ನು ಮುಂದಿಟ್ಟುಕೊಂಡು ಇಡೀ ವ್ಯವಸ್ಥೆ ಬಗ್ಗೆ ದೋಷಣೆ ಮಾಡುವುದನ್ನು ಜನ ರೂಢಿಸಿಕೊಂಡಿದ್ದಾರೆ' ಎಂದರು.

'ದಂಡದ ಬದಲು ಸ್ಥಳದಲ್ಲೇ ದಾಖಲೆ ಮಾಡಿಕೊಡಿಸಿ'

ನಾಗೇಶ್, 'ದಾಖಲೆ ಇಲ್ಲವೆಂಬ ಕಾರಣಕ್ಕೆ ದಂಡ ವಿಧಿಸುವ ಬದಲು, ಸ್ಥಳದಲ್ಲೇ ದಾಖಲೆ ಮಾಡಿಸಿಕೊಡುವ ಪ್ರಯತ್ನ ಮಾಡಬಹುದಲ್ಲ-ವೇ' ಎಂದು ಪ್ರಶ್ನಿಸಿದರು.

ರವಿಕಾಂತೇಗೌಡ, 'ಮೋಟಾರು ವಾಹನಗಳ ಕಾಯ್ದೆ ಪ್ರಕಾರ ಸ್ಥಳದಲ್ಲಿ ದಂಡ ವಿಧಿಸುವ ಹಾಗೂ ನಿಯಮ ಉಲ್ಲಂಘಿಸಿ-ದವರನ್ನು ಪತ್ತೆ ಮಾಡಿ ನ್ಯಾಯಾಲಯಕ್ಕೆ ಕಳುಹಿಸಲು ಅವಕಾಶವಿದೆ. ದಾಖಲೆಗಾಗಿ ಮಾತ್ರ ಪೊಲೀಸರು ತಡೆಯುವುದಿಲ್ಲ. ಕಣ್ಣಿಗೆ ಕಾಣುವ ರೀತಿಯಲ್ಲಿ ನಿಯಮ ಉಲ್ಲಂಘನೆ-ಯಾದರೆ ಮಾತ್ರ ವಾಹನಗಳನ್ನು ತಡೆದು ದಂಡ ವಿಧಿಸಲಾಗುತ್ತದೆ' ಎಂದರು.

ರಾಜಧಾನಿಯಲ್ಲಿ 7,272 ಗುಂಡಿ; ಬಿಬಿಎಂಪಿಗೆ ಪಟ್ಟಿ ಸಲ್ಲಿಕೆ

'ನಗರದ ರಸ್ತೆಗಳಲ್ಲಿ ಗುಂಡಿಗಳೇ ಹೆಚ್ಚಿದ್ದು, ಅದರಿಂದ ಅಪಘಾತಗಳು ಸಂಭವಿಸುತ್ತಿವೆ. ದಂಡ ಸಂಗ್ರಹಿಸುವ ಪೊಲೀಸರು, ಗುಂಡಿ ಬಗ್ಗೆ ಏಕೆ ಗಮನಹರಿಸುವುದಿಲ್ಲ' ಎಂದು ಸಾರ್ವಜನಿಕರು ಪ್ರಶ್ನಿಸಿದರು.

ರವಿಕಾಂತೇಗೌಡ, 'ಗುಂಡಿ ಬಗ್ಗೆ ಬಿಬಿಎಂಪಿ ಜೊತೆ ಸೇರಿ ಅಭಿಯಾನ ಮಾಡುತ್ತಿದ್ದೇವೆ. ನಮ್ಮ ಸಿಬ್ಬಂದಿ ಪ್ರತಿ ರಸ್ತೆಯಲ್ಲೂ ಸಮೀಕ್ಷೆ ನಡೆಸಿ ಗುಂಡಿಗಳ ಮಾಹಿತಿಯನ್ನು ಫೋಟೊ ಸಮೇತ ಕಲೆಹಾಕಿದ್ದಾರೆ. ನಗರದಲ್ಲಿ ಅಪಘಾತಕ್ಕೆ ಕಾರಣವಾಗುವ 7,272 ಗುಂಡಿಗಳಿದ್ದು, ಇವುಗಳ ಪಟ್ಟಿಯನ್ನು ಬಿಬಿಎಂಪಿ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಅದರಲ್ಲಿ 4,034 ಗುಂಡಿಗಳನ್ನು ಪರಿಶೀ-ಲಿಸಿದ್ದಾರೆ' ಎಂದರು.

'ಗುಂಡಿಗಳಿಂದ ಅಪಘಾತವಾದರೆ, ಸಂಬಂಧಪಟ್ಟ ಆಡಳಿತ ಸಂಸ್ಥೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳ-ಲಾಗುತ್ತಿದೆ. ವಿಮಾನ ನಿಲ್ದಾಣ ರಸ್ತೆಯಲ್ಲಿ ಇತ್ತೀಚೆಗೆ ಸಂಭವಿಸಿದ್ದ ಅಪಘಾತವೊಂದರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧವೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದೂ ಹೇಳಿದರು.

ಮನೆ ಬಾಗಿಲಿಗೆ ನೋಟಿಸ್; ನಿಯಮ ಉಲ್ಲಂಘಿಸಿಲ್ಲವೆಂದ ಜನ

ಪುಟ್ಟರಾಜು, 'ದ್ವಿಚಕ್ರ ವಾಹನವಿದ್ದು, ಯಾವುದೇ ನಿಯಮ ಉಲ್ಲಂಘಿಸಿಲ್ಲ. ಅಷ್ಟಾದರೂ ₹ 2,000 ದಂಡ ಪಾವತಿಸುವಂತೆ ಮನೆಗೆ ನೋಟಿಸ್ ಬಂದಿದೆ' ಎಂದರು.

ಶಿವಾಜಿನಗರದ ಭಾಸ್ಕರ್, 'ನಾನು ಶಿವಮೊಗ್ಗಕ್ಕೆ ಹೋಗಿದ್ದೆ. ಅದೇ ದಿನದಂದೇ ನಗರದಲ್ಲಿ ನಿಯಮ ಉಲ್ಲಂಘಿಸಿರುವುದಾಗಿ ನೋಟಿಸ್ ಬಂದಿದೆ. ಯಾವುದೇ ಪುರಾವೆ ಇಲ್ಲ. ಪೊಲೀಸನ್ನು ಕೇಳಿದರೆ, ಕೈಯಿಂದ ಬರೆದುಕೊಂಡು ದಂಡ ಹಾಕಿರುವುದಾಗಿ ಹೇಳುತ್ತಿದ್ದಾರೆ' ಎಂದರು.

ಬಸವನಗುಡಿ ನಿವಾಸಿ ಮನೋಹರ್, '2019ರಲ್ಲಿ ಹೆಲ್ಮೆಟ್ ಧರಿಸದೇ ಚಾಮರಾಜಪೇಟೆಯಲ್ಲಿ ವಾಹನ ಓಡಿಸಿದ್ದೀರಿ ಎಂದು ನೋಟಿಸ್ ಬಂದಿದೆ. ಆದರೆ, ನೋಟಿಸ್‌ನಲ್ಲಿರುವ ಸಮಯದಲ್ಲಿ ನಾನು ಚಾಮರಾಜಪೇಟೆಗೆ ಹೋಗಿಲ್ಲ' ಎಂದರು.

ಬಿ.ಆರ್. ರವಿಕಾಂತೇಗೌಡ: 'ಸಂಚಾರ ನಿಯಮ ಉಲ್ಲಂಘನೆ ಕಣ್ಣಿಗೆ ಕಂಡರೆ ಸಿಬ್ಬಂದಿ ಸ್ಥಳದಲ್ಲೇ ದಂಡ ವಿಧಿಸುತ್ತಾರೆ. ಕ್ಯಾಮೆರಾ ಮೂಲಕವೂ ಪುರಾವೆ ಸಮೇತ ಉಲ್ಲಂಘನೆ ದಾಖಲಿಸಿಕೊಂಡು ವಾಹನಗಳ ಮಾಲೀಕರ ಮನೆಗೆ ನೋಟಿಸ್ ಕಳುಹಿಸಲಾಗು-ತ್ತಿದೆ. ನಿಮ್ಮ ನೋಟಿಸ್ ಬಗ್ಗೆ ಯಾವುದಾದರೂ ಗೊಂದಲಗಳು ಇದ್ದರೆ ಹಾಗೂ ಪುರಾವೆಗಳು ಬೇಕಾದರೆ 'www.bangaloretrafficpolice.gov.in' ಜಾಲತಾಣದಲ್ಲಿ 'ಡಿಜಿಟ್ಯಾಬ್ ಉಲ್ಲಂಘನೆ ವಿವರಗಳು' ಆಯ್ಕೆ ನೋಡಬಹುದು' ಎಂದರು.



ಬೆಂಗಳೂರಿನ 'ಪ್ರಜಾವಾಣಿ' ಕಚೇರಿಯಲ್ಲಿ ಸೋಮವಾರ ಆಯೋಜಿಸಿದ್ದ 'ಫೋನ್–ಇನ್' ಕಾರ್ಯಕ್ರಮದಲ್ಲಿ ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಬಿ.ಆರ್ ರವಿಕಾಂತೇಗೌಡ ಮಾತನಾಡಿದರು ಪ್ರಜಾವಾಣಿ ಚಿತ್ರ/ ರಂಜು ಪಿ

'ಟ್ರಾಫಿಕ್ ವಾರ್ಡನ್' ಆಗಲು ಮುಕ್ತ ಆಹ್ವಾನ

'ಸುಗಮ ಸಂಚಾರಕ್ಕೆ ಸಾರ್ವಜನಿಕರ ಸಹಕಾರವೂ ಬೇಕು. ಹೀಗಾಗಿ, ಟ್ರಾಫಿಕ್ ವಾರ್ಡನ್ ಆಗಿ ಕೆಲಸ ಮಾಡುವವರಿಗೆ ಮುಕ್ತ ಆಹ್ವಾನವಿದೆ. ಜಾಲತಾಣದಲ್ಲಿ ಅರ್ಜಿ ಪಡೆದು ಸಲ್ಲಿಸಬಹುದು. ಅರ್ಹರನ್ನು ಆಯ್ಕೆ ಮಾಡಿ ಒಂದು ವಾರ ತರಬೇತಿ ನೀಡಿ ಸೇವೆಗೆ ಬಳಸಿಕೊಳ್ಳಲಾಗುವುದು' ಎಂದು ರವಿಕಾಂತೇಗೌಡ ಹೇಳಿದರು.

'ಟೋಯಿಂಗ್; ವಾಹನಕ್ಕೆ ಧಕ್ಕೆಯಾದರೆ ಏಜೆನ್ಸಿ ಹೊಣೆ'

ಬೈಕ್ ಸವಾರರೊಬ್ಬರು, 'ಟೋಯಿಂಗ್ ಮಾಡುವವರು ವಾಹನಕ್ಕೆ ಹಾನಿ ಮಾಡುತ್ತಾರೆ. ದಂಡ ಪಾವತಿ ಜೊತೆಗೆ ವಾಹನ ದುರಸ್ತಿಗೂ ಹಣ ವೆಚ್ಚವಾಯಿತು' ಎಂದರು.

ರವಿಕಾಂತೇಗೌಡ, 'ಟೋಯಿಂಗ್ ಜವಾಬ್ದಾರಿಯನ್ನು ಖಾಸಗಿ ಏಜೆನ್ಸಿಗಳಿಗೆ ನೀಡಲಾಗಿದೆ. ವಾಹನಕ್ಕೆ ಹಾನಿ ಮಾಡದೇ ಟೋಯಿಂಗ್ ಮಾಡಬೇಕೆಂಬ ನಿಯಮವಿದೆ. ಆಕಸ್ಮಾತ್ ವಾಹನಕ್ಕೆ ಧಕ್ಕೆಯಾದರೆ ಏಜೆನ್ಸಿಯೇ ಹೊಣೆ' ಎಂದರು.

'ವಾಹನಕ್ಕೆ ಹಾನಿಯಾದರೆ ಮಾಲೀಕರು, ಸಂಬಂಧಪಟ್ಟ ಠಾಣೆ ಇನ್‌ಸ್ಪೆಕ್ಟರ್ ಅವರಿಗೆ ದೂರು ನೀಡಬೇಕು. ತಪ್ಪು ಕಂಡುಬಂದರೆ, ದುರಸ್ತಿ ಖರ್ಚನ್ನು ಏಜೆನ್ಸಿಯಿಂದಲೇ ಭರಿಸಲು ಅವಕಾಶವಿದೆ' ಎಂದೂ ತಿಳಿಸಿದರು.

'ಸಂಚಾರ ಸಂಕೇತ– ವೈಜ್ಞಾನಿಕ ಅಳವಡಿಕೆಗೆ ಪ್ರಸ್ತಾವ'

'ಪ್ರಮುಖ ರಸ್ತೆ ಹಾಗೂ ಉಪ ರಸ್ತೆಗಳಲ್ಲಿ ಸಂಚಾರ ಸಂಕೇತಗಳನ್ನು ವೈಜ್ಞಾನಿಕವಾಗಿ ಗುರುತು ಮಾಡುವ ಸಂಬಂಧ ಅಧ್ಯಯನ ನಡೆಸಿ, ಅದರ ವರದಿಯನ್ನು ಬಿಬಿಎಂಪಿ ಹಾಗೂ ಬಿಡಿಎಗೆ ನೀಡಲಾಗುವುದು' ಎಂದು ರವಿಕಾಂತೇಗೌಡ ಹೇಳಿದರು.

'ಹೆಣ್ಣೂರು ಮುಖ್ಯ ರಸ್ತೆಯಲ್ಲಿರುವ ಡಿ ಮಾರ್ಟ್ ಎದುರು ರಸ್ತೆ ವಿಭಜಕ ಸಮಸ್ಯೆಯಿಂದ ಜನರಿಗೆ ತೊಂದರೆಯಾಗುತ್ತಿದೆ' ಎಂದು ಹೊರಮಾವು ನಿವಾಸಿ ಸಿಂಧು ಗಮನಕ್ಕೆ ತಂದರು. 'ಸಂಬಂಧಪಟ್ಟ ಇನ್‌ಸ್ಪೆಕ್ಟರ್ ಜೊತೆ ಮಾತನಾಡಿ ಸಮಸ್ಯೆ ಬಗೆಹರಿಸುವೆ' ಎಂದು ರವಿಕಾಂತೇಗೌಡ ಭರವಸೆ ನೀಡಿದರು.

'ಕಾನ್‌ಸ್ಟೆಬಲ್‌ಗೂ ವಾಹನ ತಡೆಯುವ ಅಧಿಕಾರ'

ಮೋಹಿತ್, 'ವಾಹನಗಳನ್ನು ಕಾನ್‌ಸ್ಟೆಬಲ್ ಅಡ್ಡಗಟ್ಟಿ ತಡೆಯುವ ಅಧಿಕಾರವಿಲ್ಲವೆಂದು ಮೈಸೂರು ಕಮಿಷನರ್ ಹೇಳಿದ್ದಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು' ಎಂದು ಕೇಳಿದರು.

ರವಿಕಾಂತೇಗೌಡ, 'ಎಎಸ್‌ಐ ಹಾಗೂ ಮೇಲ್ಪಟ್ಟ ಅಧಿಕಾರಿಗಳಿಗೆ ದಂಡ ವಿಧಿಸುವ ಅಧಿಕಾರವಿದೆ. ಅದೇ ರೀತಿ, ನಿಯಮ ಉಲ್ಲಂಘಿಸುವವರನ್ನು ಹಿಡಿದುಕೊಂಡು ಅಧಿಕಾರಿಗಳ ಮುಂದೆ ಹಾಜರುಪಡಿಸಿ ದಂಡ ಹಾಕಿಸುವ ಅಧಿಕಾರ ಕಾನ್‌ಸ್ಟೆಬಲ್‌ಗೂ ಇದೆ' ಎಂದೂ ತಿಳಿಸಿದರು.

'54 ಬ್ಲಾಕ್ ಸ್ಪಾಟ್‌ಗಳು'

'ನಗರದಲ್ಲಿ ಹೆಚ್ಚು ಅಪಘಾತ ಸಂಭವಿಸುವ 54 ಬ್ಲಾಕ್‌ಸ್ಪಾಟ್ ಗುರುತಿಸಲಾಗಿದೆ. 3 ವರ್ಷದಲ್ಲಿ 5ಕ್ಕಿಂತ ಹೆಚ್ಚು ಸಾವುಗಳು ಈ ಸ್ಥಳದಲ್ಲಿ ಸಂಭವಿಸಿವೆ' ಎಂದು ರವಿಕಾಂತೇಗೌಡ ಹೇಳಿದರು.

'ರಾಜಕುಮಾರ್ ಸಮಾಧಿ ಬಳಿ ಇಳಿಜಾರು ರಸ್ತೆಯಿದ್ದು, ಅಲ್ಲಿ ವಾಹನಗಳು ವೇಗವಾಗಿ ಹೋಗುತ್ತವೆ. ಉದ್ದೇಶಪೂರ್ವಕವಾಗಿಯೇ ಇಂಟರ್‌ಸೆಪ್ಟರ್ ವಾಹನವನ್ನು ಅಲ್ಲಿ ನಿಲ್ಲಿಸಿ ದಂಡ ವಿಧಿಸಲಾಗುತ್ತಿದೆ' ಎಂಬ ನಿವಾಸಿಯೊಬ್ಬರ ದೂರಿಗೆ ಪ್ರತಿಕ್ರಿಯಿಸಿದ ಅವರು, 'ಉದ್ದೇಶಪೂರ್ವಕವಾಗಿ ಯಾವುದೇ ಕೆಲಸ ಮಾಡುವುದಿಲ್ಲ. ಸುಪ್ರೀಂಕೋರ್ಟ್ ರಸ್ತೆ ಸುರಕ್ಷತಾ ಸಮಿತಿ ಇದ್ದು, ಕಾಲಕಾಲಕ್ಕೆ ಸೂಚನೆಗಳನ್ನು ನೀಡುತ್ತದೆ. ಅದರ ಪ್ರಕಾರವೇ ಕ್ರಮ ಕೈಗೊಳ್ಳುತ್ತಿದ್ದೇವೆ' ಎಂದರು.

'ದೋಷಪೂರಿತ ಸೈಲೆನ್ಸರ್; ಗ್ಯಾರೇಜ್ ಮಾಲೀಕರ ವಿರುದ್ಧವೂ ಪ್ರಕರಣ'

ನಿವಾಸಿಯೊಬ್ಬರು, 'ದೋಷಪೂರಿತ ಸೈಲೆನ್ಸರ್‌ನಿಂದಾಗಿ ನಿತ್ಯವೂ ಕಿರಿಕಿರಿ ಆಗುತ್ತಿದೆ' ಎಂದರು.

ರವಿಕಾಂತೇಗೌಡ, 'ಅದರ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ದೋಷಪೂರಿತ ಸೈಲೆನ್ಸರ್ ಹಾಕಿಕೊಂಡ ಸವಾರ ಹಾಗೂ ಸಿದ್ಧಪಡಿಸಿದ ಗ್ಯಾರೇಜ್ ಮಾಲೀಕರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮುಚ್ಚಳಿಕೆ ಬರೆಸಿಕೊಂಡು ಎಚ್ಚರಿಕೆ ನೀಡಲಾಗಿದೆ' ಎಂದರು.

'ಫಲಕವಿಲ್ಲದ ಜಾಗವೆಲ್ಲ ನೋ ಪಾರ್ಕಿಂಗ್'

'ಪ್ರಮುಖ ರಸ್ತೆ ಹಾಗೂ ಉಪ ರಸ್ತೆಗಳಲ್ಲಿ ಪಾರ್ಕಿಂಗ್ ಅವಕಾಶ ಕಲ್ಪಿಸಿ ಫಲಕ ಅಳವಡಿಸಿರುವ ಕಡೆಗಳಲ್ಲಿ ಮಾತ್ರ ವಾಹನ ನಿಲುಗಡೆ ಮಾಡಬೇಕು. ಅವುಗಳನ್ನು ಹೊರತುಪಡಿಸಿ, ಫಲಕವಿಲ್ಲದ ಜಾಗವೆಲ್ಲವೂ ನೋ ಪಾರ್ಕಿಂಗ್ ಜಾಗ' ಎಂದು ರವಿಕಾಂತೇಗೌಡ ನೆನಪಿಸಿದರು.

'ವಾಹನಗಳ ಓಡಾಟಕ್ಕೆ ರಸ್ತೆ ಇದೆ. ವಾಹನಗಳ ನಿಲುಗಡೆಗಲ್ಲ. ಅದೇ ರೀತಿ, 100 ಅಡಿಗೊಂದು ಫಲಕ ಹಾಕಿ ನೋ ಪಾರ್ಕಿಂಗ್ ಜಾಗವೆಂದು ತೋರಿಸಲು ಆಗುವುದಿಲ್ಲ. ಎಲ್ಲ ಕಡೆ ನೋ ಪಾರ್ಕಿಂಗ್ ಫಲಕದ ಅವಶ್ಯಕತೆಯೂ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಮುಂದುವರಿದ ಮುಷ್ಕರ: ಪ್ರಯಾಣಿಕರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಹಿಂದಿನ ದಿನ ಊರುಗಳಿಗೆ ಹೋಗಲು ಹೊರಟಿದ್ದ ಪ್ರಯಾಣಿಕರು ಸಾರಿಗೆ ಮುಷ್ಕರದಿಂದ ಸೋಮವಾರವೂ ಪರದಾಡಿದರು. ದುಪ್ಪಟ್ಟು ದರ ಇದ್ದರೂ ನಿವಾರ್ಯವಾಗಿ ಖಾಸಗಿ ಬಸ್‌ಗಳನ್ನೇ ಏರಿ ಸಾಗಿದರು.

ಸಾರಿಗೆ ನಿಗಮಗಳ ಬಸ್ ಇಲ್ಲದ ಕಾರಣ ದೂರದ ಊರುಗಳಿಗೆ ಹಲವರು ತಮ್ಮ ಸ್ವಂತ ವಾಹನಗಳಲ್ಲಿ ಹೋದರೆ, ಇನ್ನು ಅನೇಕರು ಬಸ್‌ಗಳಿಗಾಗಿ ಕಾದರು. ಸಾರಿಗೆ ಸಂಸ್ಥೆಯ ಬಸ್‌ಗಳು ಕಡಿಮೆ ಇದ್ದ ಕಾರಣ ದುಬಾರಿಯಾದರೂ ಖಾಸಗಿ ಬಸ್‌ಗಳಲ್ಲೇ ಪ್ರಯಾಣ ಮಾಡಿದರು. ಭಾನುವಾರಕ್ಕೆ ಹೋಲಿಸಿದರೆ ರಸ್ತೆಗಿಳಿದ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಖ್ಯೆಯಲ್ಲಿ ಏರಿಕೆಯಾಗಿತ್ತು.

ಬಿಎಂಟಿಸಿ ಬಸ್‌ಗಳ ಸಂಚಾರದಲ್ಲೂ ಸೋಮವಾರ ಸ್ವಲ್ಪ ಏರಿಕೆಯಾಗಿತ್ತು. ಮೆಜೆಸ್ಟಿಕ್ ಮತ್ತು ಕೆ.ಆರ್. ಮಾರುಕಟ್ಟೆಯಿಂದ ನಗರದ ವಿವಿಧೆಡೆಗೆ ಸೋಮವಾರ ಸಂಜೆ ತನಕ 452 ಬಸ್‌ಗಳು ಕಾರ್ಯಾಚರಣೆ ಮಾಡಿದವು.

ಕೆ.ಆರ್. ಮಾರುಕಟ್ಟೆಯಿಂದ ವಿಜಯನಗರ, ಮೈಸೂರು ರಸ್ತೆ, ನಾಯಂಡಹಳ್ಳಿ, ಕೆಂಗೇರಿ, ಮಲತ್ತಹಳ್ಳಿ, ಚಂದ್ರಾಲೇಔಟ್, ಜಂಬೂಸವಾರಿ ದಿಣ್ಣೆ, ಕೊಟ್ಟಿಗೆಪಾಳ್ಯ, ಪೀಣ್ಯ, ಕೆ.ಆರ್. ಪುರ, ಶಿವಾಜಿನಗರ ಸೇರಿ ಹಲವು ಮಾರ್ಗಗಳಲ್ಲಿ ಬಿಎಂಟಿಸಿ ಬಸ್ ಸಂಚರಿಸಿದವು.

ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಿಂದ ಚಂದ್ರಾ ಲೇಔಟ್, ವಿಜಯನಗರ, ಅಂಬೇಡ್ಕರ್ ಕಾಲೇಜು, ಯಲಹಂಕ, ಕೆ.ಆರ್.ಪುರ ಮಾರ್ಗದ ಬಸ್‌ಗಳು ಕಾರ್ಯಾಚರಣೆಯಲ್ಲಿ ಇದ್ದವು.

ಖಾಸಗಿ ಬಸ್‌ಗಳ ಜತೆಗೆ ಬಿಎಂಟಿಸಿ ಬಸ್‌ಗಳೂ ರಸ್ತೆಗೆ ಇಳಿದಿದ್ದರಿಂದ ಹಬ್ಬದ ಸಾಮಗ್ರಿ ಖರೀದಿಯಲ್ಲಿದ್ದ ಜನ ಸ್ವಲ್ಪ ನಿರಾಳರಾಗಿದ್ದರು. ಕೆಲ ಮಾರ್ಗಗಳಲ್ಲಿ ಗಂಟೆಗಟ್ಟಲೆ ಜನ ಕಾದು ನಿಂತಿದ್ದರು.

ಹಬ್ಬದ ಕಾರಣ ಮೆಟ್ರೊ ರೈಲಿನಲ್ಲೂ ಪ್ರಯಾಣಿಕರ ಸಂಖ್ಯೆ ಸ್ವಲ್ಪ ಹೆಚ್ಚಳವಾಗಿತ್ತು. ಮಾಸ್ಕ್ ಧರಿಸದವರಿಗೆ ದಂಡ ಪ್ರಯೋಗವನ್ನು ಮೆಟ್ರೊ ಅಧಿಕಾರಿಗಳು ಮಾಡಿದರು. ಮಾಸ್ಕ್ ಇದ್ದರೂ ಅದನ್ನು ಸರಿಯಾಗಿ ಧರಿಸದವರಿಗೆ ₹250 ದಂಡ ವಿಧಿಸಲಾಗುತ್ತಿದೆ ಎಂದು ಹೇಳಿದರು.

ಹಿರಿಯ ನೌಕರರಿಗೆ ನೋಟಿಸ್: ಕರ್ತವ್ಯಕ್ಕೆ ಹಾಜರಾಗುವಂತೆ 2,237 ಹಿರಿಯ ನೌಕರರಿಗೆ ಬಿಎಂಟಿಸಿ ನೋಟಿಸ್ ನೀಡಿದೆ.

50ರಿಂದ 55 ವರ್ಷದೊಳಗಿನ ಸಿಬ್ಬಂದಿಗೆ ಪ್ರತ್ಯೇಕವಾಗಿ ನೋಟಿಸ್ ಕಳುಹಿಸಿರುವ ಬಿಎಂಟಿಸಿ ಅಧಿಕಾರಿಗಳು, 'ಏ.15ರೊಳಗೆ ಕರ್ತವ್ಯಕ್ಕೆ ಹಾಜರಾಗಬೇಕು. ಇಲ್ಲದಿದ್ದರೆ ತೊಂದರೆಗೆ ಸಿಲುಕುತ್ತೀರಿ' ಎಂದು ಎಚ್ಚರಿಕೆ ನೀಡಿದ್ದಾರೆ. 'ಹಿರಿಯ ನೌಕರರಾದ ನಿಮಗೆ ಸಂಸ್ಥೆಯ ಆಗುಹೋಗುಗಳ ಬಗ್ಗೆ ಅರಿವಿದೆ. ಹೀಗಾಗಿ, ಹಠ ಮಾಡದೆ ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ತಿಳಿಸಿದ್ದಾರೆ.



ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಸೋಮವಾರ ನಿಂತಿದ್ದ ಖಾಸಗಿ ಬಸ್‌ಗಳು

14,286 ನಾಲ್ಕು ನಿಗಮಗಳ ವ್ಯಾಪ್ತಿಯಲ್ಲಿ ಖಾಸಗಿ ಬಸ್‌ಗಳ ಕಾರ್ಯಾಚರಣೆ

3,399 ಸೋಮವಾರ ಕಾರ್ಯಾಚರಣೆ ಮಾಡಿದ ಬಸ್‌ಗಳು

9 ಹಾನಿಗೀಡಾದ ಸರ್ಕಾರಿ ಬಸ್‌ಗಳು

965 ಸೋಮವಾರ ಕಾರ್ಯಾಚರಣೆ ಮಾಡಿದ ಬಸ್‌ಗಳು

- 124 ನೌಕರರನ್ನು ಸೋಮವಾರ ವಜಾ ಮಾಡಲಾಗಿದೆ
- ಕಳೆದ ಆರು ದಿನಗಳಲ್ಲಿ 580 ನೌಕರರು ವಜಾಗೊಂಡಿದ್ದಾರೆ
- 260 ನೌಕರರ ಅಮಾನತು
- 55 ವರ್ಷ ಮೇಲ್ಪಟ್ಟ 7 ನೌಕರರ ನಿವೃತ್ತಿ
- ಚಾಲಕನ ಮೇಲೆ ಹಲ್ಲೆ ಮಾಡಿದ ಮೂವರ ಬಂಧನ
- 10,430 ಸಿಬ್ಬಂದಿಗೆ ಮಾರ್ಚ್ 30ಗಳ ವೇತನ ಬಿಡುಗಡೆ

ತಟ್ಟೆ, ಲೋಟ ಚಳವಳಿ: ವಶಕ್ಕೆ ಪಡೆದ ಪೊಲೀಸರು

ನಗರ ಜಿಲ್ಲಾಧಿಕಾರಿ ಕಚೇರಿ ಎದುರು ತಟ್ಟೆ, ಲೋಟ ಚಳವಳಿ ನಡೆಸಲು ಮುಂದಾಗಿದ್ದ 50ಕ್ಕೂ ಹೆಚ್ಚು ಮಂದಿ ಸಾರಿಗೆ ನೌಕರರ ಕುಟುಂಬ ಸದಸ್ಯರನ್ನು ಪೊಲೀಸರು ವಶಕ್ಕೆ ಪಡೆದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ತಟ್ಟೆ, ಲೋಟಗಳೊಂದಿಗೆ ಬಂದಿದ್ದ ನೌಕರರ ಕುಟುಂಬ ಸದಸ್ಯರು, ಅವುಗಳನ್ನು ಬಡಿದು ಜೋರಾಗಿ ಶಬ್ಧ ಮಾಡಿದರು. ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು, ವಶಕ್ಕೆ ಪಡೆದರು.

ಮಕ್ಕಳೊಂದಿಗೆ ಬಂದಿದ್ದ ಮಹಿಳೆಯರು ಚಳವಳಿಗೆ ಅವಕಾಶ ನೀಡದ ಪೊಲೀಸರ ವಿರುದ್ಧ ಕಿಡಿ ಕಾರಿದರು. ತಾಯಂದಿರನ್ನು ಪೊಲೀಸರು ವಶಕ್ಕೆ ಪಡೆದಾಗ ಮಕ್ಕಳು ಕಣ್ಣೀರಿಟ್ಟವು. ಪೊಲೀಸರು ಮಕ್ಕಳನ್ನು ಅವರ ಅಮ್ಮಂದಿರ ಬಳಿಗೆ ಕರೆದೊಯ್ದು ಬಿಟ್ಟರು.

ಯಾವುದೇ ಪ್ರತಿಭಟನೆ ನಡೆಸಲು ಅನುಮತಿ ಇಲ್ಲದ ಕಾರಣ ಅವರನ್ನು ವಶಕ್ಕೆ ಪಡೆಯಲಾಯಿತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ನೌಕರರ ಮನವೊಲಿಸಿ ನಿಯೋಜನೆ

ವೈದ್ಯಕೀಯ ಹಾಗೂ ದೈಹಿಕ ಕ್ಷಮತೆಯ ಪ್ರಮಾಣಪತ್ರ ಸಲ್ಲಿಸಲು ಬಂದ ಸಾರಿಗೆ ಸಿಬ್ಬಂದಿಯ ಮನವೊಲಿಸಿ ಅಧಿಕಾರಿಗಳು ಕರ್ತವ್ಯಕ್ಕೆ ನಿಯೋಜಿಸಿದರು.

55 ವರ್ಷ ಮೇಲ್ಪಟ್ಟ ನೌಕರರು ಸೋಮವಾರ ಸಂಜೆಯ ವೇಳೆಗೆ (ಏ.12) ವೈದ್ಯಕೀಯ ಮತ್ತು ದೈಹಿಕ ಕ್ಷಮತೆಯ ಪ್ರಮಾಣಪತ್ರ ನೀಡಬೇಕು ಎಂದು ಬಿಎಂಟಿಸಿ ಸೂಚನೆ ಹೊರಡಿಸಿತ್ತು. ಸಲ್ಲಿಸಲು ಕಚೇರಿಗೆ ಬಂದವರಲ್ಲಿ ಹಲವರ ಮನವೊಲಿಸುವಲ್ಲಿ ಅಧಿಕಾರಿಗಳು ಯಶಸ್ವಿಯಾದರು.

'ಬಲವಂತ ಮಾಡಿಲ್ಲ. ಅವರಿಗೆ ವಸ್ತುಸ್ಥಿತಿಯ ಮನವರಿಕೆ ಮಾಡಲಾಗುತ್ತಿದೆ. ಬಳಿಕ ಅವರೇ ಸ್ವಂತ ಇಚ್ಛೆಯಿಂದ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ' ಎಂದು ಅಧಿಕಾರಿಗಳು ಹೇಳಿದರು.

'ಕೆಲ ಸಿಬ್ಬಂದಿ ಸೋಮವಾರ ಕರ್ತವ್ಯಕ್ಕೆ ಹಾಜರಾಗಿದ್ದ ಕಾರಣ ನಗರದಲ್ಲಿ 500 ಬಸ್‌ಗಳ ಕಾರ್ಯಾಚರಣೆ ಸಾಧ್ಯವಾಯಿತು' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ 'ಪ್ರಜಾವಾಣಿ'ಗೆ ತಿಳಿಸಿದರು.

'ಭೂಸುಧಾರಣೆ ಕಾಯ್ದೆ ತಿದ್ದುಪಡಿ: ಕೋರ್ಟ್ ತೀರ್ಪಿಗೆ ಒಳಪಡುತ್ತದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಭೂಸುಧಾರಣೆ ಕಾಯ್ದೆ ತಿದ್ದುಪಡಿ ಆಧರಿಸಿ ವಿಲೇವಾರಿ ಆಗಿರುವ ಪ್ರಕರಣಗಳು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ ಎಂಬುದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿ ವ್ಯಾಪಕ ಪ್ರಚಾರ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯ ಸಿಂಧುತ್ವ ಪ್ರಶ್ನಿಸಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ, ನಾಗರಾಜ್ ಹೊಂಗಲ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸೋಮವಾರ ವಿಚಾರಣೆ ನಡೆಸಿತು. 'ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿರುವ ತಿದ್ದುಪಡಿ ಕಾಯ್ದೆಯಡಿ ಯಾವುದೇ ಕ್ರಮಗಳನ್ನು ಕೈಗೊಂಡಿದ್ದರೂ ಅವು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತವೆ ಎಂದು ಸುತ್ತೋಲೆ ಹೊರಡಿಸಲಾಗಿದೆ' ಎಂದು ಸರ್ಕಾರದ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

'ಸುತ್ತೋಲೆಯನ್ನಷ್ಟೇ ಹೊರಡಿಸಿದರೆ ಸಾಲದು. ಮಹತ್ವದ ಪ್ರಕರಣ ಆಗಿರುವ ಕಾರಣ ರಾಜ್ಯಪತ್ರ-ದಲ್ಲಿ ಪ್ರಕಟಿಸಬೇಕು' ಎಂದು ಸೂಚಿಸಿದ ಪೀಠ, ವಿಚಾರಣೆಯನ್ನು ಮೇ 26ಕ್ಕೆ ಮುಂದೂಡಿತು.

ರೇವ್ ಪಾರ್ಟಿ: ಬಂಧಿತರಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಆಲೂರು (ಹಾಸನ ಜಿಲ್ಲೆ): ಇಲ್ಲಿನ ನಂದಿಪುರ ಎಸ್ಟೇಟ್‌ನಲ್ಲಿ ನಡೆಯುತ್ತಿದ್ದ ರೇವ್ ಪಾರ್ಟಿ ಮೇಲೆ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ದಾಳಿ ನಡೆಸಿ, ಬಂಧಿಸಲಾಗಿದ್ದ 130 ಯುವಕ-ಯುವತಿಯರಿಗೂ ಠಾಣಾ ಹಂತದಲ್ಲೇ ಜಾಮೀನು ನೀಡಲಾಗಿದೆ.

ಎಸ್ಟೇಟ್ ಮಾಲೀಕ ಗಗನ್, ಕಾರ್ಯಕ್ರಮ ಆಯೋಜಕರು ಎನ್ನಲಾದ ಬೆಂಗಳೂರಿನ ಮುರುಗೇಶ್‌ಪಾಳ್ಯ ನಿವಾಸಿ ಸೋನಿ ಮತ್ತು ಬನ್ನೇರುಘಟ್ಟ ನಿವಾಸಿ ಪಂಕಜ್ ಅವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ, ಹೆಚ್ಚಿನ ತನಿಖೆಗಾಗಿ ಪೊಲೀಸ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಇನ್‌ಸ್ಪೆಕ್ಟರ್ ವೆಂಕಟೇಶ್ ತಿಳಿಸಿದ್ದಾರೆ.

ದಮನಕಾರಿ ನೀತಿ: ಫೆಡರೇಷನ್ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ 6 ದಿನಗಳಿಂದ ನಡೆಯುತ್ತಿದ್ದರೂ ಸರ್ಕಾರ ಮಾತುಕತೆಗೆ ಆಹ್ವಾನಿಸದೆ ಹಠಮಾರಿ ಧೋರಣೆ ಅನುಸರಿಸುತ್ತಿದೆ ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್(ಸಿಐಟಿಯು) ಅಸಮಾಧಾನ ವ್ಯಕ್ತಪಡಿಸಿದೆ.

ಕಾರ್ಮಿಕ ಕಾಯ್ದೆಯ ಸೆಕ್ಷನ್ 10(ಬಿ) ಅಡಿಯಲ್ಲಿ ಹೋರಾಟ ನಡೆಸುತ್ತಿರುವ ಕಾರ್ಮಿಕರ ಸೇವಾ ನಿಯಮಗಳಿಗೆ ರಕ್ಷಣೆ ನೀಡಬೇಕಿದ್ದ ಸರ್ಕಾರ, ತನ್ನ ಕರ್ತವ್ಯ ಕಡೆಗಣಿಸಿದೆ. ಕಾರ್ಮಿಕರ ಮೇಲೆ ದಮನಕಾರಿ ನೀತಿಗಳನ್ನು ಹರಿಬಿಟ್ಟಿದೆ. ಇದರಿಂದ ಸಾಮಾನ್ಯ ಜನರಿಗೆ ತೊಂದರೆ ಆಗಲಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೂ ಇದು ಪರಿಣಾಮ ಬೀರಲಿದೆ ಎಂದು ಫೆಡರೇಷನ್ ಅಧ್ಯಕ್ಷ ಎಚ್.ಡಿ.ರೇವಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್ ಅವರು ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ವಸತಿ ಗೃಹಗಳಿಂದ ತೆರವು, ವರ್ಗಾವಣೆ, ಅಮಾನತು, ವಜಾ ಮಾಡುವ ಮೂಲಕ ಕಾರ್ಮಕರನ್ನು ಬಲಿಪಶು ಮಾಡಲಾಗುತ್ತಿದೆ. ಸರ್ಕಾರ ಈ ದಮನಕಾರಿ ನೀತಿಗಳನ್ನು ಕೈಬಿಟ್ಟು ಮಾತುಕತೆಗೆ ಕಾರ್ಮಿಕ ಸಂಘಟನೆ-ಗಳನ್ನು ಆಹ್ವಾನಿಸಬೇಕು. ಮಾರ್ಚ್ ತಿಂಗಳ ವೇತನವನ್ನು ಎಲ್ಲ ನೌಕರರಿಗೂ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದರು.

ನೀರಿನ ಅದಾಲತ್ ಇದೇ 15ರಂದು

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಗುರುವಾರ (ಏ.15) ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಿಹರಿ-ಸಲಾಗುವುದು. ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:080–22238888, ಸಹಾಯವಾಣಿ 1916, ವಾಟ್ಸ್ಆ್ಯಪ್ ಸಂಖ್ಯೆ:8762228888.



ಧಾರವಾಡದ ಶಾರದಾ ಚಾರಿಟಬಲ್ ಟ್ರಸ್ಟ್ ₹ 23.50 ಲಕ್ಷವನ್ನು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ನೀಡಿದೆ. ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಪ್ರೊ. ದ್ವಾರಕನಾಥ್ ಅವರು ಚೆಕ್ ಅನ್ನು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರಿಗೆ ಹಸ್ತಾಂತರಿಸಿದರು. ಟ್ರಸ್ಟ್‌ನ ಉಪಾಧ್ಯಕ್ಷೆ ಲಕ್ಷ್ಮಿ ನರಸು, ಜಂಟಿ ಕಾರ್ಯದರ್ಶಿ ಹರಿಪ್ರಸಾದ್, ಖಜಾಂಚಿ ದೇಶಪಾಂಡೆ, ವ್ಯವಸ್ಥಾಪಕ ಸಮಿತಿ ಸದಸ್ಯೆ ಪ್ರಸನ್ನ ಕುಮಾರಿ, ಶೋಭಾ ನಾಯಕ್, ಸಂಸ್ಥೆಯ ಡಾ.ಎಸ್. ಶಂಕರ್ ಮತ್ತು ಚಿಕ್ಕತಿಮ್ಮಯ್ಯ ಇದ್ದರು.

ಮದನಿ ಅರ್ಜಿ ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ 2008ರಲ್ಲಿ ನಡೆದಿದ್ದ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ, ಕೇರಳದ ಪೀಪಲ್ ಡೆಮಾಕ್ರಟಿಕ್ ಪಕ್ಷದ ಮುಖಂಡ ಅಬ್ದುಲ್ ನಾಸಿರ್ ಮದನಿ ಸಲ್ಲಿಸಿರುವ ಅರ್ಜಿ ವಿಚಾರಣೆಯಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಹಿಂದೆ ಸರಿದಿದ್ದಾರೆ.

ವಿಚಾರಣೆ ಮುಗಿಯುವವರೆಗೆ ಕೇರಳಕ್ಕೆ ತೆರಳಿ ಅಲ್ಲಿಯೇ ಇರಲು ಅವಕಾಶ ನೀಡಬೇಕು ಎಂದು ಕೋರಿ ಮದನಿ ಅರ್ಜಿ ಸಲ್ಲಿಸಿದ್ದು, ಈ ಪ್ರಕರಣದ ವಿಚಾರಣೆಯಿಂದ ನ್ಯಾಯಮೂರ್ತಿ ರಾಮಸುಬ್ರಮಣಿಯನ್ ಸೋಮವಾರ ಹಿಂದೆ ಸರಿದಿದ್ದಾರೆ.

ನ್ಯಾಯಮೂರ್ತಿ ರಾಮಸುಬ್ರಮಣಿಯನ್ ಅವರಿರದ ಪೀಠದ ಎದುರು ಮುಂದಿನ ವಾರ ಈ ಅರ್ಜಿಯನ್ನು ವಿಚಾರಣೆಗೆ ನಿಗದಿ ಪಡಿಸಬೇಕು ಎಂದು ಪೀಠ ಆದೇಶಿಸಿದೆ.

ಯೆಸ್ ಬ್ಯಾಂಕ್‌ಗೆ ಸೆಬಿ ದಂಡ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಯೆಸ್ ಬ್ಯಾಂಕ್‌ಗೆ ಸೋಮವಾರ ₹ 25 ಕೋಟಿ ದಂಡ ವಿಧಿಸಿದೆ. ಯೆಸ್ ಬ್ಯಾಂಕ್ ಕೆಲವು ವರ್ಷಗಳ ಹಿಂದೆ ಎಟಿ–1 ಬಾಂಡ್‌ಗಳನ್ನು ತಪ್ಪಾಗಿ ಮಾರಾಟ ಮಾಡಿದ್ದಕ್ಕೆ ಸಂಬಂಧಿಸಿದಂತೆ ಈ ದಂಡ ವಿಧಿಸಲಾಗಿದೆ.

ಎಟಿ–1 ಬಾಂಡ್‌ಗಳು ನಿಶ್ಚಿತ ಠೇವಣಿಗಿಂತ (ಎಫ್.ಡಿ.) ಹೆಚ್ಚಿನ ಬಡ್ಡಿ ತಂದುಕೊಡುತ್ತವೆ ಎಂದು ಹೇಳಿ ಮಾರಾಟ ಮಾಡಲಾಗಿತ್ತು. ಆದರೆ, ಮಾರಾಟ ಮಾಡುವ ಸಂದರ್ಭದಲ್ಲಿ ಈ ಬಾಂಡ್‌ಗಳ ವಿಚಾರವಾಗಿ ಇರುವ ಎಲ್ಲ ರಿಸ್ಕ್‌ಗಳ ಬಗ್ಗೆ ವೈಯಕ್ತಿಕವಾಗಿ ಹೂಡಿಕೆ ಮಾಡುವವರಿಗೆ ಮಾಹಿತಿ ನೀಡಿರಲಿಲ್ಲ ಎಂದು ಸೆಬಿ ಹೇಳಿದೆ.

'ಹೂಡಿಕೆದಾರರಿಗೆ, ಗ್ರಾಹಕರಿಗೆ ಎಟಿ–1 ಬಾಂಡ್ ಬಗ್ಗೆ ಅಗತ್ಯ ವಿವರ ನೀಡಿಲ್ಲ ಇದರಿಂದ ಗ್ರಾಹಕರ ಮೇಲೆ ಪ್ರಭಾವ ಆಯಿತ್ತು. ಅವರು ಈ ಬಾಂಡ್ ಖರೀದಿ ಮಾಡುವ ಆಮಿಷಕ್ಕೆ ಒಳಗಾದರು. ಕೆಲವು ಗ್ರಾಹಕರು ತಮ್ಮ ಎಫ್.ಡಿ. ಹಣ ಹಿಂದಕ್ಕೆ ಪಡೆದು ಈ ಬಾಂಡ್ ಖರೀದಿಸಿದ್ದರು' ಎಂದು ಕೂಡ ಸೆಬಿ ಹೇಳಿದೆ.

ಪ್ರಯಾಣಿಕ ವಾಹನ ಮಾರಾಟ 2020–21ರಲ್ಲಿ ಶೇ 2.24ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಪ್ರಯಾಣಿಕ ವಾಹನ ಮಾರಾಟವು 2020–21ರಲ್ಲಿ ಶೇಕಡ 2.24ರಷ್ಟು ಇಳಿಕೆ ಆಗಿದೆ ಎಂದು ವಾಹನ ತಯಾರಕ ಕಂಪನಿಗಳ ಒಕ್ಕೂಟವು (ಎಸ್ಐಎಎಂ) ಸೋಮವಾರ ತಿಳಿಸಿದೆ.

ಕಳೆದ ಕೆಲವು ವರ್ಷಗಳಿಂದ ಮಂದ ಗತಿಯ ಮಾರಾಟ ಪ್ರಗತಿ ಸಾಧಿಸುತ್ತಿರುವ ವಾಹನೋದ್ಯಮವು 2020–21ರಲ್ಲಿ ಕೋವಿಡ್–19 ಸಾಂಕ್ರಾಮಿಕದಿಂದ ಕುಸಿತ ಕಾಣುವಂತಾಯಿತು ಎಂದು ಅದು ಹೇಳಿದೆ.

ಒಕ್ಕೂಟದ ಇತ್ತೀಚಿನ ಮಾಹಿತಿಯ ಪ್ರಕಾರ, 2020–21ನೇ ಹಣಕಾಸು ವರ್ಷದಲ್ಲಿ ಎಲ್ಲಾ ಮಾದರಿಯ ವಾಹನಗಳ ಮಾರಾಟದಲ್ಲಿ ಒಟ್ಟು ಶೇ 13.6ರಷ್ಟು ಇಳಿಕೆ ಆಗಿದೆ. 2019–20ರಲ್ಲಿ 2.15 ಕೋಟಿ ವಾಹನಗಳು ಮಾರಾಟವಾಗಿದ್ದವು.

ಲಾಕ್‌ಡೌನ್, ಸೆಮಿಕಂಡಕ್ಟರ್ ಕೊರತೆ ಮತ್ತು ಕಚ್ಚಾ ಸರಕುಗಳ ಬೆಲೆ ಏರಿಕೆಯು ವಾಹನೋದ್ಯಮದ ಚಟುವಟಿಕೆಗಳ ಮೇಲೆ ಅನಿಶ್ಚಿತತೆಯನ್ನು ನಿರ್ಮಾಣ ಮಾಡಿದೆ. ಇಂತಹ ಪರಿಸ್ಥಿತಿಯಲ್ಲಿ ಭವಿಷ್ಯದ ಬಗ್ಗೆ ಅಂದಾಜು ಮಾಡುವುದಕ್ಕಿಂತಲೂ, ಹೊಸ ಭವಿಷ್ಯವನ್ನು ಸೃಷ್ಟಿಸಲು ಎಲ್ಲರೂ ಹೆಚ್ಚಿನ ಶ್ರಮ ಹಾಕಿ ಕೆಲಸ ಮಾಡಬೇಕಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಕೆನೆಚಿ ಅಯುಕವಾ ಅಭಿಪ್ರಾಯಪಟ್ಟಿದ್ದಾರೆ.

ವಾಹನ ಮಾರಾಟದ ವಿವರ

ವಿಭಾಗ	2019-20	2020-21	ಇಳಿಕೆ (%)
ಪ್ರಯಾಣಿಕ ವಾಹನ	27.73 ಲಕ್ಷ	27.11 ಲಕ್ಷ	2.24
ದ್ವಿಚಕ್ರ	1.74 ಕೋಟಿ	1.51 ಕೋಟಿ	13.19
ತ್ರಿಚಕ್ರ	6.37 ಲಕ್ಷ	2.16 ಲಕ್ಷ	66.06
ವಾಣಿಜ್ಯ ವಾಹನ	7.17 ಲಕ್ಷ	5.68 ಲಕ್ಷ	20.77

ಮುಂಬೈ ಧಾರಣೆ

ಶೇಂಗಾ

12-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1305 (1298)
ಪಾಮ್ ವಾರದ ಡೆಲಿವರಿ	1238 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1630 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,200 (46,300)
ಬೆಳ್ಳಿ ಕೆ.ಜಿ 67,100 (67,200)

ಆವರಣದಲ್ಲಿ ಶನಿವಾರದ ಧಾರಣೆ

ಟಿಸಿಎಸ್ ಲಾಭ ಶೇ 14.9ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಸಾಫ್ಟ್‌ವೇರ್ ಸೇವಾ ಕಂಪನಿ ಆಗಿರುವ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಒಟ್ಟು ₹ 9,246 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ ಶೇಕಡ 14.9ರಷ್ಟು ಹೆಚ್ಚು.

ಹಿಂದಿನ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಕಂಪನಿಯು ₹ 8,049 ಕೋಟಿ ಲಾಭ ಗಳಿಸಿತ್ತು. 2021ರ ಮಾರ್ಚ್ ತ್ರೈಮಾಸಿಕದಲ್ಲಿ ಆದಾಯವು ಶೇ 9.4ರಷ್ಟು ಏರಿಕೆ ಕಂಡು, ₹ 43,705 ಕೋಟಿಗೆ ತಲುಪಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

‘ಹಿಂದಿನ ದಶಕದಲ್ಲಿ ನಾವು ಹೊಸ ಸಾಮರ್ಥ್ಯ ಬೆಳೆಸಿಕೊಳ್ಳಲು, ಸಂಶೋಧನೆ ಮತ್ತು ಹೊಸತನ್ನು ಅಭಿವೃದ್ಧಿಪಡಿಸುವಲ್ಲಿ ಮಾಡಿದ ಹೂಡಿಕೆಗಳು ಮುಂದಿನ ಅವಕಾಶಗಳನ್ನು ಬಾಚಿಕೊಳ್ಳಲು ನಮ್ಮನ್ನು ಸನ್ನದ್ಧವಾಗಿಸಿವೆ’ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ರಾಜೇಶ್ ಗೋಪಿನಾಥನ್ ಹೇಳಿದ್ದಾರೆ.

ಕಂಪನಿಯ ಆಡಳಿತ ಮಂಡಳಿಯು ಪ್ರತಿ ಷೇರಿಗೆ ₹ 15ರಂತೆ ಅಂತಿಮ ಡಿವಿಡೆಂಡ್ ನೀಡುವ ಪ್ರಸ್ತಾವನೆ ಇರಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	375

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-41000
ಹಳತು	42500-50500

ಕುಮಟ

ಚಿಪ್ಪು	26869-29899
ಕೋಕ	18599-28289
ಫ್ಯಾಕ್ಟರಿ	141689-17601
ಹಳೆಚಾಲಿ	40599-42279
ಹೊಸಚಾಲಿ	34599-37099

ಸಿದ್ದಾಪುರ

ಬಿಳಿಗೋಟು	26869-29899
ಚಾಲಿ	18599-28289
ಕೋಕ	141689-17601
ಕೆಂಪುಗೋಟು	23089-35499
ರಾಶಿ	39599-41699
ತಟ್ಟಿಬೆಟ್ಟೆ	30289-38699

ಶಿರಸಿ

ಬೆಟ್ಟೆ	25099-38698
ಬಿಳಿಗೋಟು	18199-31466
ಚಾಲಿ	29729-37199
ರಾಶಿ	27099-41119

ಯಲ್ಲಾಪುರ

ಬಿಳಿಗೋಟು	24899-31299
ಚಾಲಿ	31719-37499
ಕೋಕ	18839-28899
ಕೆಂಪುಗೋಟು	26899-31899
ರಾಶಿ	39899-43969
ತಟ್ಟಿಬೆಟ್ಟೆ	33160-39369

ಶಿವಮೊಗ್ಗ ಎಪಿಎಂಸಿ

ಬೆಟ್ಟೆ	40100-44380
ಗೊರಬಲು	18705-31150
ರಾಶಿ	37269-42660
ಸರಕು	46000-73300

ಚನ್ನಗಿರಿ


ರಾಶಿ	40039-43500
ಬೆಟ್ಟೆ	33489-33889

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10000	9800	9800	127.25 ಸೆಂಟ್ಸ್
ಎಸಿ	3975	3800	3775	
ಆರ್‌ಪಿ	5100	5050	5100	
ಆರ್‌ಸಿ	2900	2900	2875	1343 ಡಾಲರ್ಸ್

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,835
ಇಂದಿನ ಅಂತ್ಯ	14,311
▼	524
ದಿನದ ಕನಿಷ್ಠ	14,248

ವಿನಿಮಯ ದರ

$ ಡಾಲರ್	75.05
£ ಪೌಂಡ್	103.07
€ ಯುರೊ	88.32
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹485
12 ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹492

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1325 (1323)
ಸೂರ್ಯಕಾಂತಿ (ರಿಫೈನ್ಡ್)	₹1680 (1700)
ಪಾಮೋಲಿನ್	₹1240 (1240)

ಫೆಬ್ರುವರಿ 26ರ ನಂತರ ದಿನದ ವಹಿವಾಟಿನಲ್ಲಿ ಗರಿಷ್ಠ ಕುಸಿತ ಕಂಡ ಸೆನ್ಸೆಕ್ಸ್

ಕೋವಿಡ್ ಹೆಚ್ಚಳಕ್ಕೆ ನಲುಗಿದ ಪೇಟೆ

ಮುಂಬೈ (ಪಿಟಿಐ): ಕೋವಿಡ್–19 ಪ್ರಕರಣಗಳ ಸಂಖ್ಯೆಯು ದೇಶದಲ್ಲಿ ಭಾರಿ ಪ್ರಮಾಣದಲ್ಲಿ ಏರಿಕೆ ಕಾಣುತ್ತಿರುವುದು ಹೂಡಿಕೆದಾರರನ್ನು ಆತಂಕಕ್ಕೆ ದೂಡಿತು. ಷೇರುಪೇಟೆಗಳಲ್ಲಿ ಸೋಮವಾರ ಅತಿಯಾದ ಮಾರಾಟದ ಒತ್ತಡ ಕಂಡುಬಂದಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 1,708 ಅಂಶ ಕುಸಿತ ಕಂಡು 47,884 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ಫೆಬ್ರುವರಿ 26ರ ನಂತರ ದಿನದ ವಹಿವಾಟಿನಲ್ಲಿ ಆಗಿರುವ ಗರಿಷ್ಠ ಕುಸಿತ ಇದಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 524 ಅಂಶ ಇಳಿಕೆ ಕಂಡು 14,311 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ಬಿಎಸ್‌ಇನಲ್ಲಿ ಡಾ ರೆಡ್ಡೀಸ್ ಹೊರತುಪಡಿಸಿ ಉಳಿದೆಲ್ಲ ಕಂಪನಿಗಳ ಷೇರು ಮೌಲ್ಯ ಇಳಿಕೆ ಕಂಡಿದೆ.



ಕರಗಿತು ₹ 8.77 ಲಕ್ಷ ಕೋಟಿ: ದಿನದ ವಹಿವಾಟಿನಲ್ಲಿ ಸೂಚ್ಯಂಕವು ಭಾರಿ ಕುಸಿತ ಕಂಡಿದ್ದರಿಂದ ಹೂಡಿಕೆದಾರರ ಸಂಪತ್ತು ಮೌಲ್ಯ ₹ 8.77 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದ ಷೇರುಪೇಟೆಯ ಬಂಡವಾಳ ಮೌಲ್ಯ ₹ 200.85 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ಸ್ಥಳೀಯವಾಗಿ ಅಲ್ಲಲ್ಲಿ ಲಾಕ್‌ಡೌನ್ ಜಾರಿಯಾಗುತ್ತಿರುವುದು ಹಾಗೂ ಕೋವಿಡ್ ಪ್ರಕರಣಗಳು ದಾಖಲೆ ಮಟ್ಟಕ್ಕೆ ಏರಿಕೆ ಆಗಿರುವುದು ಷೇರುಪೇಟೆ ವಹಿವಾಟನ್ನು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿಯುವಂತೆ ಮಾಡಿದೆ ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಹೂಡಿಕೆದಾರರು ಕಾರ್ಪೊರೇಟ್ ಗಳಿಕೆ ಮತ್ತು ಆರ್ಥಿಕ ಬೆಳವಣಿಗೆಯ ಅಂಕಿ–ಅಂಶಗಳ ಬಿಡುಗಡೆಯನ್ನು ಎದುರು ನೋಡುತ್ತಿರುವುದರಿಂದ ಜಾಗತಿಕ ಮಾರುಕಟ್ಟೆಗಳು ದಾಖಲೆಯ ಗರಿಷ್ಠ ಮಟ್ಟದಿಂದ ಕೆಳಗಿಳಿದವು.

ಮುಖ್ಯಾಂಶಗಳು

- ಬಿಎಸ್‌ಇ ಮಿಡ್, ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 5.32ರವರೆಗೂ ಇಳಿಕೆ
- ಇಂಡಸ್‌ಇಂಡ್ ಬ್ಯಾಂಕ್ ಷೇರು ಶೇ 8.60ರಷ್ಟು ಇಳಿಕೆ
- ಬ್ರೆಂಟ್ ತೈಲ ದರ ಶೇ 0.56ರಷ್ಟು ಏರಿಕೆ

75ಕ್ಕಿಂತ ಕಡಿಮೆ ಮಟ್ಟಕ್ಕೆ ರೂಪಾಯಿ ಮೌಲ್ಯ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 32 ಪೈಸೆ ಇಳಿಕೆ ಆಗಿ ಒಂದು ಅಮೆರಿಕನ್ ಡಾಲರ್‌ಗೆ ₹ 75.05ಕ್ಕೆ ತಲುಪಿದೆ. ಇದು ಒಂಭತ್ತು ತಿಂಗಳ ಕನಿಷ್ಠ ಮಟ್ಟವಾಗಿದೆ. ಆರು ದಿನಗಳ ವಹಿವಾಟು ಅವಧಿಗಳಲ್ಲಿ ದೇಶಿ ಕರೆನ್ಸಿಯ ಮೌಲ್ಯವು ಅಮೆರಿಕದ ಡಾಲರ್ ಎದುರು 193 ಪೈಸೆಗಳಷ್ಟು ಇಳಿಕೆ ಕಂಡಿದೆ.

ಕಚ್ಚಾ ತೈಲ ದರ ಏರಿಕೆ, ವಿದೇಶಿ ಬಂಡವಾಳ ಹಿಂತೆಗೆತ ಮತ್ತು ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯ ಕಾರಣಗಳಿಂದಾಗಿ ದೇಶಿ ಕರೆನ್ಸಿ ಮೌಲ್ಯ ಇಳಿಕೆ ಆಗಿದೆ. ಕೈಗಾರಿಕೆ, ತಯಾರಿಕಾ ವಲಯಗಳ ಬೆಳವಣಿಗೆ, ಹಣದುಬ್ಬರ ಮತ್ತು ವ್ಯಾಪಾರ ಕೊರತೆ ಅಂತರದ ಅಂಕಿ–ಅಂಶ ಗಳನ್ನು ಹೂಡಿಕೆದಾರರು ಎದುರು ನೋಡುತ್ತಿದ್ದಾರೆ. ಹೀಗಾಗಿ ಈ ವಾರ ರೂಪಾಯಿ ಮೌಲ್ಯ ಇನ್ನಷ್ಟು ಇಳಿಕೆ ಕಾಣುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಶೇ 5.52ರ ಮಟ್ಟದಲ್ಲಿ ಚಿಲ್ಲರೆ ಹಣದುಬ್ಬರ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ದರವು ಮಾರ್ಚ್ ತಿಂಗಳಲ್ಲಿ ಶೇಕಡ 5.52ಕ್ಕೆ ಏರಿಕೆ ಕಂಡಿದೆ. ಇದಕ್ಕೆ ಮುಖ್ಯ ಕಾರಣ ಆಹಾರ ವಸ್ತುಗಳ ಬೆಲೆಯಲ್ಲಿ ಆಗಿರುವ ಹೆಚ್ಚಳ. ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಫೆಬ್ರುವರಿಯಲ್ಲಿ ಶೇ 5.03 ಆಗಿತ್ತು.

ಮಾರ್ಚ್ ತಿಂಗಳಲ್ಲಿ ಆಹಾರ ವಸ್ತುಗಳ ಹಣದುಬ್ಬರ ಪ್ರಮಾಣವು ಶೇ 4.94ಕ್ಕೆ ತಲುಪಿದೆ. ಇದು ಫೆಬ್ರುವರಿಯಲ್ಲಿ ಶೇ 3.87ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

2020–21ರ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಹಣದುಬ್ಬರ ಪ್ರಮಾಣವು ಶೇ 5ರಷ್ಟು ಇರಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅಂದಾಜಿಸಿತ್ತು. ಹೊಸ ಆರ್ಥಿಕ ವರ್ಷದ ಮೊದಲ ಆರು ತಿಂಗಳಲ್ಲಿ ಹಣದುಬ್ಬರ ಶೇ 5.2ರಷ್ಟು ಇರಲಿದೆ ಎಂದೂ ಅದು ಅಂದಾಜು ಮಾಡಿದೆ.

2020ರ ಜೂನ್‌ನಿಂದ ನವೆಂಬರ್‌ವರೆಗಿನ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಶೇ 6ಕ್ಕಿಂತ ಜಾಸ್ತಿ ಆಗಿತ್ತು. ಡಿಸೆಂಬರ್‌ನಲ್ಲಿ ತುಸು ಕಡಿಮೆ ಆಯಿತು, ಜನವರಿಯಲ್ಲಿ ಶೇ 4.1ಕ್ಕೆ ಇಳಿಕೆ ಆಯಿತು. ಆದರೆ ಫೆಬ್ರುವರಿಯಲ್ಲಿ ಮತ್ತೆ ಶೇ 5ರ ಮಟ್ಟಕ್ಕಿಂತ ಹೆಚ್ಚಾಯಿತು.

ಕೈಗಾರಿಕಾ ಉತ್ಪಾದನೆ ಇಳಿಕೆ



ದೇಶದ ಕೈಗಾರಿಕಾ ಉತ್ಪಾದನೆಯು ಸತತ ಎರಡನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ತಯಾರಿಕೆ ಮತ್ತು ಗಣಿ ವಲಯಗಳು ಕಂಡ ಇಳಿಕೆಯಿಂದಾಗಿ ಕೈಗಾರಿಕಾ ಉತ್ಪಾದನೆಯು ಫೆಬ್ರುವರಿಯಲ್ಲಿ ಶೇಕಡ 3.6ರಷ್ಟು ಇಳಿಕೆ ಆಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಾಹಿತಿ ಬಿಡುಗಡೆ ಮಾಡಿದೆ.

2020ರ ಫೆಬ್ರುವರಿಯಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 5.2ರಷ್ಟು ಬೆಳವಣಿಗೆ ಕಂಡಿತ್ತು.

ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯದ ಬೆಳವಣಿಗೆಯು ಫೆಬ್ರುವರಿಯಲ್ಲಿ ಶೇ 3.7ರಷ್ಟು ಇಳಿಕೆ ಆಗಿದೆ. ಗಣಿ ವಲಯದ ಚಟುವಟಿಕೆಯು ಶೇ 5.5ರಷ್ಟು ಇಳಿಕೆ ಕಂಡಿದೆ.

ಕೈಗಾರಿಕಾ ಉತ್ಪಾದನೆಯು ಕೋವಿಡ್ ಕಾರಣದಿಂದಾಗಿ 2020ರ ಮಾರ್ಚ್‌ನಲ್ಲಿ ಶೇ 18.7ರಷ್ಟು ಕುಸಿತ ಕಂಡಿತ್ತು. 2020ರ ಆಗಸ್ಟ್‌ವರೆಗೂ ನಕಾರಾತ್ಮಕ ಮಟ್ಟದಲ್ಲಿಯೇ ಇತ್ತು.

2019–20ರ ಏಪ್ರಿಲ್–ಫೆಬ್ರುವರಿ ಅವಧಿಗೆ ಹೋಲಿಸಿದರೆ 2020–21ರ ಏಪ್ರಿಲ್–ಫೆಬ್ರುವರಿಯ ಅವಧಿಯಲ್ಲಿ ಐಐಪಿ ಶೇ 11.3ರಷ್ಟು ಇಳಿಕೆ ಕಂಡಿದೆ.

ಆರ್‌ಟಿಜಿಎಸ್ ಸೌಲಭ್ಯ: ಭಾನುವಾರ 14 ತಾಸು ಸ್ಥಗಿತ

ಮುಂಬೈ (ಪಿಟಿಐ): ಶನಿವಾರ ಮಧ್ಯರಾತ್ರಿಯಿಂದ 14 ತಾಸುಗಳವರೆಗೆ ಆರ್‌ಟಿಜಿಎಸ್ ಸೌಲಭ್ಯ ಇರುವುದಿಲ್ಲ ಎಂದು ಆರ್‌ಬಿಐ ಪ್ರಕಟಣೆ ತಿಳಿಸಿದೆ. ತಾಂತ್ರಿಕ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಬೇಕಿರುವ ಕಾರಣ ಈ ರೀತಿ ಆಗಲಿದೆ ಎಂದು ಅದು ಹೇಳಿದೆ.

₹ 2 ಲಕ್ಷದವರೆಗೆ ಹಣ ವರ್ಗಾವಣೆ ಮಾಡಲು ಬಳಸುವ ಎನ್‌ಇಎಫ್‌ಟಿ ಸೌಲಭ್ಯವು ಈ 14 ಗಂಟೆಗಳ ಅವಧಿಯಲ್ಲಿ ಲಭ್ಯವಿರಲಿದೆ ಎಂದು ತಿಳಿಸಿದೆ. ಭಾನುವಾರ ಮಧ್ಯಾಹ್ನ 2 ಗಂಟೆಯ ನಂತರ ಆರ್‌ಟಿಜಿಎಸ್ ಸೇವೆ ಮತ್ತೆ ಲಭ್ಯವಾಗಲಿದೆ.



ಥಾರ್: ಆರು ತಿಂಗಳೊಳಗೆ 50 ಸಾವಿರ ದಾಟಿದ ಬುಕಿಂಗ್

ನವದೆಹಲಿ (ಪಿಟಿಐ): ‘ಥಾರ್’ ಎಸ್‌ಯುವಿ ಬಿಡುಗಡೆ ಆದ ಆರು ತಿಂಗಳೊಳಗೆ 50 ಸಾವಿರಕ್ಕೂ ಅಧಿಕ ಬುಕಿಂಗ್ ಆಗಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿ ಸೋಮವಾರ ತಿಳಿಸಿದೆ.

‘ಹೊಸ ಥಾರ್‌ಗೆ ವ್ಯಕ್ತವಾಗಿರುವ ಅಭೂತಪೂರ್ವ ಸ್ಪಂದನೆಯು ಸಂತೋಷ ತಂದಿದೆ. ಇದು ನಮ್ಮೆಲ್ಲ ನಿರೀಕ್ಷೆಗಳನ್ನು ಮೀರಿಸಿದೆ’ ಎಂದು ಕಂಪನಿಯ ಆಟೊಮೊಟಿವ್ ವಿಭಾಗದ ಸಿಇಒ ವಿಜಯ್ ನಕ್ರಾ ತಿಳಿಸಿದ್ದಾರೆ.

ಈ ಮಾದರಿಗೆ ಕಾಯುವಿಕೆಯ ಅವಧಿಯು ನಿರೀಕ್ಷೆಗಿಂತಲೂ ದೀರ್ಘವಾಗಿದೆ ಎಂದು ಅವರು ಹೇಳಿದ್ದಾರೆ. ಈ ಸವಾಲಿನ ಸಂದರ್ಭದಲ್ಲಿ ತಯಾರಿಕೆಯನ್ನು ಹೆಚ್ಚಿಸಲು ನಾವು ನಮ್ಮ ಪೂರೈಕೆದಾರರೊಂದಿಗೆ ಕೆಲಸ ಮಾಡುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ.



ಶರದ್ ಪವಾರ್‌ಗೆ ಶಸ್ತ್ರಚಿಕಿತ್ಸೆ

ಮುಂಬೈ:‘ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರು ಸೋಮವಾರ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಪಿತ್ತಕೋಶದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ’ ಎಂದು ಮಹಾರಾಷ್ಟ್ರ ಸಚಿವ ನವಾಬ್ ಮಲಿಕ್ ತಿಳಿಸಿದರು.



ಡಾ.ಬಲ್ಸಾರ್ ಅವರು ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ. ಸದ್ಯ ಅವರ ಆರೋಗ್ಯದ ಪರಿಸ್ಥಿತಿ ಸ್ಥಿರವಾಗಿದೆ ಎಂದು ಮಲಿಕ್ ಹೇಳಿದರು.

ಬಿಐಎಸ್‌ಗೆ ದೆಹಲಿ ಹೈಕೋರ್ಟ್ ಸೂಚನೆ

ಹೆಲ್ಮೆಟ್ ತಯಾರಿಕೆ, ಮಾರಾಟದ ಮೇಲ್ವಿಚಾರಣೆ ಅವಶ್ಯಕ’

ನವದೆಹಲಿ: ‘ಗ್ರಾಹಕರ ಹಿತದೃಷ್ಟಿಯಿಂದ ಹೆಲ್ಮೆಟ್‌ಗಳ ತಯಾರಿಕೆ ಮತ್ತು ಮಾರಾಟ ಸಂದರ್ಭದಲ್ಲಿ ಬ್ಯೂರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ನಡೆಸುವ ಅಗತ್ಯವಿದೆ’ ಎಂದು ದೆಹಲಿ ಹೈಕೋರ್ಟ್ ಸೋಮವಾರ ತಿಳಿಸಿದೆ.

‘2019ರಿಂದ ಈವರೆಗೆ ಹೆಲ್ಮೆಟ್‌ಗಳ ತಯಾರಿಕೆ ಮತ್ತು ಅಕ್ರಮ ಮಾರಾಟದ ಕುರಿತಾಗಿ 1,400ಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ಆದರೂ ಬಿಐಎಸ್ ಈ ಬಗ್ಗೆ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಸ್ವಯಂ ಸೇವಾ ಸಂಸ್ಥೆಯಾದ ಉಟ್‌ಪ್ರೆರಿಟ್ ಕನ್ಸ್ಯೂಮರ್ ಫೌಂಡೇಶನ್ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.



‘ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪ್ರತಿಭಾ ಎಂ ಸಿಂಗ್ ಅವರು,‘ಇದು ಗ್ರಾಹಕರ ಸುರಕ್ಷತೆ ಮತ್ತು ಭದ್ರತೆಯ ವಿಷಯವಾಗಿದೆ. ಹಾಗಾಗಿ ಹೆಲ್ಮೆಟ್ ತಯಾರಿಕೆ ಮತ್ತು ಮಾರಾಟದ ಮೇಲೆ ಬಿಐಎಸ್ ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ನಡೆಸುವುದು ಅತಿ ಅವಶ್ಯಕ’ ಎಂದು ಅವರು ಹೇಳಿದ್ದಾರೆ.

‘ಹೆಲ್ಮೆಟ್ ಬಗ್ಗೆ ಎನ್‌ಜಿಒ ನೀಡಿರುವ ದೂರುಗಳನ್ನು ಪರಿಶೀಲಿಸಿ, ಸೂಕ್ತ ಕ್ರಮಕೈಗೊಳ್ಳಿ. ಜತೆಗೆ ಐಎಸ್‌ಐ ಮಾರ್ಕ್ ದುರುಪಯೋಗ ಆಗದಂತೆ ನೋಡಿಕೊಳ್ಳಿ’ ಎಂದು ನ್ಯಾಯಾಲಯವು ಬಿಐಎಸ್‌ಗೆ ನಿರ್ದೇಶನ ನೀಡಿದೆ. ಅಲ್ಲದೆ ಈ ಬಗ್ಗೆ ವರದಿ ಸಲ್ಲಿಸುವಂತೆ ನ್ಯಾಯಾಲಯವು ಸೂಚಿಸಿದೆ.

‘ಕೆಲವು ಕಂಪನಿ ಮತ್ತು ತಯಾರಕರು ಕಾನೂನು ಬಾಹಿರವಾಗಿ ಹೆಲ್ಮೆಟ್ ತಯಾರಿಸುತ್ತಿದ್ದಾರೆ. ಪರವಾನಗಿ ಇಲ್ಲದಿದ್ದರೂ ವಿವಿಧ ಬಗೆಯ ಹೆಲ್ಮೆಟ್‌ಗಳನ್ನು ತಯಾರಿಸಿ, ಜನರಿಗೆ ಮೋಸ ಮಾಡುತ್ತಿದ್ದಾರೆ. ಕೆಲವು ತಯಾರಕರಿಗೆ ಐಎಸ್‌ಐ ಮಾರ್ಕ್ ಬಳಸಲು ಅನುಮತಿ ಇಲ್ಲದಿದ್ದರೂ, ತಮ್ಮ ಹೆಲ್ಮೆಟ್‌ಗಳಲ್ಲಿ ಐಎಸ್‌ಐ ಮಾರ್ಕ್ ಅನ್ನು ಬಳಸುತ್ತಿದ್ದಾರೆ’ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

‘ಮಿಲಿಟರಿ: ಅಮೆರಿಕ–ಭಾರತ ಸಂಬಂಧ ಬಲಿಷ್ಠ’

ವಾಷಿಂಗ್ಟನ್ (ಪಿಟಿಐ): ‘ಮಿಲಿಟರಿ ಮತ್ತು ಭದ್ರತೆ ವಲಯದಲ್ಲಿ ಅಮೆರಿಕ ಮತ್ತು ಭಾರತ ನಡುವಣ ಸಹಭಾಗಿತ್ವ ಮತ್ತಷ್ಟು ಬಲಗೊಳ್ಳಲಿದೆ’ ಎಂದು ಅಮೆರಿಕದ ಮಾಜಿ ರಕ್ಷಣಾ ಕಾರ್ಯದರ್ಶಿ ಆಶ್ ಕಾರ್ಟರ್ ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು, ‘ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿರುವ ಅಮೆರಿಕ ಮತ್ತು ಭಾರತ ನಡುವೆ ಹಲವು ವಿಷಯಗಳಲ್ಲಿ ಸಾಮ್ಯತೆ ಇದೆ. ಜತೆಗೆ, ಉತ್ತಮ ಮೌಲ್ಯಗಳನ್ನು ಪರಸ್ಪರ ಹಂಚಿಕೊಂಡಿವೆ’ ಎಂದು ಹೇಳಿದ್ದಾರೆ.

‘ಆದರೆ, ಭಾರತದ ಹಿಂದಿನ ನೀತಿಗಳ ಬಗ್ಗೆ ಅಮೆರಿಕ ಎಚ್ಚರವಹಿಸಬೇಕು. ಅಲಿಪ್ತ ನೀತಿಯನ್ನು ಅನುಸರಿಸಿದ್ದ ಭಾರತ, ರಷ್ಯಾ ಜತೆ ಐತಿಹಾಸಿಕ ಮಿಲಿಟರಿ ಸಂಬಂಧ ಹೊಂದಿರುವುದನ್ನು ಮರೆಯಬಾರದು’ ಎಂದಿದ್ದಾರೆ.

ಕಪ್ಪು ವರ್ಣೀಯ ಯುವಕನ ಹತ್ಯೆ: ಆಕ್ರೋಶ

ಮಿನ್ನೆಪೊಲೀಸ್ (ರಾಯಿಟರ್ಸ್): ಕಪ್ಪು ವರ್ಣೀಯ ಯುವಕನೊಬ್ಬನನ್ನು ಪೊಲೀಸರು ಗುಂಡಿಕ್ಕಿ ಹತ್ಯೆ ಮಾಡಿದ ಬಳಿಕ ಮಿನ್ನೆಪೊಲೀಸ್‌ನ ಉಪನಗರದಲ್ಲಿ ವ್ಯಾಪಕ ಪ್ರತಿಭಟನೆ ಆರಂಭವಾಗಿದೆ.

ಬ್ರೂಕ್ಲಿನ್ ಕೇಂದ್ರದ ಬಳಿಯ ಠಾಣೆಯ ಹೊರಗೆ ಸೇರಿದ್ದ ನೂರಾರು ಮಂದಿ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಜನರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು. 20 ವರ್ಷದ ಡೌಂಟೆ ರೈಟ್ ಸಾವಿಗೀಡಾದ ಯುವಕ.

ತನ್ನನ್ನು ಪೊಲೀಸರು ಎಳೆದೊಯ್ಯುತ್ತಿದ್ದಾರೆ ಎಂದು ಡೌಂಟೆ ತಿಳಿಸಿದ್ದ ಎಂದು ಯುವಕನ ತಾಯಿ ಕಾಟಿ ರೈಟ್ ತಿಳಿಸಿದ್ದಾರೆ.

ಆಸ್ಟ್ರೇಲಿಯಾದಲ್ಲಿ ಚಂಡಮಾರುತ: ಅಪಾರ ಹಾನಿ

ಪರ್ತ್ (ಆಸ್ಟ್ರೇಲಿಯಾ): ಪಶ್ಚಿಮ ಆಸ್ಟ್ರೇಲಿಯಾದ ಪ್ರದೇಶಗಳಲ್ಲಿ ‘ಸೆರೋಜಾ’ ಚಂಡಮಾರುತದ ಪರಿಣಾಮ ಹಲವು ನಗರಗಳಲ್ಲಿ ಅಪಾರ ಹಾನಿ ಸಂಭವಿಸಿದೆ.

ವಿದ್ಯುತ್ ಪೂರೈಕೆ ವ್ಯತ್ಯಯವಾಗಿದೆ. ಕೆಲವು ನಗರಗಳಲ್ಲಿ ಕಗ್ಗತ್ತಲು ಆವರಿಸಿದೆ. ಸುಮಾರು 31 ಸಾವಿರ ಗ್ರಾಹಕರಿಗೆ ತೊಂದರೆಯಾಗಿದೆ. 170 ಕಿಲೋ ಮೀಟರ್ ವೇಗದಲ್ಲಿ ಬಿರುಗಾಳಿ ಬೀಸುತ್ತಿದೆ. ಕಲ್ಬಾರ್ರಿ ನಗರದಲ್ಲಿ ಶೇಕಡ 70ರಷ್ಟು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೋಂಕಿನ ತೀವ್ರತೆಗೆ ಮೃತರ ಸಂಖ್ಯೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಜೊತೆಗೆ ಸೋಂಕಿನ ತೀವ್ರತೆಯಿಂದ ಅಸ್ವಸ್ಥಗೊಳ್ಳುವವರ ಸಂಖ್ಯೆ ಕೂಡ ಏರಿಕೆ ಕಾಣುತ್ತಿದೆ. ಸದ್ಯ 470 ಮಂದಿ ತೀವ್ರ ನಿಗಾ ಘಟಕದಲ್ಲಿದ್ದು, 52 ಮಂದಿ ಸಾವಿಗೀಡಾಗಿರುವುದು ಸೋಮವಾರ ದೃಢಪಟ್ಟಿದೆ.

ಕಳೆದ ವರ್ಷ ಅಕ್ಟೋಬರ್ ಬಳಿಕ ಕೋವಿಡ್‌ಗೆ ಮೃತಪಡುವವರ ಸಂಖ್ಯೆ ಇಳಿಮುಖ ಪಡೆದಿತ್ತು.

ಈ ವರ್ಷ ಮಾರ್ಚ್ ತಿಂಗಳಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ ಮರಣ ಪ್ರಕರಣಗಳು ಬಹುತೇಕ ದಿನ ಒಂದಂಕಿಯಲ್ಲಿಯೇ ಇತ್ತು. ಆದರೆ, ಈಗ 50ರ ಗಡಿ ದಾಟಿದ್ದು, ಮರಣ ಪ್ರಮಾಣ ದರ ಶೇ 0.54ಕ್ಕೆ ಏರಿಕೆಯಾಗಿದೆ. ಬೆಂಗಳೂರಿನಲ್ಲಿ 40 ಮಂದಿ, ಮೈಸೂರಿನಲ್ಲಿ ಮೂವರು, ಬೀದರ್ ಮತ್ತು ಚಾಮರಾಜನಗರದಲ್ಲಿ ತಲಾ ಇಬ್ಬರು, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಚಿಕ್ಕಬಳ್ಳಾಪುರ ಹಾಗೂ ರಾಮನಗರದಲ್ಲಿ ತಲಾ ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಇವರಲ್ಲಿ ಮೂವರನ್ನು ಹೊರತುಪಡಿಸಿ ಉಳಿದವರು 50 ವರ್ಷ ಮೇಲ್ಪಟ್ಟವರಾಗಿದ್ದಾರೆ. \

ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಸಂಖ್ಯೆ13 ಸಾವಿರದತ್ತ ದಾಪುಗಾಲು (12,941) ಇರಿಸಿದೆ.

11 ಜಿಲ್ಲೆಯಲ್ಲಿ ಅಧಿಕ ಪ್ರಕರಣ: 24 ಗಂಟೆಗಳ ಅವಧಿಯಲ್ಲಿ 9,579 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. 9 ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಡೆ 50ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ಒಂದು ದಿನದ ಅವಧಿಯಲ್ಲಿ 1.16 ಲಕ್ಷ ಮಾದರಿಗಳನ್ನು ಪರೀಕ್ಷಿಸಿಲಾಗಿದೆ. ಬೆಂಗಳೂರಿನಲ್ಲಿ 6,387 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಅದೇ ರೀತಿ, ಬೀದರ್ (465), ಮೈಸೂರು (362), ಕಲಬುರ್ಗಿ (335), ತುಮಕೂರು (239), ಬೆಂಗಳೂರು ಗ್ರಾಮಾಂತರ (192), ಬಳ್ಳಾರಿ (132), ವಿಜಯಪುರ (122), ಚಿಕ್ಕಬಳ್ಳಾಪುರ (120), ಹಾಸನ (113), ಉಡುಪಿ (101) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ ಶೇ 8.24ಕ್ಕೆ ಏರಿಕೆಯಾಗಿದೆ.

ಈ ತಿಂಗಳು 12 ದಿನಗಳಲ್ಲಿಯೇ 77,865 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 10.74 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 56 ಸಾವಿರ ದಾಟಿದ್ದು, ಸದ್ಯ ರಾಜ್ಯದಲ್ಲಿ 75,985 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಕೊರೊನಾ ಸೋಂಕಿತರಲ್ಲಿ 2,767 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.85 ಲಕ್ಷ ದಾಟಿದೆ. ರಾಜ್ಯದಲ್ಲಿ ಸೋಮವಾರ 4,981 ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಮಾಡಲಾಗಿದೆ. ಮಧ್ಯಾಹ್ನ 3.30ರ ವೇಳೆಗೆ 82,240 ಮಂದಿ ಲಸಿಕೆ ಪಡೆದುಕೊಂಡಿದ್ದರು.

ಈವರೆಗೆ 59.88 ಲಕ್ಷ ಡೋಸ್ ಲಸಿಕೆಯನ್ನು ನೀಡಲಾಗಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ
ಒಟ್ಟು ಪ್ರಕರಣ	13.68 ಕೋಟಿ	1.35 ಕೋಟಿ
ಸಕ್ರಿಯ ಪ್ರಕರಣ	2.38 ಕೋಟಿ	12.41 ಲಕ್ಷ
ಗುಣಮುಖ	11.00 ಕೋಟಿ	1.21 ಕೋಟಿ
ಸಾವು	29.52 ಲಕ್ಷ	1.70 ಲಕ್ಷ

ದಿನದ ಏರಿಕೆ

	ವಿಶ್ವ	ಭಾರತ
ಹೊಸ ಪ್ರಕರಣ	7.05 ಲಕ್ಷ	1,73,914
ಗುಣಮುಖ	4.99 ಲಕ್ಷ	75,380
ಸಾವು	12,984	904

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
50,678	47,874	37,537

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಫ್ರಾನ್ಸ್	ಬ್ರೆಜಿಲ್
68.62	46.50	12.48

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	58,204
ತಮಿಳುನಾಡು	12,927
ದೆಹಲಿ	11,298

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	34.34
ಕೇರಳ	11.72
ಆಂಧ್ರಪ್ರದೇಶ	9.28

10 ರಾಜ್ಯಗಳಲ್ಲಿ ಸೋಂಕು ತೀವ್ರ

ನವದೆಹಲಿ (ಪಿಟಿಐ): ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಛತ್ತೀಸಗಡ, ಕರ್ನಾಟಕ, ಕೇರಳ, ತಮಿಳುನಾಡು, ಮಧ್ಯಪ್ರದೇಶ, ಗುಜರಾತ್ ಹಾಗೂ ರಾಜಸ್ಥಾನ ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರಿಕೆಯಾಗುತ್ತಿವೆ. ಈ 10 ರಾಜ್ಯಗಳಿಂದ ಶೇ 83.02ರಷ್ಟು ಪ್ರಕರಣಗಳು ವರದಿಯಾಗಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ಪ್ರಕರಣ ಕಂಡುಬಂದಿದ್ದು, ನಂತರದ ಸ್ಥಾನದಲ್ಲಿ ಉತ್ತರ ಪ್ರದೇಶ ಮತ್ತು ದೆಹಲಿ ಇವೆ.

ಮಹಾರಾಷ್ಟ್ರ, ಛತ್ತೀಸಗಡ, ಕರ್ನಾಟಕ, ಉತ್ತರ ಪ್ರದೇಶ ಮತ್ತು ಕೇರಳದಲ್ಲಿ ಸಕ್ರಿಯ ಪ್ರಕರಣಗಳ ಪ್ರಮಾಣ ಶೇ 70.16ರಷ್ಟಿದೆ.

‘ಐಸೆಕ್ ನಿರ್ದೇಶಕ ಹುದ್ದೆಗೆ ಸೇವಾ ಹಿರಿತನ ಪರಿಗಣಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಗೆ (ಐಸೆಕ್) ಸೇವಾ ಹಿರಿತನವನ್ನು ಕಡೆಗಣಿಸಿ ಉಸ್ತುವಾರಿ ನಿರ್ದೇಶಕರನ್ನು ನೇಮಕ ಮಾಡಲಾಗಿದೆ ಎಂದು ಸಂಸ್ಥೆಯ ನಿವೃತ್ತ ನಿರ್ದೇಶಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಡಾ. ಮಾದೇಶ್ವರನ್ ಅವರ ವರ್ಗಾವಣೆಯ ನಂತರ ಡಾ. ಪ್ರಮೋದ್ ಕುಮಾರ್ ಎಂಬುವರಿಗೆ ಸಂಸ್ಥೆಯ ಉಸ್ತುವಾರಿ ನಿರ್ದೇಶಕರ ಹೊಣೆ ನೀಡಲಾಗಿದೆ. ಆದರೆ, ಇವರಿಗಿಂತ ಸೇವಾ ಹಿರಿತನದಲ್ಲಿ ಮತ್ತು ಹೆಚ್ಚು ಪಾಂಡಿತ್ಯ ಹೊಂದಿರುವ ಡಾ. ರಾಜಶೇಖರ್ ಅವರನ್ನು ಕಡೆಗಣಿಸಲಾಗಿದೆ’ ಎಂದು ಐಸೆಕ್ ನಿವೃತ್ತ ನಿರ್ದೇಶಕ ಪ್ರೊ.ಎಂ.ಜಿ. ಚಂದ್ರಕಾಂತ್ ದೂರಿದರು.

‘ಐಸೆಕ್ 1972ರಲ್ಲಿ ಸ್ಥಾಪಿಸಲ್ಪಟ್ಟ ಪ್ರತಿಷ್ಠಿತ ಸಮಾಜ ವಿಜ್ಞಾನಗಳ ಅಧ್ಯಯನ ಸಂಸ್ಥೆ. ಈ ಸಂಸ್ಥೆಗೆ ರಾಜ್ಯ ಸರ್ಕಾರವು ಶೇ 55ರಷ್ಟು ಅನುದಾನ ನೀಡಿದರೆ, ಕೇಂದ್ರ ಸರ್ಕಾರವು ಶೇ 45 ರಷ್ಟು ಅನುದಾನ ನೀಡುತ್ತಿದೆ. ಇಂತಹ ಸಂಸ್ಥೆಗೆ ನಡೆಯುವ ನೇಮಕಾತಿಗಳು ಹೆಚ್ಚು ಪಾರದರ್ಶಕವಾಗಿರಬೇಕು. ಸಾಮಾನ್ಯವಾಗಿ ಉಸ್ತುವಾರಿ ನಿರ್ದೇಶಕರೇ ಮುಂದೆ ಕಾಯಂ ನಿರ್ದೇಶಕರಾಗುವ ಸಂಪ್ರದಾಯವಿದೆ’ ಎಂದೂ ಅವರು ಹೇಳಿದರು.

‘ರಾಜಶೇಖರ್ ಅವರ ಸೇವಾವಧಿ ಒಂದು ವರ್ಷವಿದೆ. ಅಲ್ಲದೆ, ಅವರು ನಿರ್ದೇಶಕ ಹುದ್ದೆಗೆ ಎಲ್ಲ ರೀತಿಯಿಂದಲೂ ಅರ್ಹರಾಗಿದ್ದಾರೆ’ ಎಂದು ಅವರು ಅಭಿಪ್ರಾಯಪಟ್ಟರು.

‘ಪ್ರೊ. ಪ್ರಮೋದ್‌ಕುಮಾರ್ ಅವರನ್ನು ಉಸ್ತುವಾರಿ ನಿರ್ದೇಶಕರಾಗಿ ನೇಮಕ ಮಾಡಿ ಸಂಸ್ಥೆಯ ಕುಲಸಚಿವರು ಹೊರಡಿಸಿರುವ ಅಧಿಸೂಚನೆ ಗಮನಿಸಿದೆ. ಸಂಸ್ಥೆಯ ಬೈಲಾ ಪ್ರಕಾರ ತಾಂತ್ರಿಕವಾಗಿ ಇದು ತಪ್ಪು. ಏಕೆಂದರೆ, ಸಂಸ್ಥೆಯಲ್ಲಿ ಉಸ್ತುವಾರಿ ನಿರ್ದೇಶಕ ಎಂಬ ಹುದ್ದೆಯೇ ಇಲ್ಲ. ಬೇಕಿದ್ದರೆ ಹಂಗಾಮಿ ನಿರ್ದೇಶಕ ಎಂದು ನೇಮಕ ಮಾಡಬಹುದು’ ಎಂದು ಐಸೆಕ್ ನಿವೃತ್ತ ನಿರ್ದೇಶಕ ಪ್ರೊ. ಗೋಪಾಲ್ ಕಡೆಕೋಡಿ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆಗಾಗಿ ಪ್ರೊ. ಪ್ರಮೋದ್ ಕುಮಾರ್ ಅವರನ್ನು ಸಂಪರ್ಕಿಸಲಾಯಿತು. ಆದರೆ, ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ನ್ಯಾಯಾಲಯಕ್ಕೆ ಹಾಜರಾದ ನಟ ರಕ್ಷಿತ್ ಶೆಟ್ಟಿ

ಬೆಂಗಳೂರು: ಅನುಮತಿ ಇಲ್ಲದೇ ‘ಕಿರಿಕ್ ಪಾರ್ಟಿ’ ಸಿನಿಮಾದಲ್ಲಿ ಹಾಡು ಬಳಸಿದ್ದ ಮೊಕದ್ದಮೆಯಲ್ಲಿ ತಮ್ಮ ಬಂಧನಕ್ಕೆ ಜಾಮೀನು ರಹಿತ ವಾರೆಂಟ್ ಜಾರಿಯಾಗಿದ್ದರಿಂದಾಗಿ ನಟ ರಕ್ಷಿತ್ ಶೆಟ್ಟಿ ನಗರದ 9ನೇ ಎಸಿಎಂಎಂ ನ್ಯಾಯಾಲಯಕ್ಕೆ ಸೋಮವಾರ ಹಾಜರಾದರು.

‘ಶಾಂತಿ ಕ್ರಾಂತಿ’ ಚಿತ್ರದ ಹಾಡನ್ನು ಲಹರಿ ಸಂಸ್ಥೆ ಅನುಮತಿ ಇಲ್ಲದೇ ಕಿರಿಕ್ ಪಾರ್ಟಿ ಸಿನಿಮಾದಲ್ಲಿ ಬಳಸಿದ್ದ ಆರೋಪ ರಕ್ಷಿತ್ ಶೆಟ್ಟಿ, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಮತ್ತು ಪರಮ್ವಾ ಸ್ಟುಡಿಯೋ ಮೇಲಿದೆ. ಅವರೆಲ್ಲರ ವಿರುದ್ಧ ಲಹರಿ ಸಂಸ್ಥೆಯವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು.

ವಿಚಾರಣೆಗೆ ಹಲವು ಬಾರಿ ಗೈರಾಗಿದ್ದರಿಂದಾಗಿ ನಟ, ಸಂಗೀತ ನಿರ್ದೇಶಕ, ಪರಮ್ವಾ ಸ್ಟುಡಿಯೊ ಮಾಲೀಕರ ವಿರುದ್ಧ ಈಚೆಗಷ್ಟೇ ವಾರೆಂಟ್ ಜಾರಿಯಾಗಿತ್ತು.

ಪ್ರಜಾವಾಣಿ
ಕ್ಷೇಮ ಕುಶಲ
ಮಂಗಳವಾರ, 13 ಏಪ್ರಿಲ್ 2021



ನಿಮ್ಮ ಆಹಾರದಲ್ಲಿ ನಾರಿನಾಂಶವಿದೆಯೆ?

ಡಾ. ವಿನಯ ಶ್ರೀನಿವಾಸ್

ಸಸ್ಯಮೂಲ ಆಹಾರ ಉತ್ಪನ್ನಗಳ ಜೀರ್ಣವಾಗದ ಭಾಗವೇ ನಾರು. ಸಾಮಾನ್ಯವಾಗಿ ಆಹಾರ ಪದಾರ್ಥಗಳು ಬಾಯಿ, ಜಠರ ಹಾಗೂ ಸಣ್ಣ ಕರುಳುಗಳಲ್ಲಿ ವಿವಿಧ ಕಿಣ್ವಗಳ ಸಹಾಯದಿಂದ ಅತಿ ಸಣ್ಣ ಕಣಗಳಾಗಿ ಮಾರ್ಪಾಡಾಗಿ ನಂತರ ಪೌಷ್ಟಿಕಾಂಶಗಳ ರೂಪದಲ್ಲಿ ರಕ್ತ ಪರಿಚಲನೆಯನ್ನು ಸೇರುತ್ತವೆ. ಅವುಗಳ ಜೊತೆಯಲ್ಲಿಯೇ ಜೀರ್ಣವಾಗದೆಯೇ ಉಳಿಯುವ ಕೆಲವು ಅಂಶಗಳೂ ಆಹಾರದಲ್ಲಿರುತ್ತವೆ. ಜೀರ್ಣವಾಗದ ಮಾತ್ರಕ್ಕೆ ಈ ನಾರು ಅನುಪಯುಕ್ತ ಎಂದು ನೀವು ತಿಳಿದಿದ್ದರೆ, ಅದು ಖಂಡಿತ ತಪ್ಪು. ಇದು ಹಲವು ಬಗೆಯಲ್ಲಿ ಶರೀರದ ಆರೋಗ್ಯವನ್ನು ಕಾಪಾಡಲು ಸಹಕಾರಿಯಾಗಿದೆ.

ಆಹಾರದಲ್ಲಿ ಮೂರು ಬಗೆಯ ನಾರಿನಾಂಶವಿರುತ್ತದೆ. ಅವೆಂದರೆ, ಕರಗಬಲ್ಲ ನಾರಿನಾಂಶ, ಕರಗದ ನಾರಿನಾಂಶ ಹಾಗೂ ಜೀರ್ಣವಾಗದ ಪಿಷ್ಟದ ಅಂಶ. ಕರಗಬಲ್ಲ ನಾರಿನಾಂಶವು ಆಹಾರವು ಜಠರದಿಂದ ಕರುಳುಗಳಿಗೆ ತಲುಪುವ ವೇಗವನ್ನು ನಿಧಾನಿಸುತ್ತದೆ. ಇದರಿಂದ ವ್ಯಕ್ತಿಗೆ ಹೊಟ್ಟೆ ತುಂಬಿದಂತಹ ಭಾವ ಉಂಟಾಗುವುದರಿಂದ ಬಹಳ ಹೊತ್ತಿನವರೆಗೆ ಹಸಿವಿನ ಅನುಭವವಾಗುವುದಿಲ್ಲ. ಅಲ್ಲದೆ, ಶರೀರದಲ್ಲಿನ ಕೊಲೆಸ್ಟ್ರಾಲ್ ವಿಸರ್ಜನೆಗೆ ನೆರವಾಗುವ ಮೂಲಕ ಅದರ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಹಾಗೂ ರಕ್ತದ ಸಕ್ಕರೆ ಅಂಶವನ್ನು ಸ್ಥಿರಗೊಳಿಸುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ.

ಕರಗದ ನಾರಿನಾಂಶವು ನೀರನ್ನು ಹೀರಿಕೊಂಡು, ಕರುಳುಗಳಲ್ಲಿನ ಆಹಾರದ ಕಣಗಳು ಮೆತ್ತಗಾಗಲು ಮತ್ತು ಆ ಮೂಲಕ ಕರುಳುಗಳ ನಿಯಮಿತ ಚಲನೆಗೆ ಸಹಕರಿಸುತ್ತದೆ. ಇದು ಕರುಳುಗಳ ಕಾರ್ಯಕ್ಷಮತೆಯನ್ನು ಸುಧಾರಿಸಲು ಹಾಗೂ ಅವುಗಳ ಆರೋಗ್ಯವನ್ನು ಕಾಪಾಡಲು ಬಹಳ ಮುಖ್ಯ.

ಜೀರ್ಣವಾಗದ ಪಿಷ್ಟವು ಕರುಳುಗಳಲ್ಲಿ ಶರೀರಕ್ಕೆ ಅತ್ಯಗತ್ಯವಾದ ಸ್ನೇಹಮಯಿ ಸೂಕ್ಷ್ಮಾಣುಗಳ ಉತ್ಪತ್ತಿಗೆ ನೆರವಾಗುತ್ತದೆ. ಈ ಸೂಕ್ಷ್ಮಾಣುಗಳು ಜೀರ್ಣವಾಗದ ಆಹಾರ ಪದಾರ್ಥಗಳ ನಿರ್ವಹಣೆಗೆ, ರೋಗಕಾರಕ ಸೂಕ್ಷ್ಮಾಣುಗಳ ವಿರುದ್ಧ ಹೋರಾಡಲು ಹಾಗೂ ಕರುಳಿನ ರೋಗ ನಿರೋಧಕ ವ್ಯವಸ್ಥೆಯ ಭಾಗವಾಗಿ ಕಾರ್ಯನಿರ್ವಹಿಸುತ್ತವೆ.

ಸಾಮಾನ್ಯವಾಗಿ ವ್ಯಕ್ತಿಯೊಬ್ಬನಿಗೆ ದಿನವೂ 25- 30 ಗ್ರಾಂಗಳಷ್ಟು ನಾರಿನಾಂಶದ ಅಗತ್ಯತೆ ಇರುತ್ತದೆ.

ನಾರಿನಾಂಶ ಹೇರಳವಾಗಿರುವ ಆಹಾರ ಪದಾರ್ಥಗಳು ಯಾವುವು?

ಈ ನಾರಿನಾಂಶವು ಹಣ್ಣು, ತರಕಾರಿ, ಸೊಪ್ಪು, ದ್ವಿದಳ ಧಾನ್ಯಗಳು, ಬಾರ್ಲಿ, ತವುಡು (ಓಟ್ಸ್-ಧಾನ್ಯಗಳ ಮೇಲಿನ ಸಿಪ್ಪೆಯಂತಹ ಭಾಗ), ಒಣಕಾಯಿಗಳು (ನಟ್ಸ್), ವಿವಿಧ ಬಗೆಯ ಹಿಟ್ಟುಗಳು ಮಸೂರ, ಬಾದಾಮಿ, ಏಪ್ರಿಕಾರ್ಟ, ಗೆಣಸು, ಬ್ರೊಕ್ಕೊಲಿ, ಸೇಬು, ಪೇರಲೆ, ಬೀನ್ಸ್, ಬಟಾಣಿ, ಕ್ಯಾರೇಟ್ ಇನ್ನೂ ಮುಂತಾದ ಆಹಾರ ಪದಾರ್ಥಗಳಲ್ಲಿ ಹೇರಳವಾಗಿ ಇರುತ್ತದೆ.

ಎಲ್ಲ ಬಗೆಯ ಹಣ್ಣುಗಳು ಹಾಗೂ ತರಕಾರಿಗಳಲ್ಲಿಯೂ ನಾರಿನಾಂಶ ಸಾಕಷ್ಟಿರುತ್ತದೆ.

ನಿಯಮಿತವಾದ ನಾರಿನಾಂಶದ ಸೇವನೆಯಿಂದ ಪ್ರಯೋಜನಗಳೇನು?

- ಕರುಳಿನ ನಿಯಮಿತವಾದ ಚಲನೆಗೆ ನೆರವಾಗುವುದರ ಮೂಲಕ ಅವುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.
- ಮಲಬದ್ಧತೆ ಮತ್ತು ಮೂಲವ್ಯಾಧಿ ಸಮಸ್ಯೆಯನ್ನು ನಿಯಂತ್ರಿಸುತ್ತದೆ.
- ಹೊಟ್ಟೆ ತುಂಬಿದ ಭಾವದಿಂದಾಗಿ ಅತಿಯಾಗಿ ಆಹಾರವನ್ನು ಸೇವಿಸುವುದನ್ನು ತಡೆದು, ತೂಕ ಇಳಿಸಲೂ ನೆರವಾಗುತ್ತದೆ.
- ಹೆಚ್ಚುವರಿ ಕೊಲೆಸ್ಟ್ರಾಲ್ ಅಂಶದ ವಿಸರ್ಜನೆಗೆ ದಾರಿ ಮಾಡಿಕೊಡುವುದರ ಮೂಲಕ ಬೊಜ್ಜು, ಅಧಿಕತೂಕವನ್ನು ನಿಯಂತ್ರಿಸಬಲ್ಲದು.
- ದೊಡ್ಡ ಕರುಳಿನ ಕ್ಯಾನ್ಸರ್ ಸಂಭವವನ್ನು ಕಡಿಮೆ ಮಾಡುತ್ತದೆ.
- ಹಿರಿಯ ನಾಗರೀಕರಲ್ಲಿ ಜೀರ್ಣಕ್ರಿಯೆಯನ್ನು ಸುಗಮಗೊಳಿಸುತ್ತದೆ.
- ಪದೇ ಪದೇ ಮಲವಿಸರ್ಜನೆ, ಹೊಟ್ಟೆ ನೋವು ಹಾಗೂ ಹೊಟ್ಟೆ ಉಬ್ಬಿದಂತಹ ಸಮಸ್ಯೆ (ಇರಿಟಬಲ್ ಬೊವೆಲ್ ಸಿಂಡ್ರೋಮ್) ಯಿಂದ ಬಳಲುವವರಲ್ಲಿ ನಾರಿನಾಂಶ ಬಹಳವೇ ಮುಖ್ಯ.
- ಸಕ್ಕರೆ ಅಂಶದ ಹೀರಿಕೆಯನ್ನು ನಿಧಾನಿಸಿ, ರಕ್ತದಲ್ಲಿ ಅದರ ಪ್ರಮಾಣವನ್ನು ಸ್ಥಿರವಾಗಿಡುವಲ್ಲಿ ಸಹಕರಿಸುತ್ತದೆ.
- ದೇಹ ತೂಕವನ್ನು ನಿಯಂತ್ರಣದಲ್ಲಿಡುವುದರ ಮೂಲಕ ಮಧುಮೇಹ, ಅಧಿಕ ರಕ್ತದೊತ್ತಡ, ಹೃದ್ರೋಗದಂತಹ ಸಮಸ್ಯೆಗಳನ್ನು ನಿಯಂತ್ರಿಸಲೂ ಸಹಕರಿಸುತ್ತದೆ.
- ಗುದದ್ವಾರದಲ್ಲಿನ ಬಿರುಕಿನ (ಎನಲ್ ಫಿಶರ್) ಸಮಸ್ಯೆಯಿರುವವರಲ್ಲಿ ಮಲ ವಿಸರ್ಜನೆ ಸುಲಭವಾಗುವ ಮೂಲಕ ನೋವು ಕಡಿಮೆ ಮಾಡಲು ನೆರವಾಗುತ್ತದೆ.

ಈ ಎಲ್ಲ ಕಾರಣಗಳಿಗಾಗಿ ನಮ್ಮ ಆಹಾರದಲ್ಲಿ ನಾರಿನಾಂಶವಿದೆಯೆ ಎಂದು ಖಾತ್ರಿ ಮಾಡಿಕೊಳ್ಳುವುದು ಅತ್ಯಗತ್ಯ. ಅಂತೆಯೇ, ಒಮ್ಮೆಲೇ ಅತಿ ಹೆಚ್ಚು ನಾರಿನಾಂಶವನ್ನು ನಮ್ಮ ಆಹಾರದಲ್ಲಿ ಸೇರಿಸಿಕೊಳ್ಳುವುದೂ ಒಳ್ಳೆಯದಲ್ಲ. ಇದು ದಿಢೀರ್ ಹೊಟ್ಟೆ ಉಬ್ಬುವಿಕೆಗೆ ಮತ್ತು ಹೊಟ್ಟೆ ನೋವಿಗೆ ಕಾರಣವಾಗಬಹುದು. ಆಹಾರದಲ್ಲಿ ಕ್ರಮೇಣ ನಾರಿನಾಂಶವನ್ನು ಹೆಚ್ಚಿಸುತ್ತಾ ಹೋಗುವುದು ಉತ್ತಮ. ಆಹಾರದಲ್ಲಿ ಅತಿಯಾದ ನಾರಿನಾಂಶವೂ ಒಳ್ಳೆಯದಲ್ಲ. ಇದು ಆಹಾರದಲ್ಲಿನ ಕ್ಯಾಲ್ಸಿಯಂ, ಮೆಗ್ನಿಸಿಯಂ ಮತ್ತು ಕಬ್ಬಿಣಾಂಶದ ಹೀರಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಕನ್ನುಂಟು ಮಾಡುತ್ತದೆ.

ಎರಡು ಬಗೆಯ ಹಣ್ಣುಗಳು ಮತ್ತು ಎರಡರಿಂದ ಮೂರು ಬಗೆಯ ತರಕಾರಿಗಳು ನಿಮ್ಮ ದೈನಂದಿನ ಆಹಾರದಲ್ಲಿ ಇದೆಯಾದರೆ ನೀವು ಸರಿಯಾದ ಪ್ರಮಾಣದ ನಾರಿನಾಂಶವನ್ನು ಸೇವಿಸುತ್ತಿರುವಿರೆಂದೇ ಅರ್ಥ. ನಾರಿನಾಂಶದ ಜೊತೆಯಲ್ಲಿ ಸರಿಯಾದ ಪ್ರಮಾಣದಲ್ಲಿ ನೀರನ್ನು ಕುಡಿಯುವುದೂ ಅತ್ಯಗತ್ಯ.



ವಸಂತದಲ್ಲಿ ವನವಿಹಾರ

ಡಾ. ಜಿ. ಎಲ್. ಕೃಷ್ಣ

ಯುಗಾದಿ ಬಂದಿದೆ. ವಸಂತಋತುವಿನ ಪುಣ್ಯಪ್ರಭಾವದಿಂದ ವನೋಪವನಗಳೆಲ್ಲ ನಳನಳಿಸುತ್ತಿವೆ. ಹಳೆಬೇರಿನ ಅರಳಿಯಲ್ಲಿ ಹೊಸ ಎಲೆಗಳು ಚಿಗುರಿವೆ. ಹೊಂಗೆಮರದ ಹೂಗುಚ್ಛ ತನ್ನ ಸುತ್ತೆಲ್ಲಾ ನವಿರಾದ ಕಂಪನ್ನು ತುಂಬಿದೆ. ಮಧುರವಾಣಿಯ ಕೋಗಿಲೆ ಫಲಭರಿತ ಮಾವಿನ ಮರದ ಸೊಗಸಿನಲ್ಲಿ ಸಂಭ್ರಮಿಸಿದೆ. ಕುಸುಮಾಕರನು ಅನುಗ್ರಹಿಸಿರುವ ಪ್ರಕೃತಿಯ ಸೊಬಗು ಭಗವದ್ವಿಭೂತಿಯೇ ಹೌದೆಂಬ ಭಾವ ಮನವನ್ನು ತುಂಬಿದೆ. ಪ್ರಕೃತಿಯ ಈ ಚೆಲುವಿನಲ್ಲಿ ಸನ್ಮಿತ್ರರೊಂದಿಗೆ ಹರಟುತ್ತ ಮಾಡುವ ವನವಿಹಾರ ಒಂದು ಹಬ್ಬವೇ ಸರಿ. ಇಂತಹ ವಿಹಾರವನ್ನು ಅವಶ್ಯ ಕರ್ತವ್ಯವೆಂದು ಆಯುರ್ವೇದ ಉಪದೇಶಿಸಿದೆ:

ವಿಚಿತ್ರಪುಷ್ಪವೃಕ್ಷೇಷು ಕಾನನೇಷು ಸುಗಂಧಿಷು ಗೋಷ್ಠೀಕಥಾಭಿಶ್ಚಿತ್ರಾಭಿಃ ಮಧ್ಯಾಹ್ನಂ ಗಮಯೇತ್ ಸುಖೀ

ವನವಿಹಾರದಂತಹ ಕಾಲಕ್ಷೇಪಕ್ಕೆ ಆರೋಗ್ಯಶಾಸ್ತ್ರ ಏಕಿಷ್ಟು ಪ್ರಾಶಸ್ತ್ಯ ನೀಡಿದೆಯೆಂಬುದನ್ನು ಕೊಂಚ ವಿಚಾರ ಮಾಡೋಣ.

ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. ಜಪಾನ್ ದೇಶದವರು ತಂತ್ರಜ್ಞಾನದಲ್ಲಿ, ವಾಣಿಜ್ಯದಲ್ಲಿ ಸಾಧಿಸಿದ್ದ ಹೆಚ್ಚುಗಾರಿಕೆ ಎಂಥವರನ್ನೂ ಬೆರಗುಗೊಳಿಸುವಂಥದ್ದಾಗಿತ್ತು. ಸತತ ಪರಿಶ್ರಮದಿಂದ ಸಮೃದ್ಧಿಯ ನಾಡೊಂದನ್ನು ಕಟ್ಟಿಕೊಂಡಿದ್ದರು ಅವರು. ಆದರೆ ಈ ಸಮೃದ್ಧಿಯ ಬೆನ್ನಲ್ಲೇ ಹೊಸದೊಂದು ಪಿಡುಗು ಆ ಜನರನ್ನು ಬಾಧಿಸಲಾರಂಭಿಸಿತು. ನಿರುತ್ಸಾಹ, ವಿಷಾದ, ಅನಿದ್ರೆ, ಮೈಕೈನೋವುಗಳು ನಗರವಾಸಿಗಳ ನಿತ್ಯದ ಬೇನೆಗಳಾಗಿಬಿಟ್ಟವು. ಎದೆಗುಂದದ ಜಪಾನಿಯರು ತಮ್ಮದೇ ವಿಶಿಷ್ಟರೀತಿಯಲ್ಲಿ ಈ ಬೇನೆಗಳಿಗೆ ಪರಿಹಾರವನ್ನೂ ಕಂಡುಕೊಂಡರು. ಆ ಪರಿಹಾರವೇ ಜಪಾನ್ ಸರ್ಕಾರದ ಅರಣ್ಯ ಇಲಾಖೆಯವರು ಜಾರಿಗೆ ತಂದ 'ಶಿನ್ರಿನ್-ಯೋಕು'.

ಶಿನ್ರಿನ್ ಎಂದರೆ ವನ; ಯೋಕು ಎಂದರೆ ಸ್ನಾನ. ವನೋಪವನಗಳಲ್ಲಿ ತಿರುಗಾಡಿ ವಿಶ್ರಮಿಸಿ, ಸೂರ್ಯನ ಬೆಳಕಿನಲ್ಲಿ ಮೈಯೊಡ್ಡಿ ಮಿಂದು, ಶುದ್ಧ ವಾಯುಸೇವನೆಯಿಂದ ಹೊಸಹುರುಪು ಪಡೆದು, ಪ್ರಕೃತಿಸೌಂದರ್ಯದಲ್ಲಿ ಕಣ್ಮನಗಳನ್ನು ತಣಿಸಿಕೊಳ್ಳುವುದೇ ಈ ವನಸ್ನಾನದ ಉದ್ದೇಶ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ನಡೆದಿರುವ ವೈಜ್ಞಾನಿಕ ಅಧ್ಯಯನಗಳು ಇಂತಹ ವನಸ್ನಾನದಿಂದ ಆಗಬಹುದಾದ ಬಹುಬಗೆಯ ಆರೋಗ್ಯಲಾಭದ ಬಗ್ಗೆ ಬೆಳಕು ಚೆಲ್ಲಿವೆ.

ಶರೀರದ ಸ್ವಾಯತ್ತ ನರಮಂಡಲದಲ್ಲಿ ಎರಡು ಭಿನ್ನ ರೀತಿಯ ಉಪಮಂಡಲಗಳಿವೆ. ಒಂದು ಬಗೆಯದ್ದು ಶರೀರದ ಕಾರ್ಯಗಳಿಗೆಲ್ಲ ಉತ್ತೇಜನ ಕೊಡುವಂತಹದ್ದಾದರೆ, ಇನ್ನೊಂದು ಬಗೆಯದ್ದು ಉಪಶಮನವನ್ನೊದಗಿಸುವಂತಹದ್ದಾಗಿದೆ. ಉತ್ತೇಜನ ಕೊಡುವ ಭಾಗದ ಪ್ರಭಾವದಿಂದಾಗಿ ಹೃದಯಬಡಿತ ಏರುತ್ತದೆ, ಮಾಂಸಪೇಶಿಗಳ ರಕ್ತಸಂಚಾರ ಹೆಚ್ಚುತ್ತದೆ, ಉಸಿರಾಟ ರಭಸವಾಗುತ್ತದೆ ಮತ್ತು ಮನಸ್ಸು ಉದ್ವೇಗಗೊಳ್ಳುತ್ತದೆ. ನಿತ್ಯಜೀವನದಲ್ಲಿ ಎದುರಾಗಬಹುದಾದ ಹೊರಗಣ ವಿಪತ್ತುಗಳನ್ನು ಎದುರಿಸಲು ಅಥವಾ ಅವುಗಳಿಂದ ತಪ್ಪಿಸಿಕೊಳ್ಳಲು ಈ ಮಾರ್ಪಾಡುಗಳು ನೆರವಾಗುತ್ತವೆ. ಆದರೆ, ಕೆಲವೊಮ್ಮೆ ನರಮಂಡಲದ ಈ ಕಾರ್ಯಸಂಯೋಜನೆ ಬಿಗಡಾಯಿಸಿಬಿಡುತ್ತದೆ. ದೀರ್ಘಕಾಲದ ಉದ್ವೇಗ, ಬಿಡುವಿಲ್ಲದ ಕಾರ್ಯಭಾರ, ಅತಿಯಾದ ಕಾಫಿ-ಟೀ ಸೇವನೆಯಂತಹ ಆಧುನಿಕ ಜೀವನಶೈಲಿಯ ಒತ್ತಡಗಳಿಂದಾಗಿ ಉತ್ತೇಜಕ ನರಮಂಡಲದ ಕಾರ್ಯಗಳು ಸಮಾಧಾನಕ್ಕೆ ಬರದೇ, ತ್ರಿಶಂಕುಸ್ಥಿತಿಯಲ್ಲಿಯೇ ಉಳಿದುಬಿಡುತ್ತವೆ. ಉತ್ತೇಜಕ ನರಮಂಡಲದ ಈ ತ್ರಿಶಂಕುಸ್ಥಿತಿಯನ್ನೇ 'ಸ್ಟ್ರೆಸ್' ಎಂದು ಕರೆಯುವುದು. 'ಸ್ಟ್ರೆಸ್'ನ ಪರಿಣಾಮವಾಗಿ ಜೀರ್ಣಾಂಗಗಳ ಸಮಸ್ಯೆಗಳು, ಅಧಿಕ ರಕ್ತದ ಒತ್ತಡ, ಮಧುಮೇಹ, ಮೈಕೈನೋವು, ನಿರುತ್ಸಾಹ ಮುಂತಾದ ಬೇನೆಗಳು ಕಾಣಿಸಿಕೊಳ್ಳುತ್ತವೆ.

ನಿಸರ್ಗದ ಮಡಿಲಿನಲ್ಲಿ ಮಾಡುವ ವನಸ್ನಾನ ಇಂತಹ ಬೇನೆಗಳಿಗಿರುವ ರಾಮಬಾಣ. ವನವಿಹಾರ ಉತ್ತೇಜಕಮಂಡಲದ ಚಟುವಟಿಕೆಗಳನ್ನು ಕಡಿಮೆ ಮಾಡಿ, ಉಪಶಾಮಕಮಂಡಲದ ಚಟುವಟಿಕೆಗಳನ್ನು ಹೆಚ್ಚುಮಾಡಿ, ಶರೀರ-ಮನಸ್ಸುಗಳನ್ನು ಸಮಸ್ಥಿತಿಗೆ ತರುತ್ತದೆ. 'ನೇಚರ್ ಸೈಂಟಿಫಿಕ್ ರಿಪೋರ್ಟ್ಸ್' ಪತ್ರಿಕೆಯಲ್ಲಿ ಪ್ರಕಟಗೊಂಡ ಸಂಶೋಧನೆಯೊಂದರ ಪ್ರಕಾರ ವಾರದಲ್ಲಿ ಕನಿಷ್ಠ ಎರಡು ಗಂಟೆಗಳ ಕಾಲವನ್ನಾದರೂ ಉದ್ಯಾನಗಳಲ್ಲಿ, ಉಪವನಗಳಲ್ಲಿ ಕಳೆಯುವುದರಿಂದ ಸ್ವಾಸ್ಥ್ಯವರ್ಧನೆಗೆ ಅಮಿತವಾದ ಲಾಭವಿದೆ. ಈ ಅರ್ಥದಲ್ಲಿ ಬೆಂಗಳೂರಿನ ಲಾಲ್‌ಬಾಗ್, ಮೈಸೂರಿನ ಕುಕ್ಕರಹಳ್ಳಿ ಕೆರೆ, ತುಮಕೂರಿನ ಅಮಾನಿಕೆರೆ ಉದ್ಯಾನ ಮುಂತಾದ ಸ್ಥಳಗಳು ನಗರವಾಸಿಗಳಿಗೆ ನಿಜವಾದ ಸ್ವಾಸ್ಥ್ಯಾಲಯಗಳು, ದೇವಾಲಯಗಳು. ಇಂತಹ ದೇವಾಲಯಗಳ ನಿರ್ಮಾಣ ನಮ್ಮ ಸರ್ಕಾರಗಳಿಗೆ ಮುಖ್ಯ ಆದ್ಯತೆಯಾಗಬೇಕು.

ಸೃಜನಶೀಲತೆಯನ್ನು ಅರಳಿಸುವುದರಲ್ಲಿಯೂ ವನವಿಹಾರದ ಪಾತ್ರ ಮಹತ್ತ್ವದ್ದು. ಪ್ರಸಿದ್ಧ ವಿಜ್ಞಾನಿಯಾದ ಚಾರ್ಲ್ಸ್ ಡಾರ್ವಿನ್ ತನ್ನ ಶಾಸ್ತ್ರಚಿಂತನವನ್ನು ನಡೆಸುತ್ತಿದ್ದದ್ದು ನಿತ್ಯದ ಉಪವನವಿಹಾರದಲ್ಲೇ. ದೀರ್ಘಾಯುಷಿಗಳೂ, ಕನ್ನಡದ ಮೇರುಸಾಹಿತಿಗಳೂ ಆದ ಕುವೆಂಪು, ಮಾಸ್ತಿ, ಡಿವಿಜಿ ಮೊದಲಾದವರು ತಮ್ಮ ನಿತ್ಯದ ವಾಯುವಿಹಾರಕ್ಕೆ ಅತಿಹೆಚ್ಚಿನ ಬೆಲೆಯನ್ನು ಕೊಟ್ಟಿದ್ದರು. ಮಾಸ್ತಿಯವರು ಈ ಬಗ್ಗೆ ತಮ್ಮ 'ಭಾವ'ದಲ್ಲಿ ಹೀಗೆ ಬರೆದಿದ್ದಾರೆ: 'ಒಂದು ಗುಡ್ಡವನ್ನು ಹತ್ತಿ ಇಳಿದು, ಮರಗಳ ಸಾಲಿನ ಅಡಿಯಲ್ಲಿ ನಡೆದು, ಇಲ್ಲಿ ಬಾವಿ ಮಂಟಪ, ಅಲ್ಲಿ ನೀರಿನ ಕಾಲುವೆ, ಇನ್ನೊಂದರಲ್ಲಿ ತೋಪು, ಅಲ್ಲಿ ದೂರದಲ್ಲಿ ಹೊಸಕೆರೆಹಳ್ಳಿಯ ಕೆರೆ, ಇಲ್ಲಿ ಬೆಟ್ಟದ ಮೇಲೆ ಒಂದು ದೇವಾಲಯ, ಈ ಆವರಣದಲ್ಲಿ ಒಂದು ಸುತ್ತು ಹಾಕಿ ಬರುವ ಹೊತ್ತಿಗೆ ಜೀವ ಅಮೃತಪಾನ ಮಾಡಿ ಬಂದಂತೆ ಉಲ್ಲಾಸಗೊಂಡಿರುವುದು. ಎರಡು ವರ್ಷ ನಾನು ಈ ಸುಖವನ್ನು ಸತತವಾಗಿ ಅನುಭವಿಸಿದೆನು. ಅದರ ನೆನಪೂ ಈಗ ಚೇತನಕ್ಕೆ ಉಲ್ಲಾಸವನ್ನು ತರಬಲ್ಲದು.'

ಚೇತನಕ್ಕೆ ಉಲ್ಲಸವೀಯುವ ವನವಿಹಾರವನ್ನು ನೀವೂ ರೂಢಿಸಿಕೊಳ್ಳುವಿರಲ್ಲವೇ? ಯುಗಾದಿಯ ಸಂಕಲ್ಪ ಇದಾಗಬಹುದಲ್ಲವೇ

(ಲೇಖಕರು ಆಯುರ್ವೇದ ವೈದ್ಯರು)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ


ತ್ರಿಕೋನ ಮಿತಿಯ ಕೆಲವು ಅನ್ವಯಗಳು

ಗಣಿತ

ಪೀಠಿಕೆ

ನಮ್ಮ ಸುತ್ತಮುತ್ತಲಿನ ಜಗತ್ತಿನಲ್ಲಿ ತ್ರಿಕೋನಮಿತಿ ಹೇಗೆ ಬಳಸುತ್ತಿದ್ದೇವೆಂದು ನೀವು ತಿಳಿಯಬೇಕಿದೆ. ಎಲ್ಲಾ ಕಡೆಗಳಲ್ಲಿಯೂ ಪಂಡಿತರು ಅಭ್ಯಸಿಸುತ್ತಿದ್ದ ಪುರಾತನ ವಿಷಯಗಳಲ್ಲಿ ತ್ರಿಕೋನ ಮಿತಿಯೂ ಒಂದು. ತ್ರಿಕೋನ ಮಿತಿಯ ಅವಶ್ಯಕತೆ ಇದುದ್ದರಿಂದ ಇದರ ಅನ್ವೇಷಣೆಯಾಯಿತು. ಪುರಾತನ ಕಾಲದಲ್ಲಿ ಖಗೋಳಶಾಸ್ತ್ರಜ್ಞರು ಭೂಮಿಯಿಂದ ಗ್ರಹಗಳಿಗೆ ಮತ್ತು ನಕ್ಷತ್ರಗಳಿರುವ ದೂರವನ್ನು ಅಳೆಯಲು ಬಳಸುತ್ತಿದ್ದರು.


ತ್ರಿಕೋನಮಿತಿಯನ್ನು ಭೂಗೋಳ ಮತ್ತು ಸಮುದ್ರಯಾನದಲ್ಲಿ ಬಳಸುತ್ತಿದ್ದರು. ತ್ರಿಕೋನ ಮಿತಿಯ ಜ್ಞಾನವನ್ನು ನಕ್ಷತ್ರಗಳ ರಚನೆ ಅಕ್ಷಾಂಶ ಮತ್ತು ರೇಖಾಂಶಗಳಿಗೆ ಸಂಬಂಧಿಸಿದಂತೆ ದ್ವೀಪಗಳ ಸ್ಥಾನವನ್ನು ಗುರುತಿಸಲು ಬಳಸಲಾಗುತ್ತಿತ್ತು.



ಸರ್ವೇಯರ್‌ಗಳು ತ್ರಿಕೋನ ಮಿತಿಯ ಅಂಶಗಳನ್ನು ಶತಮಾನಗಳಿಂದಲೇ ಬಳಕೆ ಮಾಡುತ್ತಿದ್ದು ಕಂಡುಬಂದಿದೆ. ಬ್ರಿಟಿಷ್ ಭಾರತದಲ್ಲಿ ತ್ರಿಕೋನ ಮಿತಿಯನ್ನು ಸಮೀಕ್ಷಾ ಯೋಜನೆಯೆಂದು ಪರಿಗಣಿಸಲಾಗಿದೆ. ಇದಕ್ಕಾಗಿ ಎರಡು ಥಿಯೋಡೊಲೈಟ್ ನಿರ್ಮಿಸಲಾಗಿತ್ತು. 1852 ರಲ್ಲಿ ನಡೆದ ಸಮೀಕ್ಷೆಯಲ್ಲಿ ಪ್ರಪಂಚದ ಅತಿ ದೊಡ್ಡ ಪರ್ವತದ ಎತ್ತರವನ್ನು ಕಂಡು ಹಿಡಿಯಲಾಗಿತ್ತು. ಸುಮಾರು 160 ಕಿ.ಮೀ ದೂರದಿಂದ 6 ವಿವಿಧ ಸ್ಥಳದಿಂದ ಲೆಕ್ಕಾಚಾರ ಮಾಡಲಾಗಿತ್ತು. ಪರ್ವತದ ಎತ್ತರವನ್ನು ಥಿಯೋಡೊಲೈಟ್‌ಗಳು ಬಳಸಿ ಅದರ ಎತ್ತರವನ್ನು ಕಂಡು ಹಿಡಿದ ಜಾರ್ಜ್ ಎವರೆಸ್ಟ್‌ರವರ ಹೆಸರಿನಲ್ಲಿ ಈ ಪರ್ವತವನ್ನು ಮೌಂಟ್ ಎವರೆಸ್ಟ್ ಪರ್ವತ ಎಂದು ಕರೆಯಲಾಯಿತು. ಇದಕ್ಕಾಗಿ ಬಳಸಿದ ಥಿಯೋಡೊಲೈಟ್‌ಗಳನ್ನು ಈಗಲೂ ಸಹ ಡೆಹ್ರಾಡೂನ್‌ನಲ್ಲಿರುವ ಸರ್ವೆ ಆಫ್ ಇಂಡಿಯಾದ ವಸ್ತು ಸಂಗ್ರಹಾಲಯದಲ್ಲಿ ಇರಿಸಿದೆ.


ಎತ್ತರ ಮತ್ತು ದೂರ

ವಿದ್ಯಾರ್ಥಿಯು ಗಾಳಿಪಟವನ್ನು ನೋಡುತ್ತಿದ್ದಾನೆ ಎಂದುಕೊಳ್ಳೋಣ. ಆಗ ವಿದ್ಯಾರ್ಥಿಯ ಕಣ್ಣಿನಿಂದ ಗಾಳಿಪಟಕ್ಕೆ ಎಳೆದ ರೇಖೆಯನ್ನು ದೃಷ್ಟಿರೇಖೆ ಎನ್ನುತ್ತಾರೆ. ದೃಷ್ಟಿರೇಖೆಯು ವೀಕ್ಷಕನ ಕಣ್ಣಿನಿಂದ ವೀಕ್ಷಕನು ಗಮನಿಸುತ್ತಿರುವ ವಸ್ತುವಿನ ಮೇಲಿನ ಒಂದು ಬಿಂದುವನ್ನು ಸೇರಿಸುವಂತೆ ಎಳೆದ ರೇಖೆಯಾಗಿದೆ. ವೀಕ್ಷಿಸುತ್ತಿರುವ ಒಂದು ಬಿಂದುವು ಕ್ಷಿತಿಜ ಮಟ್ಟದಿಂದ ಮೇಲಿದ್ದರೆ, ಅಂದರೆ ಒಂದು ವಸ್ತುವನ್ನು ನೋಡಲು ನಮ್ಮ ತಲೆಯನ್ನು ಮೇಲೆತ್ತಿದ ಸಂದರ್ಭದಲ್ಲಿ ದೃಷ್ಟಿರೇಖೆ ಮತ್ತು ಕ್ಷಿತಿಜ ರೇಖೆಯ ನಡುವೆ ಏರ್ಪಟ್ಟ ಕೋನವನ್ನು ವೀಕ್ಷಿಸುತ್ತಿರುವ ಬಿಂದುವಿನ ಉನ್ನತ ಕೋನ ಎನ್ನುತ್ತೇವೆ.



ಉಪ್ಪರಿಗೆ ಮೇಲೆ ಕುಳಿತಿರುವ ಹುಡುಗಿಯೊಬ್ಬಳು ಕೆಳಗೆ ನೋಡುತ್ತಾ ಚೆಂಡನ್ನು ವೀಕ್ಷಿಸುತ್ತಾಳೆ. ಈ ಪ್ರಕರಣದಲ್ಲಿ ದೃಷ್ಟಿ ರೇಖೆಯು ಕ್ಷಿತಿಜ ಮಟ್ಟದಿಂದ ಕೆಳಗಿದೆ ಈ ರೀತಿಯಾಗಿ ದೃಷ್ಟಿ ರೇಖೆ ಮತ್ತು ಕ್ಷಿತಿಜ ರೇಖೆಯೊಡನೆ ಉಂಟಾದ ಕೋನವನ್ನು ಅವನತ ಕೋನ ಎನ್ನುತ್ತಾರೆ.

ವೀಕ್ಷಿಸುತ್ತಿರುವ ಒಂದು ಬಿಂದುವು ಕ್ಷಿತಿಜ ಮಟ್ಟದಿಂದ ಕೆಳಗಿದ್ದರೆ ಅಂದರೆ ಒಂದು ವಸ್ತುವನ್ನು ನೋಡಲು ನಮ್ಮ ತಲೆಯನ್ನು ಕೆಳಗಿಳಿಸಿದ ಸಂದರ್ಭದಲ್ಲಿ ದೃಷ್ಟಿರೇಖೆ ಮತ್ತು ಅಷ್ಟರೇಖೆ ನಡುವೆ ಉಂಟಾದ ಕೋನವನ್ನು ವೀಕ್ಷಿಸುತ್ತಿರುವ ಬಿಂದುವಿನ ಅವನತ ಕೋನ ಎನ್ನುತ್ತೇವೆ.



ΔABC ಯಲ್ಲಿ C ಸಂಬಂಧಿಸಿದಂತೆ AB ಯು ಅಭಿಮುಖ ಬಾಹುವಾಗಿದೆ. ಈಗ ನಾವು ಯಾವ ತ್ರಿಕೋನ ಮಿತಿ ಅನುಪಾತಗಳನ್ನು ಬಳಸಬಹುದು?

AB ಮತ್ತು BC ಯನ್ನು ಹೊಂದಿದ್ದರೆ ನಾವು ಇವುಗಳನ್ನು ಬಿಡಿಸುವುದರಿಂದ ನಮಗೆ

$$tonc = \frac{AB}{AC}$$ ಅಥವಾ

$$cot\ c = \frac{AC}{AB}$$

ಬೇಕಾದ ಕೋನ ಅಥವಾ ಬಾಹುಗಳ ಉದ್ದಗಳನ್ನು ಪಡೆಯಬಹುದು.

(ಮುಂದುವರಿಯುವುದು)

ಸದಿಶ ಬೀಜ ಗಣಿತ

ದ್ವಿತೀಯ ಪಿಯುಸಿ

ಗಣಿತ

ಪೀಠಿಕೆ

ನಮ್ಮ ದೈನಂದಿನ ಚಟುವಟಿಕೆಗಳಲ್ಲಿ ನಾವು ಗಮನಿಸಿದರೆ ಕೆಲವು ವಸ್ತು ವಿಷಯಗಳು ಕೇವಲ ಒಂದೇ ಒಂದು ಪರಮಾಣುವನ್ನು ಮಾತ್ರ ಹೊಂದಿರುವ ಅಂಶಗಳನ್ನು ಅದಿಶಗಳೆಂದು ಕರೆಯುತ್ತೇವೆ. ಆದರೆ ಕೆಲವು ವಿಷಯಗಳಲ್ಲಿ ನಾವು ಎರಡು ಅಂಶಗಳನ್ನು ಗಮನಿಸಬಹುದು. ಪರಿಮಾಣ ಮತ್ತು ದಿಕ್ಕು ಮುಖ್ಯವಾಗಿದ್ದರೆ ಇಂತಹ ಅಂಶಗಳನ್ನು ಸದಿಶಗಳೆಂದು ಕರೆಯುತ್ತೇವೆ. ನಾವು ಸದಿಶಗಳ ಕೆಲವು ಮೂಲ ವಿಷಯಗಳು, ಅವುಗಳ ಬೀಜಗಣಿತ ಜ್ಯಾಮಿತಿ ಲಕ್ಷಣಗಳ ಬಗ್ಗೆ ಅಧ್ಯಯನ ಮಾಡೋಣ.

ಸದಿಶ ಎಂಬ ಪದವು ವೆಕ್ಟನ್ ಎಂಬ ಲ್ಯಾಟಿನ್ ಪದದಿಂದ ಉದ್ಭವವಾಗಿದೆ. ಹೊತ್ತೊಯ್ಯುವುದು ಎಂದು ಇದರ ಅರ್ಥವಾಗಿದೆ. ಒಂದು ಸಂಕೀರ್ಣ ಸಂಖ್ಯೆಯನ್ನು ಜ್ಯಾಮಿತಿಯಲ್ಲಿ ಹೇಳುವಂತೆ ಒಂದು ದಿಶಾ ರೇಖೆಯ ಮೂಲಕ ಎರಡು ಆಯಾಮದ ಸಮತಲದಲ್ಲಿ ವ್ಯಕ್ತಪಡಿಸಬಹುದಾಗಿದೆ. ಈ ವಿವರಣೆಯು ಸದಿಶ ಸಿದ್ಧಾಂತದ ಮೊಳಕೆಯು ಕಲ್ಪನೆಗಳು ಹುಟ್ಟಿದವು. ದಿಶಾ ರೇಖೆಯನ್ನು ಸದಿಶ ಎಂದು ಮೊಟ್ಟ ಮೊದಲ ಬಾರಿಗೆ ತಮ್ಮ ಪುಸ್ತಕವಾದ ಲೆಕ್ಚ್ರ್ಸ ಆನ್ ಕ್ವಾಟರ್ನಿಯನ್ಸ್‌ನಲ್ಲಿ ಉಪಯೋಗಿಸಿದರು.

ಮೂಲಭೂತ ಪರಿಕಲ್ಪನೆಗಳು

ಸರಳರೇಖೆಯನ್ನು ರೇಖಾಖಂಡಕ್ಕೆ ಸೀಮಿತಗೊಳಿಸಿದಾಗ ಸರಳರೇಖೆ ಒಂದು ಪರಿಮಾಣ ಮತ್ತು ಎರಡರಲ್ಲಿ ಯಾವುದಾದರೂ ಒಂದು ದಿಕ್ಕನ್ನು ಸೂಚಿಸುತ್ತದೆ ಹಾಗೂ ನಮಗೆ ಒಂದು ದಿಶಾ ರೇಖಾಖಂಡ ಲಭಿಸುತ್ತದೆ. ಆದ್ದರಿಂದ ಒಂದು ದಿಶಾ ರೇಖಾಖಂಡವು ದಿಕ್ಕು ಮತ್ತು ಪರಿಮಾಣ ಎರಡನ್ನೂ ಹೊಂದಿರುತ್ತದೆ.


ವ್ಯಾಖ್ಯಾನ: ಒಂದು ಭೌತಿಕ ಅಂಶವು ಪರಿಮಾಣ ಹಾಗೂ ದಿಕ್ಕು ಇವೆರಡನ್ನೂ ಹೊಂದಿದ್ದರೆ ಅದನ್ನು ಸದಿಶ ಎಂದು ಕರೆಯುತ್ತೇವೆ. ದಿಶಾ ರೇಖಾಖಂಡವು ಒಂದು ಸದಿಶವಾಗಿದೆ ಮತ್ತು ಇದನ್ನು $\vec{AB}$ ಎಂದು ಅಥವಾ $\vec{a}$ ಎಂದು ಗುರುತಿಸುತ್ತೇವೆ.

$$A \longrightarrow B$$

$\vec{AB}$ ಸದಿಶ ಆರಂಭವಾಗುವ A ಆದಿ ಬಿಂದುವಾಗಿದ್ದು, B ಅಂತ್ಯ ಬಿಂದು ಆಗಿರುತ್ತದೆ. ಆದಿ ಬಿಂದು ಮತ್ತು ಅಂತ್ಯ ಬಿಂದುವಿನ ದೂರವನ್ನು ಸದಿಶದ ಪರಿಮಾಣ ಎಂದು ಕರೆಯುತ್ತೇವೆ ಹಾಗೂ ಅದನ್ನು $\vec{AB}$ ಎಂದು ನಮೂದಿಸುತ್ತೇವೆ. ಬಾಣದ ಗುರುತು ಸದಿಶದ ದಿಕ್ಕನ್ನು ಸೂಚಿಸುತ್ತದೆ.


ಸ್ಥಾನ ಸದಿಶ: p ಎಂಬುದು ವ್ಯೋಮದಲ್ಲಿರುವ ಒಂದು ಬಿಂದುವಾಗಿದ್ದು, ಅದರ ನಿರ್ದೇಶಾಂಕಗಳು (x,y,x) ಆಗಿದ್ದು 0(0,0,0) ಕೇಂದ್ರ ಬಿಂದುವಾದರೆ ಸದಿಶ $\vec{OP}$ ಗೆ 0 ಆದಿ ಬಿಂದುವಾಗಿದ್ದು $\vec{p}$ ಅಂತ್ಯ ಬಿಂದುವಾಗಿರುತ್ತದೆ. ಆಗ $\vec{OP}$ ಯನ್ನು ಸ್ಥಾನ ಸದಿಶ ಎಂದು ಕರೆಯುತ್ತೇವೆ.

$$1\ \vec{OP}\ 1=\sqrt{x^2 + y^2 + z^2}$$



ದಿಶಾ ಕೊಸೈನುಗಳು: $\vec{OP} = \vec{r}$ ಎಂಬುದು ಒಂದು ಸ್ಥಾನ ಸದಿಶವಾಗಿದೆ. ನಿರ್ದೇಶಕಗಳು p(x,y,z) ನ ಆಗಿದ್ದಲ್ಲಿ ಸದಿಶವು x,y ಮತ್ತು z ಅಕ್ಷರಗಳೊಂದಿಗೆ ಕ್ರಮವಾಗಿ α, β ಮತ್ತು y ಎಂಬ ಕೋನಗಳನ್ನು ಉಂಟು ಮಾಡುತ್ತದೆ. ಈ ಕೋನಗಳನ್ನು ದಿಶಾ ಕೋನಗಳು ಎನ್ನುತ್ತೇವೆ. ಈ ಕೋನಗಳ ಕೊಸೈನ ಬೆಲೆ

$cos\ \alpha,\ cos\ \beta$ ಮತ್ತು $cos\ \ \gamma$ ಗಳನ್ನು ಸದಿಶ $\vec{r}$ ದಿನಾ ಕೊಸೈನಗಳು ಎಂದು ಕರೆಯುತ್ತೇವೆ. ಅವುಗಳನ್ನು (1, m, n) ಎಂದು ಸೂಚಿಸುತ್ತೇವೆ.



OAP ಎಂಬ ಲಂಬಕೋನ ತ್ರಿಕೋನವಾಗಿದ್ದು ಅದರಲ್ಲಿ $cos\ \alpha = \frac{x}{r}$ ಆಗುತ್ತದೆ. ಅದೇ ರೀತಿ ಲಂಬಕೋನ ತ್ರಿಕೋನ OBP ಮತ್ತು OCP ಗಳಿಂದ ಕ್ರಮವಾಗಿ $cos\ \beta = \frac{Y}{r}$ ಮತ್ತು

cosಠ $\frac{Z}{r}$ ಆಗುತ್ತದೆ. ಆದ್ದರಿಂದ P ಬಿಂದುವಿನ ನಿರ್ದೇಶಕಗಳನ್ನು (1r, mr, nr) ಎಂದು ಸೂಚಿಸಬಹುದು

ಸಂಖ್ಯೆಗಳಿಂದ ಸದಿಶದ lr, mr, nr $\vec{r}$ ದಿಶಾ ಕೊಸೈನಗಳಿಗೆ ಪ್ರಮಾಣಾನುಗುಣವಾಗಿರುವುದರಿಂದ ಇದನ್ನು ಸದಿಶ $\vec{r}$ ನ ದಿಶಾ ಅನುಪಾತಗಳೆಂದು ಕರೆಯುತ್ತೇವೆ. ಮತ್ತು ಇದನ್ನು ಕ್ರಮವಾಗಿ a,b,c ಎಂದು ಸೂಚಿಸುತ್ತೇವೆ.

(ಮುಂದುವರಿಯುವುದು)



ರಾಹುಲ್–ದೀಪಕ್ ಅಬ್ಬರ; ನಾಯಕನೊಂದಿಗೆ ಅರ್ಧಶತಕದ ಜೊತೆಯಾಟ ಆಡಿದ ಕ್ರಿಸ್ ಗೇಲ್

ಸಂಜು ದಾಖಲೆಗೆ ಒಲಿಯದ ಜಯ

ಮುಂಬೈ(ಪಿಟಿಐ): ನಾಯಕನ ಪಾತ್ರದಲ್ಲಿ ಮೊದಲ ಪಂದ್ಯ ಆಡಿದ ಸಂಜು ಸ್ಯಾಮ್ಸನ್ (119; 63 ಎಸೆತ, 12 ಬೌಂಡರಿ, 7 ಸಿಕ್ಸರ್) ಅಮೋಘ ಶತಕ ಸಿಡಿಸಿ ದಾಖಲೆ ಬರೆದರು. ತಂಡವನ್ನು ಗೆಲುವಿನ ಸನಿಹ ಕೊಂಡೊಯ್ದರು. ಆದರೆ ಜಯ ದೊರಕಿಸಿಕೊಡಲು ಅವರಿಗೆ ಸಾಧ್ಯವಾಗಲಿಲ್ಲ.

ಉಭಯ ತಂಡಗಳ ನಾಯಕರ ಮೋಹಕ ಬ್ಯಾಟಿಂಗ್‌ನಿಂದಾಗಿ ರನ್ ಮಳೆ ಸುರಿದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಪಂದ್ಯದಲ್ಲಿ ಕೆ.ಎಲ್.ರಾಹುಲ್ ನಾಯಕತ್ವದ ಪಂಜಾಬ್ ಕಿಂಗ್ಸ್ ರೋಚಕ ಜಯ ಸಾಧಿಸಿತು. ವಾಂಖೆಡೆ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಪಂದ್ಯದಲ್ಲಿ ನಾಯಕ ಕೆ.ಎಲ್.ರಾಹುಲ್ (91; 50 ಎಸೆತ, 7 ಬೌಂಡರಿ, 5 ಸಿಕ್ಸರ್) ಮತ್ತು ದೀಪಕ್ ಹೂಡಾ (64;28 ಎ, 4 ಬೌಂ, 6 ಸಿ) ಅವರ ಅಬ್ಬರದಿಂದ ಪಂಜಾಬ್ 20 ಓವರ್‌ಗಳಲ್ಲಿ 6ಕ್ಕೆ 221 ರನ್ ಗಳಿಸಿತು.

ಉತ್ತರವಾಗಿ ರಾಜಸ್ಥಾನ್ ರಾಯಲ್ಸ್ 7 ವಿಕೆಟ್‌ಗಳಿಗೆ 217 ರನ್ ಗಳಿಸಿ ಸೋಲೊಪ್ಪಿಕೊಂಡಿತು. ದಿಗ್ಗಜ ಬ್ಯಾಟ್ಸ್‌ಮನ್‌ಗಳು ಬೇಗನೇ ಔಟಾಗಿ ಮರಳಿದರೂ ಏಕಾಂಗಿ ಹೋರಾಟ ನಡೆಸಿದ ಸಂಜು ಸ್ಯಾಮ್ಸನ್ ಜಯದ ಭರವಸೆ ಮೂಡಿಸಿದ್ದರು. ಜೋಸ್ ಬಟ್ಲರ್, ಶಿವಂ ದುಬೆ ಮತ್ತು ರಿಯಾನ್ ಪರಾಗ್ ನಾಯಕನಿಗೆ ಉತ್ತಮ ಬೆಂಬಲ ನೀಡಿದ್ದರು. ಅಂತಿಮ ಓವರ್‌ನ ಕೊನೆಯ ಎಸೆತದವರೆಗೂ ರಾಜಸ್ಥಾನ ತಂಡದ ಗೆಲುವಿನ ಆಸೆ ಜೀವಂತವಾಗಿತ್ತು. ಆದರೆ ಕೊನೆಯ ಎಸೆತದಲ್ಲಿ ಸಿಕ್ಸರ್ ಎತ್ತಲು ಪ್ರಯತ್ನಿಸಿದ ಸಂಜು ಕ್ಯಾಚ್ ನೀಡುವುದರೊಂದಿಗೆ ಕಿಂಗ್ಸ್ ಪಾಳಯದಲ್ಲಿ ಸಂಭ್ರಮ ಮನೆ ಮಾಡಿತು. ಐಪಿಎಲ್‌ನಲ್ಲಿ ನಾಯಕನಾಗಿ ಆಡಿದ ಮೊದಲ ಪಂದ್ಯದಲ್ಲಿ ಶತಕ ಸಿಡಿಸಿದ ಮೊದಲ ಆಟಗಾರ ಎಂಬ ಶ್ರೇಯಸ್ಸು ಸಂಜು ಪಾಲಾಯಿತು.

ಟಾಸ್ ಗೆದ್ದ ರಾಜಸ್ಥಾನ್ ರಾಯಲ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತ್ತು. ಇದೇ ಮೊದಲ ಬಾರಿ ಐಪಿಎಲ್‌ಗೆ ಆಯ್ಕೆಯಾಗಿರುವ ಸೌರಾಷ್ಟ್ರದ ಚೇತನ್ ಸಕರಿಯ ಮೊದಲ ಪಂದ್ಯದಲ್ಲೇ ಅಂತಿಮ 11ರಲ್ಲಿ ಸ್ಥಾನ ಗಿಟ್ಟಿಸಿಕೊಂಡರು. ಮೂರನೇ ಓವರ್‌ನಲ್ಲೇ ಮಯಂಕ್ ಅಗರವಾಲ್ ವಿಕೆಟ್ ಪಡೆದು ಆರಂಭಿಕ ಜೋಡಿಯ ಜೊತೆಯಾಟವನ್ನು ಅವರು ಮುರಿದರು.



ಸಂಜು ಸ್ಯಾಮ್ಸನ್ ಬ್ಯಾಟಿಂಗ್ ವೈಖರಿ– ಪಿಟಿಐ ಚಿತ್ರ

ನಂತರ ರಾಹುಲ್ ಮತ್ತು ಕ್ರಿಸ್ ಗೇಲ್ ಆಟ ಕಳೆಕಟ್ಟಿತು. ಮೋಹಕ ಬ್ಯಾಟಿಂಗ್ ಮೂಲಕ ರಾಹುಲ್ ಬೌಂಡರಿಗಳನ್ನು ಗಳಿಸುತ್ತಿದ್ದರೆ ಲಯ ಕಂಡುಕೊಳ್ಳಲು ಸ್ವಲ್ಪ ಸಮಯ ತೆಗೆದುಕೊಂಡ ಗೇಲ್ ಐದನೇ ಓವರ್‌ನಲ್ಲಿ ಮುಸ್ತಫಿಜುರ್ ರಹಮಾನ್ ಅವರನ್ನು ಬೌಂಡರಿಗೆ ಅಟ್ಟಿ ಆಕ್ರಮಣಕಾರಿ ಆಟಕ್ಕೆ ಕುದುರಿಕೊಂಡರು. ಕ್ರಿಸ್ ಮೊರಿಸ್, ಶ್ರೇಯಸ್ ಗೋಪಾಲ್ ಮತ್ತು ಬೆನ್ ಸ್ಟೋಕ್ಸ್ ಎಸೆತಗಳಲ್ಲಿ ಬೌಂಡರಿಗಳು ಹರಿದುಬಂದವು.

ಶ್ರೇಯಸ್ ಗೋಪಾಲ್ ಹಾಕಿದ ಇನಿಂಗ್ಸ್‌ನ ಏಳನೇ ಓವರ್‌ನ ಮೂರನೇ ಎಸೆತದಲ್ಲಿ ಬೌಂಡರಿ ಗೆರೆ ಬಳಿ ಕೆ.ಎಲ್.ರಾಹುಲ್ ಅವರ ಸುಲಭ ಕ್ಯಾಚ್ ಕೈಚೆಲ್ಲಿದ ಬೆನ್ ಸ್ಟೋಕ್ಸ್ ಬೌಂಡರಿಯನ್ನೂ ಬಿಟ್ಟುಕೊಟ್ಟರು. ಇದರೊಂದಿಗೆ ತಂಡದ ಮೊತ್ತ 50 ದಾಟಿತು.



ಕೆ. ಎಲ್ ರಾಹುಲ್

ಒಂಬತ್ತನೇ ಓವರ್‌ನಲ್ಲಿ ರಾಹುಲ್ ಮತ್ತು ಗೇಲ್ ನಡುವಿನ ಜೊತೆಯಾಟ ಅರ್ಧಶತಕ ದಾಟಿತು. ಆದರೆ ಮುಂದಿನ ಓವರ್‌ನಲ್ಲಿ ಯುವ ಆಟಗಾರ ರಿಯಾನ್ ಪರಾಗ್ ಕೈಗೆ ಚೆಂಡು ನೀಡಿದ ಸಂಜು ಸ್ಯಾಮ್ಸನ್ ಯಶಸ್ಸು ಕಂಡರು. ಲೆಗ್ ಸ್ಪಿನ್ನರ್ ರಿಯಾನ್ ಹಾಕಿದ ಆಫ್ ಬ್ರೇಕ್ ಎಸೆತದ ಗತಿ ನಿರ್ಣಯಿಸುವಲ್ಲಿ ಎಡವಿದ ಗೇಲ್ ಚೆಂಡನ್ನು ಬೌಂಡರಿಗೆ ಅಟ್ಟುವ ಪ್ರಯತ್ನದಲ್ಲಿ ಬೆನ್ ಸ್ಟೋಕ್ಸ್‌ಗೆ ಕ್ಯಾಚ್ ನೀಡಿದರು.

ರಾಹುಲ್–ಹೂಡಾ ಜೊತೆಯಾಟ:- ನಾಯಕನ ಜೊತೆಗೂಡಿದ ದೀಪಕ್ ಹೂಡಾ ಭರ್ಜರಿ ಹೊಡೆತಗಳ ಮೂಲಕ ತಂಡದ ಮೊತ್ತವನ್ನು ಹೆಚ್ಚಿಸಿದರು. 13ನೇ ಓವರ್‌ನ ಎರಡನೇ ಎಸೆತವನ್ನು ಸಿಕ್ಸರ್‌ಗೆ ಎತ್ತಿ ರಾಹುಲ್ 30 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಈ ಓವರ್‌ನಲ್ಲಿ ದೀಪಕ್ ಹೂಡಾ ಕೂಡ ಎರಡು ಸಿಕ್ಸರ್ ಗಳಿಸಿದರು. ಶ್ರೇಯಸ್ ಹಾಕಿದ 14ನೇ ಓವರ್‌ನಲ್ಲಿ ದೀಪಕ್ ಮೂರು ಸಿಕ್ಸರ್ ಸಿಡಿಸಿದರು. 16ನೇ ಓವರ್‌ನ ಮೊದಲನೇ ಎಸೆತದಲ್ಲಿ ಕ್ರಿಸ್ ಮೊರಿಸ್ ಅವರನ್ನು ಸಿಕ್ಸರ್‌ಗೆ ಅಟ್ಟಿದರು. ಮೂರನೇ ಎಸೆತದಲ್ಲಿ ಒಂದು ರನ್ ಗಳಿಸಿ ಅರ್ಧಶತಕ ಪೂರೈಸಿದರು. 50 ರನ್ ಗಳಿಸಲು ಅವರು ತೆಗೆದುಕೊಂಡದ್ದು 20 ಎಸೆತ ಮಾತ್ರ. ಕ್ರಿಸ್ ಮೊರಿಸ್ ಅವರ ಎಸೆತದಲ್ಲಿ ಸಿಕ್ಸರ್ ಗಳಿಸುವ ಪ್ರಯತ್ನದಲ್ಲಿ ಹೂಡಾ ಕ್ಯಾಚ್ ನೀಡಿ ಮರಳಿದರು. ಎಡಕ್ಕೆ ಜಿಗಿದು ಸಕರಿಯ ಪಡೆದ ಮೋಹಕ ಕ್ಯಾಚ್‌ಗೆ ಪೂರನ್ ಬಲಿಯಾದರು. ಕೊನೆಯ ಓವರ್‌ನಲ್ಲಿ ಬೌಂಡರಿ ಗೆರೆಯ ಬಳಿ ರಾಹುಲ್ ತೆವಾಟಿಯಾ ಮಾಡಿದ ಮ್ಯಾಜಿಕ್‌ಗೆ ರಾಹುಲ್ ವಿಕೆಟ್ ಕಳೆದುಕೊಂಡರು.

ಸ್ಕೋರ್‌ಕಾರ್ಡ್

ಪಂಜಾಬ್ ಕಿಂಗ್ಸ್ 6ಕ್ಕೆ 221 (20 ಓವರ್‌ಗಳಲ್ಲಿ)

ಕೆ.ಎಲ್.ರಾಹುಲ್ ಸಿ ರಾಹುಲ್ ತೆವಾಥಿಯಾ ಬಿ ಚೇತನ್ ಸಕರಿಯ	91
ಮಯಂಕ್ ಅಗರವಾಲ್ ಸಿ ಸಂಜು ಸ್ಯಾಮ್ಸನ್ ಬಿ ಚೇತನ್ ಸಕರಿಯ	14
ಕ್ರಿಸ್ ಗೇಲ್ ಸಿ ಬೆನ್ ಸ್ಟೋಕ್ಸ್ ಬಿ ರಿಯಾನ್ ಪರಾಗ್	40
ದೀಪಕ್ ಹೂಡಾ ಸಿ ರಿಯಾನ್ ಪರಾಗ್ ಬಿ ಕ್ರಿಸ್ ಮೊರಿಸ್	64
ನಿಕೋಲಸ್ ಪೂರನ್ ಸಿ ಚೇತನ್ ಸಕರಿಯ ಬಿ ಕ್ರಿಸ್ ಮೊರಿಸ್	00
ಶಾರೂಖ್ ಖಾನ್ ಔಟಾಗದೆ	06
ಜೇ ರಿಚರ್ಡ್ಸನ್ ಸಿ ಕ್ರಿಸ್ ಮೊರಿಸ್ ಬಿ ಚೇತನ್ ಸಕರಿ	00
ಇತರೆ (ನೋಬಾಲ್ 2, ವೈಡ್ 4)	06

ವಿಕೆಟ್ ಪತನ: 1-22 (ಮಯಂಕ್ ಅಗರವಾಲ್, 2.4), 2-89 (ಕ್ರಿಸ್ ಗೇಲ್, 9.5), 3-194 (ದೀಪಕ್ ಹೂಡಾ, 17.3), 4-201 (ನಿಕೋಲಸ್ ಪೂರನ್, 17.6), 5-220 (ಕೆ.ಎಲ್.ರಾಹುಲ್, 19.2), 6-221 (ಜೇ ರಿಚರ್ಡ್ಸನ್, 19.6)

ಬೌಲಿಂಗ್: ಚೇತನ್ ಸಕರಿಯ 4–0–31–3, ಮುಸ್ತಫಿಜುರ್ ರಹಮಾನ್ 4–0–45–0, ಕ್ರಿಸ್ ಮೊರಿಸ್ 4–0–41–2, ಶ್ರೇಯಸ್ ಗೋಪಾಲ್ 3–0–40–0, ಬೆನ್ ಸ್ಟೋಕ್ಸ್ 1–0–12–0, ರಾಹುಲ್ ತೆವಾಟಿಯಾ 2–0–25–0, ರಿಯಾನ್ ಪರಾಗ್ 1– 0–7–1, ಶಿವಂ ದುಬೆ 1–0–20–0

ರಾಜಸ್ಥಾನ್ ರಾಯಲ್ಸ್ 7ಕ್ಕೆ 217 (20 ಓವರ್‌ಗಳಲ್ಲಿ)

ಬೆನ್ ಸ್ಟೋಕ್ಸ್ ಸಿ ಮತ್ತು ಬಿ ಮೊಹಮ್ಮದ್ ಶಮಿ	00
ಮನನ್ ವೊಹ್ರಾ ಸಿ ಮತ್ತು ಬಿ ಅರ್ಷದೀಪ್ ಸಿಂಗ್	12
ಸಂಜು ಸ್ಯಾಮ್ಸನ್ ಸಿ ದೀಪಕ್ ಹೂಡಾ ಬಿ ಅರ್ಷದೀಪ್ ಸಿಂಗ್	119
ಜೋಸ್ ಬಟ್ಲರ್ ಬಿ ಜೇ ರಿಚರ್ಡ್ಸನ್	25
ಶಿವಂ ದುಬೆ ಸಿ ದೀಪಕ್ ಹೂಡಾ ಬಿ ಅರ್ಷದೀಪ್ ಸಿಂಗ್	23
ರಿಯಾನ್ ಪರಾಗ್ ಸಿ ಕೆ.ಎಲ್.ರಾಹುಲ್ ಬಿ ಮೊಹಮ್ಮದ್ ಶಮಿ	25
ರಾಹುಲ್ ತೆವಾಟಿಯಾ ಸಿ ಕೆ.ಎಲ್.ರಾಹುಲ್ ಬಿ ರೆಲಿ ಮೆರೆಡಿತ್	02
ಕ್ರಿಸ್ ಮೊರಿಸ್ ಔಟಾಗದೆ	02
ಇತರೆ (ಲೆಗ್‌ಬೈ 2, ನೋಬಾಲ್ 1, ವೈಡ್ 6)	09

ವಿಕೆಟ್ ಪತನ: 1-0 (ಬೆನ್ ಸ್ಟೋಕ್ಸ್, 0.3), 2-25 (ಮನನ್ ವೊಹ್ರಾ, 3.2), 3-70 (ಜೋಸ್ ಬಟ್ಲರ್, 7.3), 4-123 (ಶಿವಂ ದುಬೆ, 12.4), 5-175 (ರಿಯಾನ್ ಪರಾಗ್, 16.2), 6-201 (ರಾಹುಲ್ ತೆವಾಟಿಯಾ, 18.1), 7-217 (ಸಂಜು ಸ್ಯಾಮ್ಸನ್, 19.6)

ಬೌಲಿಂಗ್: ಮೊಹಮ್ಮದ್ ಶಮಿ 4–0–33–2, ಜೇ ರಿಚರ್ಡ್ಸನ್ 4–0–55–1, ಅರ್ಷದೀಪ್ ಸಿಂಗ್ 4–0–35–3, ರೆಲಿ ಮೆರೆಡಿತ್ 4–0–49–1, ಮುರುಗನ್ ಅಶ್ವಿನ್ 4–0–43–0

ಫಲಿತಾಂಶ: ಪಂಜಾಬ್ ಕಿಂಗ್ಸ್‌ಗೆ 4 ರನ್‌ಗಳ ಜಯ

ಮಹಿಳಾ ಟಿ20 ಚಾಲೆಂಜ್: ಮೂರೇ ತಂಡಗಳ ಸ್ಪರ್ಧೆ ಸಾಧ್ಯತೆ

ನವದೆಹಲಿ (ಪಿಟಿಐ): ಮಹಿಳೆಯರ ಟ್ವೆಂಟಿ–20 ಚಾಲೆಂಜ್ ಟೂರ್ನಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಮೂರು ತಂಡಗಳೊಂದಿಗೇ ನಡೆಸುವ ಸಾಧ್ಯತೆಯಿದೆ. ಪ್ರತಿ ವರ್ಷದಂತೆ ಐಪಿಎಲ್ ಟೂರ್ನಿಯ ಪ್ಲೇ ಆಫ್ ಸಂದರ್ಭದಲ್ಲಿ ಮಹಿಳಾ ಚಾಲೆಂಜ್ ಟೂರ್ನಿ ಕೂಡ ನಡೆಯಲಿದೆ.

ಹೋದ ವರ್ಷ ಬಿಸಿಸಿಐ, ಟೂರ್ನಿಯ ತಂಡಗಳ ಸಂಖ್ಯೆಯನ್ನು ನಾಲ್ಕಕ್ಕೆ ಹೆಚ್ಚಿಸುವ ಚಿಂತನೆ ನಡೆಸಿತ್ತು. ಆದರೆ ಕೋವಿಡ್–19 ಪಿಡುಗಿನ ಹಿನ್ನೆಲೆಯಲ್ಲಿ ಮೂರು ತಂಡಗಳೊಂದಿಗೆ ಮುಂದುವರಿಯುವ ನಿರೀಕ್ಷೆಯಿದೆ.



'ಸದ್ಯ ಟೂರ್ನಿಯನ್ನು ಮೂರು ತಂಡಗಳೊಂದಿಗೆ ನಡೆಸುವ ಚಿಂತನೆ ಇದೆ. ಈ ಕುರಿತು ಅಂತಿಮ ನಿರ್ಧಾರವನ್ನು ಶೀಘ್ರ ತೆಗೆದುಕೊಳ್ಳಲಾಗುವುದು. ಟೂರ್ನಿಯನ್ನು ದೆಹಲಿಯಲ್ಲಿ ಆಯೋಜಿಸುವ ಅವಕಾಶವಿದೆ. ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ಆಟಗಾರ್ತಿಯರ ಪಾಲ್ಗೊಳ್ಳುವಿಕೆ ಕುರಿತು ಮಾತುಕತೆ ನಡೆಯುತ್ತಿದೆ' ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ನಾಲ್ಕು ಪಂದ್ಯಗಳನ್ನು ಒಳಗೊಂಡ, ಕಳೆದ ಬಾರಿಯ ಟೂರ್ನಿಯು ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಶಾರ್ಜಾದಲ್ಲಿ ನಡೆದಿತ್ತು. ಏ. 16ರಂದು ಬಿಸಿಸಿಐ ಅಪೆಕ್ಸ್ ಸಮಿತಿ ಸಭೆಯಲ್ಲಿ ತಂಡಗಳನ್ನು ನಿರ್ಧರಿಸುವ ಕುರಿತು ಚರ್ಚೆ ನಡೆಯಲಿದೆ. ಭಾರತ ಮಹಿಳಾ ತಂಡಕ್ಕೆ ನೆರವು ಸಿಬ್ಬಂದಿಯನ್ನು ನೇಮಿಸುವ ಮತ್ತು ಮುಂಬರುವ ಸರಣಿಗಳ ಕುರಿತು ಚರ್ಚಿಸಲಾಗುತ್ತದೆ.

ಆರ್‌ಸಿಬಿ– ಕೋಟಕ್ ಮಹೀಂದ್ರ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಫ್ರಾಂಚೈಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದೊಂದಿಗೆ ಕೋಟಕ್ ಮಹೀಂದ್ರ ಬ್ಯಾಂಕ್ ಲಿಮಿಟೆಡ್ (ಕೆಎಂಬಿಎಲ್) ಶುಕ್ರವಾರ ಒಪ್ಪಂದ ಮಾಡಿಕೊಂಡಿತು.

ಇದೇ ಮೊದಲ ಬಾರಿಗೆ ಆರ್‌ಸಿಬಿಯೊಂದಿಗೆ ಕೋಟಕ್ ಪಾಲುದಾರಿಕೆ ಮಾಡಿಕೊಂಡಿತು. ಈ ವೇಳೆ ಕೆಎಂಬಿಎಲ್ 'ಕೋಟಕ್ ಮೈಟೀಮ್ ಇಮೇಜ್ ಕಾರ್ಡ್'ಅನ್ನು ಪರಿಚಯಿಸಿದೆ. ಇದು ಡೆಬಿಟ್ ಮತ್ತು ಕ್ರೆಡಿಟ್ ಸೌಲಭ್ಯವನ್ನು ಹೊಂದಿದ್ದು, ವಿಶೇಷವಾಗಿ ಆರ್‌ಸಿಬಿ ಅಭಿಮಾನಿಗಳಿಗೆಂದೇ ವಿನ್ಯಾಸಗೊಳಿಸಲಾಗಿದೆ ಎಂದು ಕೆಎಂಬಿಎಲ್ ಹೇಳಿದೆ.

ಮೊದಲ ಜಯದ ನಿರೀಕ್ಷೆಯಲ್ಲಿ ಚಾಂಪಿಯನ್ನರು

ಚೆನ್ನೈ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಪ್ರತಿರೋಧವನ್ನು ಸಮರ್ಥವಾಗಿ ನಿಭಾಯಿಸಿ ಮೊದಲ ಪಂದ್ಯದಲ್ಲಿ ಗೆಲುವಿನ ನಗೆ ಸೂಸಿರುವ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಎರಡನೇ ಪಂದ್ಯದಲ್ಲಿ ಮಂಗಳವಾರ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಕಣಕ್ಕೆ ಇಳಿಯಲಿದೆ.

ಹಿಂದಿನ ಎರಡು ಆವೃತ್ತಿಗಳಲ್ಲಿ ಪ್ಲೇ ಆಫ್ ಹಂತಕ್ಕೇರಲು ವಿಫಲವಾಗಿರುವ ಕೋಲ್ಕತ್ತ ಈ ಬಾರಿ ಯಾವುದೇ ತಂಡದ ಸವಾಲನ್ನು ಸ್ವೀಕರಿಸಲು ಸಜ್ಜಾಗಿದೆ ಎಂಬುದನ್ನು ಮೊದಲ ಪಂದ್ಯದಲ್ಲಿ ಸಾಬೀತು ಮಾಡಿದೆ.

ಭಾನುವಾರ ಸನ್‌ರೈಸರ್ಸ್ ಎದುರಿನ ಪಂದ್ಯದಲ್ಲಿ ನಾಯಕ ಏಯಾನ್ ಮಾರ್ಗನ್ ಹೆಣೆದ ತಂತ್ರಗಳು ಕೂಡ ಫಲ ನೀಡಿದ್ದವು. ಸುನಿಲ್ ನಾರಾಯಣ್ ಅವರಿಗೆ ವಿಶ್ರಾಂತಿ ನೀಡಿ ನಿತೀಶ್ ರಾಣಾ ಮತ್ತು ಶುಭಮನ್ ಗಿಲ್ ಅವರನ್ನು ಇನಿಂಗ್ಸ್ ಆರಂಭಿಸಲು ಕಳುಹಿಸಿದ ಮಾರ್ಗನ್ ಯಶಸ್ಸು ಕಂಡಿದ್ದರು.

ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತನ್ನ ಮೊದಲ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಎರಡು ವಿಕೆಟ್‌ಗಳಿಂದ ಸೋತಿತ್ತು. ಈ ಆಘಾತದಿಂದ ಚೇತರಿಸಿಕೊಳ್ಳಲು ರೋಹಿತ್ ಶರ್ಮಾ ಬಳಗ ಪ್ರಯತ್ನಿಸಲಿದೆ. ಕೋಲ್ಕತ್ತಕ್ಕೆ ಮೊದಲ ಪಂದ್ಯದಲ್ಲಿ ಗಳಿಸಿದ ಗೆಲುವಿನ ಮನೋಬಲದ ಬೆಂಬಲವಿದೆ. ಮುಂಬೈ ಇಂಡಿಯನ್ಸ್ ವಿರುದ್ಧ ಒಟ್ಟಾರೆ 21 ಪಂದ್ಯಗಳನ್ನು ಸೋತಿರುವ ನೈಟ್ ರೈಡರ್ಸ್ ಹಿಂದಿನ 12 ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಜಯ ಕಂಡಿದೆ. ಆರಂಭಿಕ ಬ್ಯಾಟ್ಸ್‌ಮನ್ ಶುಭ ಮನ್ ಗಿಲ್ ಚುಟುಕು ಕ್ರಿಕೆಟ್‌ನಲ್ಲಿ ರನ್ ಕಲೆ ಹಾಕಲು ಪರದಾಡುತ್ತಿರುವುದು ಕೋಲ್ಕತ್ತ ತಂಡದ ಆತಂಕಕ್ಕೆ ಕಾರಣವಾಗಿದೆ. ಮುಂಬೈ ಇಂಡಿಯನ್ಸ್‌ನ ಪ್ರಮುಖ ಬ್ಯಾಟ್ಸ್‌ಮನ್ ಕ್ವಿಂಟನ್ ಡಿ ಕಾಕ್ ಇನ್ನೂ ಕ್ವಾರಂಟೈನ್‌ನಲ್ಲಿದ್ದು ಅವರ ಬದಲಿಗೆ ಕಣಕ್ಕೆ ಇಳಿದಿದ್ದ ಕ್ರಿಸ್ ಲಿನ್ ಭರವಸೆ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್, ಹಾರ್ದಿಕ್ ಮತ್ತು ಕೃಣಾಲ್ ಪಾಂಡ್ಯ ಫಾರ್ಮ್ ಕಂಡುಕೊಳ್ಳಬೇಕಾದ ಅಗತ್ಯವಿದೆ.

ಮುಖಾಮುಖಿ ಪಂದ್ಯಗಳು 27

ಮುಂಬೈ ಜಯ 21
ಕೋಲ್ಕತ್ತ ಜಯ 6

	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
ಕೋಲ್ಕತ್ತ	232	67
ಮುಂಬೈ	210	108

ಪಂದ್ಯ ಆರಂಭ ಸಂಜೆ 7.30

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರು –ಪಿಟಿಐ ಚಿತ್ರ

ಬ್ಯಾಟಿಂಗ್ ಬಳಗ ಬಲಿಷ್ಠವಾಗಿದೆ: ಮಾರ್ಗನ್: 'ಕೋಲ್ಕತ್ತ ತಂಡ ಬಲಿಷ್ಠ ಬ್ಯಾಟಿಂಗ್ ಬಳಗ ಹೊಂದಿದ್ದು ಮೊದಲ ಪಂದ್ಯದಲ್ಲಿ ನಮ್ಮ ಶಕ್ತಿ ಏನೆಂದು ಸಾಬೀತಾಗಿದೆ' ಎಂದು ನಾಯಕ ಏಯಾನ್ ಮಾರ್ಗನ್ ಅಭಿಪ್ರಾಯಪಟ್ಟರು.

ತಂಡ ಎಲ್ಲ ವಿಭಾಗಗಳಲ್ಲೂ ಬಲಿಷ್ಠವಾಗಿದೆ. ಅದರಲ್ಲೂ ಸ್ಫೋಟಕ ಬ್ಯಾಟ್ಸ್‌ಮನ್‌ಗಳು ಬೆನ್ನೆಲುಬು ಆಗಿದ್ದಾರೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ ರಾಹುಲ್ ತ್ರಿಪಾಠಿ ಅಮೋಘ ಸಾಮರ್ಥ್ಯ ತೋರಿದ್ದರು. ದಿನೇಶ್ ಕಾರ್ತಿಕ್, ಆ್ಯಂಡ್ರೆ ರಸೆಲ್ ಯಾವುದೇ ಪರಿಸ್ಥಿತಿಯಲ್ಲಿ ಎದೆ ಗುಂದದೇ ಆಡಬಲ್ಲರು' ಎಂದು ಮಾರ್ಗನ್ ಹೇಳಿದರು.

ಹಾರ್ದಿಕ್ ಪಾಂಡ್ಯ ಬೌಲಿಂಗ್‌ಗೆ ಸಜ್ಜು: ಜಹೀರ್: ಭುಜದ ನೋವಿನಿಂದಾಗಿ ಮೊದಲ ಪಂದ್ಯದಲ್ಲಿ ಬೌಲಿಂಗ್ ಮಾಡದೇ ಇದ್ದ ಹಾರ್ದಿಕ್ ಪಾಂಡ್ಯ ಎರಡನೇ ಪಂದ್ಯದಲ್ಲಿ ಬೌಲಿಂಗ್ ಮಾಡಬಲ್ಲರು ಎಂದು ಮುಂಬೈ ಇಂಡಿಯನ್ಸ್‌ನ ಕ್ರಿಕೆಟ್ ಆಪರೇಷನ್ಸ್ ನಿರ್ದೇಶಕ ಜಹೀರ್ ಖಾನ್ ತಿಳಿಸಿದರು.

ಪಾಂಡ್ಯ ಎಲ್ಲ ವಿಭಾಗಗಳಲ್ಲೂ ಸಮರ್ಥವಾಗಿ ಆಡಲು ಸಾಧ್ಯವಾದರೆ ತಂಡಕ್ಕೆ ಭಾರಿ ಅನುಕೂಲ ಆಗಲಿದೆ. ಇದು ಎಲ್ಲರಿಗೂ ತಿಳಿದಿದೆ. ಮೊದಲ ಪಂದ್ಯದಲ್ಲಿ ವಿಶ್ರಾಂತಿ ನೀಡುವುದಕ್ಕಾಗಿ ಅವರ ಕೈಗೆ ಚೆಂಡನ್ನು ನೀಡಿರಲಿಲ್ಲ. ಮಂಗಳವಾರದ ಪಂದ್ಯದಲ್ಲಿ ಅವರನ್ನು ಸಂಪೂರ್ಣವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗುವುದು. ವೆಸ್ಟ್ ಇಂಡೀಸ್‌ನ ಕೀರನ್ ಪೊಲಾರ್ಡ್ ಅವರನ್ನು ಆರನೇ ಬೌಲರ್ ಆಗಿ ಬಳಸಿಕೊಳ್ಳಲಾಗುವುದು' ಎಂದು ಅವರು ವಿವರಿಸಿದರು.

ಕಣಕ್ಕೆ ಇಳಿಯಲು ಸಜ್ಜಾದ ದೇವದತ್ತ ಪಡಿಕ್ಕಲ್: ಕೇನ್ ವಿಲಿಯಮ್ಸನ್ ಆಡಲು ಫಿಟ್?

'ಸನ್' ಸವಾಲು ಮೀರುವುದೇ ಆರ್‌ಸಿಬಿ?

ಚೆನ್ನೈ(ಪಿಟಿಐ): ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ವಿರುದ್ಧ ಜಯ ಗಳಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಬುಧವಾರದ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ಎದುರು ಸೆಣಸಲಿದೆ.

ಮುಂಬೈ ಎದುರಿನ ಪಂದ್ಯದಲ್ಲಿ ಬೆಂಗಳೂರು ಎಲ್ಲ ವಿಭಾಗದಲ್ಲೂ ಪಾರುಪತ್ಯ ಸ್ಥಾಪಿಸಿತ್ತು. ಡೆತ್ ಓವರ್‌ಗಳ ಪರಿಣತ ಬೌಲರ್‌ನ ಹುಡುಕಾಟದಲ್ಲಿದ್ದ ತಂಡಕ್ಕೆ ಹರ್ಷಲ್ ಪಟೇಲ್ ಹೊಸ ಭರವಸೆ ಮೂಡಿಸಿದ್ದಾರೆ. ಮುಂಬೈ ತಂಡವನ್ನು ಸಾಮಾನ್ಯ ಮೊತ್ತಕ್ಕೆ ಕಟ್ಟಿಹಾಕಲು ನೆರವಾಗಿದ್ದ ಅವರನ್ನು ಬುಧವಾರದ ಪಂದ್ಯದಲ್ಲೂ ಪ್ರಮುಖ ಅಸ್ತ್ರವಾಗಿ ಬಳಸಿಕೊಳ್ಳಲು ತಂಡ ಪ್ರಯತ್ನಿಸಲಿದೆ.

ಮೊಹಮ್ಮದ್ ಸಿರಾಜ್, ಕೈಲ್ ಜೆಮೀಸನ್ ಮುಂತಾದವರು ವೇಗದ ದಾಳಿಗೆ ಮೊನಚು ತುಂಬಲು ಸಜ್ಜಾಗಿದ್ದಾರೆ. ಸ್ಪಿನ್ ವಿಭಾಗದ ಚುಕ್ಕಾಣಿ ಹಿಡಿಯಲು ಯಜುವೇಂದ್ರ ಚಾಹಲ್ ಮತ್ತು ವಾಷಿಂಗ್ಟನ್ ಸುಂದರ್ ಇದ್ದಾರೆ. ದೇವದತ್ತ ಪಡಿಕ್ಕಲ್ ಅನುಪಸ್ಥಿತಿಯಲ್ಲಿ ಇನಿಂಗ್ಸ್ ಆರಂಭಿಸುವ ಜವಾಬ್ದಾರಿ ಹೊತ್ತಿದ್ದ ವಾಷಿಂಗ್ಟನ್ ಸುಂದರ್ ನಾಯಕ ವಿರಾಟ್ ಕೊಹ್ಲಿ ಜೊತೆ ಸೊಗಸಾಗಿ ಆಡಿದ್ದಾರೆ. ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್ ಮುಂತಾದವರು ತಂಡದ ಬ್ಯಾಟಿಂಗ್ ಶಕ್ತಿಯ ಬೆನ್ನೆಲುಬು ಆಗಿದ್ದಾರೆ.



ಯಜುವೇಂದ್ರ ಚಾಹಲ್ ಮತ್ತು ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ದೇವದತ್ತ ಪಡಿಕ್ಕಲ್ ಕಣಕ್ಕೆ?: ಕೋವಿಡ್–19 ಸೋಂಕಿಗೆ ಒಳಗಾಗಿದ್ದ ದೇವದತ್ತ ಪಡಿಕ್ಕಲ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಕಣಕ್ಕೆ ಇಳಿಯುವರೇ ಎಂಬ ಕುತೂಹಲ ಕ್ರಿಕೆಟ್ ಪ್ರೇಮಿಗಳನ್ನು ಕಾಡತೊಡಗಿದೆ. ಈ ನಡುವೆ ಸೋಮವಾರ ಟ್ವೀಟ್ ಮಾಡಿರುವ ದೇವದತ್ತ ತಾವೀಗ ಸಂಪೂರ್ಣ ಗುಣಮುಖರಾಗಿದ್ದು ಐಪಿಎಲ್‌ನಲ್ಲಿ ಆಡಲು ಸಜ್ಜಾಗಿರುವುದಾಗಿ ಹೇಳಿದ್ದಾರೆ.

ಮಾರ್ಚ್ 22ರಂದು ಸೋಂಕಿಗೆ ಒಳಗಾಗಿದ್ದ ಪಡಿಕ್ಕಲ್ ಕೆಲವು ದಿನ ಪ್ರತ್ಯೇಕವಾಸದಲ್ಲಿದ್ದರು. ಬೇಗನೇ ಗುಣಮುಖರಾಗಿ ಬೆಂಗಳೂರು ತಂಡದ ಅಭ್ಯಾಸ ಶಿಬಿರಕ್ಕೆ ಹಾಜರಾಗಿದ್ದರು.

'ಕೋವಿಡ್‌ನಿಂದಾಗಿ ಹಿನ್ನಡೆ ಆಗಿದ್ದು ನಿಜ. ಆ ಸೋಂಕು ತಗಲಬಾರದು ಎಂದು ಆಶಿಸಿದ್ದೆ. ಆದರೆ ನಿಯಂತ್ರಿಸಲು ಆಗಲಿಲ್ಲ. ಆದರೆ ಗುಣಮುಖನಾದ ನಂತರ ಫಿಟ್ ಆಗಿರಲು ಗಮನ ಕೊಟ್ಟೆ. ಹೀಗಾಗಿ ಈಗ ಆಡಲು ಸಜ್ಜಾಗಿದ್ದೇನೆ' ಎಂದು ಅವರು ಹೇಳಿದ್ದಾರೆ.

ಕೋಲ್ಕತ್ತ ಎದುರಿನ ಪಂದ್ಯದಲ್ಲಿ ಆಡದೇ ಇದ್ದ ಸನ್‌ರೈಸರ್ಸ್‌ನ ಕೇನ್ ವಿಲಿಯಮ್ಸನ್ ಸದ್ಯದಲ್ಲೇ ಆಡಲು ಸಜ್ಜಾಗಲಿದ್ದಾರೆ ಎಂದು ಕೋಚ್ ಟ್ರೆವರ್ ಬೇಯ್ಲಿಸ್ ಹೇಳಿದ್ದು ಬೆಂಗಳೂರು ಎದುರು ಅವರು ಕಣಕ್ಕೆ ಇಳಿಯುವರೇ ಎಂಬ ಕುತೂಹಲಕ್ಕೆ ಕಾರಣವಾಗಿದೆ.

ಭುಜದಲ್ಲಿ ನೋವು ಕಾಣಿಸಿಕೊಂಡ ಕಾರಣ ಬಾಂಗ್ಲಾದೇಶ ಎದುರಿನ ಸರಣಿಯಲ್ಲಿ ವಿಲಿಯಮ್ಸನ್ ಆಡಿರಲಿಲ್ಲ. ಫಿಟ್ ಆಗಿರದ ಕಾರಣ ಐಪಿಎಲ್‌ನಲ್ಲೂ ಕೆಲಕಾಲ ವಿರಾಮ ಬಯಸಿದ್ದರು. ಆದರೆ ಈಗ ಫಿಟ್ ಆಗಿದ್ದಾರೆ ಎಂದು ಬೇಯ್ಲಿಸ್ ಹೇಳಿದ್ದಾರೆ.

ಮುಖಾಮುಖಿ ಪಂದ್ಯಗಳು 18

ಹೈದರಾಬಾದ್ ಜಯ 10
ಬೆಂಗಳೂರು ಗೆಲುವು 7
ಫಲಿತಾಂಶವಿಲ್ಲ 1

	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
ಹೈದರಾಬಾದ್	231	113
ಬೆಂಗಳೂರು	227	135

ಪಂದ್ಯ ಆರಂಭ ಸಂಜೆ 7.30

ಲೈವ್ ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಡೇವಿಡ್ ವಾರ್ನರ್ –ಪಿಟಿಐ ಚಿತ್ರ

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ರಿ.)

ಪಬ್ಲಿಕ್ ಹೆಲ್ತ್ ಇನ್‌ಸ್ಟಿಟ್ಯೂಟ್, ಶೇಷಾದ್ರಿ ರೋಡ್, ಎಸ್.ಜೆ.ಪಿ. ಕಾಲೇಜು ಎದುರು, ಕೆ.ಆರ್. ಸರ್ಕಲ್, ಬೆಂಗಳೂರು–560 001.
ಮಿಂಚಂಚೆ: ad.kdlws@gmail.com, md.ksmscl@gmail.com

No.: HFW/KSMSCL/Covid-19/Re-TND/RT PCR-Consu/01/ Automated RNA Extraction/02/2021-22, Date: 12.04.2021

ಟೆಂಡರ್ ಪ್ರಕಟಣೆ

ಉಲ್ಲೇಖ :
1. ಸರ್ಕಾರದ ಆದೇಶ ಸಂಖ್ಯೆ : HFW249 FPS2020 Bengaluru, Dated: 24.03.2021.
2. ಸರ್ಕಾರದ ಆದೇಶ ಸಂಖ್ಯೆ : HFW12 FPS2021 Bengaluru, Dated: 07.04.2021.
3. ಟೆಂಡರ್ ಪ್ರಕಟಣೆ ಸಂಖ್ಯೆ : HFW/KSMSCL/Eqpt/Covid-19/RNA Extraction Automated/02/2021-22 (IND-795).
4. ಐಎಫ್‌ಕ್ಯೂ ದರಪಟ್ಟಿ ಪ್ರಕಟಣೆ ಸಂಖ್ಯೆ: KSMSCL/Eqpt/Covid-19/ RTPCR/Cons-01/21-22.
5. ಐಎಫ್‌ಕ್ಯೂ ದರಪಟ್ಟಿ ಪ್ರಕಟಣೆ ಸಂಖ್ಯೆ: KSMSCL/Eqpt/Covid-19/ RTPCR/Cons-02/21-22.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರಂತೆ ಕೆ.ಟಿ.ಪಿ.ಪಿ ನಿಯಮಾನುಸಾರ ಈ ಕೆಳಕಂಡ ಟೆಂಡರ್‌ಗಳನ್ನು ರಾಷ್ಟ್ರವ್ಯಾಪಿಯಲ್ಲಿ ಇ–ಟೆಂಡರ್ ವ್ಯವಸ್ಥೆ ಮುಖಾಂತರ ಕರೆಯಲಾಗಿದೆ.

Tender for Supply of RT PCR Consumables for Covid-19 Test.
Tender for Supply Automated RNA Extraction Kit for Covid-19 Test. (IND-795)

ಇ–ಪ್ರೊಕ್ಯೂರ್‌ಮೆಂಟ್ ಇಲಾಖೆಯಲ್ಲಿ ನೊಂದಾಯಿಸಿರುವ ಟೆಂಡರ್‌ದಾರರು ಇ–ಟೆಂಡರಿಂಗ್ ವ್ಯವಸ್ಥೆ ಮೂಲಕ ಭಾಗವಹಿಸಬಹುದು.
ತಾಂತ್ರಿಕ ವಿವರಣೆ, ಷರತ್ತು ಮತ್ತು ನಿಬಂಧನೆಗಳು ಮತ್ತು ಇತರೆ ಮಾಹಿತಿಯನ್ನು ಉಲ್ಲೇಖ ಕ್ರಸಂ. 3ಕ್ಕೆ https://eproc.karnataka.gov.in ಮತ್ತು ಕ್ರಸಂ. 4 & 5 IFQ ಮುಖಾಂತರ https://www.kdlws.kar.nic.in ಟೆಂಡರ್ ವ್ಯವಸ್ಥೆಯಡಿಯಲ್ಲಿ ದಿನಾಂಕ: 12.04.2021ರಿಂದ ಟೆಂಡರ್‌ಗಳ ದಸ್ತಾವೇಜುಗಳನ್ನು kdlws ಮುಖಾಂತರ ಡೌನ್‌ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್.

ವಾಸಾಸಂಇ/ಬೆಂನ/142/2021–22

ಕೋವಿಡ್–19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ

ನಮ್ಮ ಮೆಟ್ರೋ namma metro | ಸ್ವಚ್ಛ ಭಾರತ एक कदम स्वच्छता की ओर

(ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ಸಹಭಾಗಿತ್ವದ ಒಂದು ಉದ್ಯಮ)
ಮೆಟ್ರೋ ರೈಲು ಡಿಪೋ, ಹಳೇ ಮದ್ರಾಸ್ ರಸ್ತೆ, ಎನ್.ಜಿ.ಇ.ಎಫ್.
ಬಸ್ ನಿಲ್ದಾಣದ ಹತ್ತಿರ, ಬೈಯಪ್ಪನಹಳ್ಳಿ, ಬೆಂಗಳೂರು–560 038. ದೂ:080–25191039
ಇ–ಮೇಲ್ : bmrcl@dataone.in ವೆಬ್‌ಸೈಟ್: www.bmrc.co.in
ಟೆಂಡರ್ ಸಂಖ್ಯೆ: ಬಿಎಂಆರ್‌ಸಿಎಲ್/ಒಮತ್ತುಎಂ/ಎಸ್‌ಎಸ್‌ಎಂ/ಎಲ್2/01/2020–21
ದಿನಾಂಕ: 08.04.2021

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು **'ಮಾರ್ಗ–2ರ ರೀಚ್ 3, 3ಎ, 3ಬಿ, 4 ಮತ್ತು 4ಎ ರಲ್ಲಿ ಪಿಯರ್ಸ್‌ಗೆ ಎಪಾಕ್ಸಿ ಗ್ರೌಟಿಂಗ್, ಸರ್ಫೇಸ್ ದುರಸ್ತಿ ಕಾಮಗಾರಿಗಳಿಗಾಗಿ ಮತ್ತು ಯುಪಿವಿ ವಿಧಾನದಲ್ಲಿ ಎನ್‌ಡಿಟಿ ನಡೆಸುವುದಕ್ಕಾಗಿ'** ಅರ್ಹ ಟೆಂಡರ್‌ದಾರರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದಾಜು ಮೊತ್ತ: **ರೂ.47.68 ಲಕ್ಷಗಳು.** ಆನ್‌ಲೈನ್ ಮೂಲಕ ಟೆಂಡರ್ ದಸ್ತಾವೇಜಿನ ಮಾರಾಟದ ಅವಧಿ: **15.04.2021 ರಿಂದ 03.05.2021ರವರೆಗೆ (ಮಧ್ಯರಾತ್ರಿವರೆಗೆ).** ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ: **06.05.2021, (ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ).** ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **06.05.2021 (ಮಧ್ಯಾಹ್ನ 3.30 ಗಂಟೆಗೆ).** ಟೆಂಡರ್ ದಸ್ತಾವೇಜು ಬೆಲೆ: **ರೂ.3,540/–.** ಪೂರ್ಣಗೊಳಿಸುವ ಕಾಲಾವಧಿ: **12 ತಿಂಗಳು.** ಟೆಂಡರ್‌ನ್ನು ಬಿಎಂಆರ್‌ಸಿಎಲ್ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **https://tender.bmrc.co.in**

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಒ ಅಂಡ್ ಎಂ)

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ನಿರ್ದೇಶಕರ ಕಚೇರಿ, ವಿದ್ಯಾನಗರ, ಹುಬ್ಬಳ್ಳಿ–580 021

ಸಂ: ಕಿಮ್ಸ್‌ಆ/ಎಸ್.ಯು.ಪಿ.(5)/EQP/Tender/OPH-05/2021-22 ದಿನಾಂಕ: 12–04–2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ ಅರ್ಹ ಟೆಂಡರ್‌ದಾರರಿಂದ ಕಿಮ್ಸ್ ಆಸ್ಪತ್ರೆಯ ನೇತ್ರ ಶಾಸ್ತ್ರ ಮತ್ತು ಚಿಕ್ಕ ಮಕ್ಕಳ ವಿಭಾಗಕ್ಕೆ ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಕ್ಕಾಗಿ ಇ–ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

1	Tenders may be uploaded from	16.04.2021
2	Last date for Uploading the Tenders	25.04.2021 before 5:00 Pm

ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://eproc.karnataka.gov.in ಮೂಲಕ ಮಾಹಿತಿ ಪಡೆಯಬಹುದು.

ಸಹಿ/– ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ–02, ಕೋರಮಂಗಲ, ಬೆಂಗಳೂರು – 560047,

ಸಂಖ್ಯೆ:ವಾತೆಜಂಆ(ಜಾ)/ಸಿಬ್ಬಂದಿ–1/ಸಿಆರ್–35/2020–21 ದಿನಾಂಕ : 12.04.2021

ಇ–ಟೆಂಡರ್ ಪ್ರಕಟಣೆ

ಮೇಲ್ಕಂಡ ಕಛೇರಿಗೆ 18 ದತ್ತಾಂಶ ನಮೂದಕರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪೂರೈಕೆಗಾಗಿ ದ್ವಿ ಲಕೋಟೆ / ದ್ವಿ ಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಇತರೆ ವಿವರಗಳನ್ನು ಜಾಲತಾಣ ವಿಳಾಸ : https://eproc.karnataka.gov.in ರಿಂದ ಅಥವಾ ಜಾಲತಾಣ https://ctax.kar.nic.in/ ರಿಂದ ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 26.04.2021 ಸಂಜೆ 5.00 ಘಂಟೆ, ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ:080–25704962 ಅಥವಾ ಇ–ಮೇಲ್ ವಿಳಾಸ : jcctvig.bng@ka.gov.in ಅನ್ನು ಸಂಪರ್ಕಿಸಬಹುದು.

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
(ಜಾಗೃತಿ), ಬೆಂಗಳೂರು.

ವಾಸಾಸಂಇ/ಬೆಂ. ನಗರ/ಶಿರಡಿ ಸಾಯಿ/141/2021–22

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ

ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175–273229
email:itstaff_ulb_holenarasipur@yahoo.co.in
ನಂ:ಪುಸ.ಹೊನಪು/ತಾ.ಶಾ/ಪಿ.ಆರ್02/2021–22 ದಿನಾಂಕ:08.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ಹೊಳೆನರಸೀಪುರ ಪಟ್ಟಣದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 2017 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕೊರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೊರ್‌ಮೆಂಟ್ Visit:https://www. eproc. karnataka.gov.in/ಪೋರ್ಟಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತಿದೆ. **2020–21 ನೇ ಸಾಲಿನ 15ನೇ ಹಣಕಾಸು ಯೋಜನೆಯ ಜನರಲ್ ಬೇಸಿಕ್ ಅನುದಾನ ಮತ್ತು ಪುರಸಭಾ ನಿಧಿ. ಕ್ರಸಂ: 1)ಕಾಮಗಾರಿಯ ವಿವರ: ಹೊಳೆನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಎಲ್.ಇ.ಡಿ ವಿದ್ಯುತ್ ದೀಪ ಇದಕ್ಕೆ ಸಂಬಂಧಿಸಿದಂತೆ ರ್‍ಯಾಬಿಟ್ ತಂತಿ ಅಳವಡಿಕೆ, ಅರ್ಥಿಂಗ್ ಪಾಯಿಂಟ್ ಹಾಗೂ ಬೂಗತ ಕೇಬಲ್ ಅಳವಡಿಕೆ ಮತ್ತು ವಿದ್ಯುತ್ ಕಂಬ ಅಳವಡಿಸುವ ಕಾಮಗಾರಿ. Indent No: DMA/2020-21/EL/WORK_INDENT 115511** ಅಂದಾಜು ಮೊತ್ತ ರೂ. **14.20** ಲಕ್ಷ, ಇಎಂಡಿ ಮೊತ್ತ ರೂ. 35500-00 **2019–20 ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಕ್ರಸಂ: 2)ಹೊಳೆನರಸೀಪುರ ಪುರಸಭಾ ಕಛೇರಿಯ 3ನೇ ಅಂತಸ್ತಿನಲ್ಲಿ ಪೌರಕಾರ್ಮಿಕರಿಗೆ, ನೀರು ಸರಬರಾಜು ಸಿಬ್ಬಂದಿ ಹಾಗೂ ಕಛೇರಿ ಸಿಬ್ಬಂದಿಗಳಿಗೆ ರೆಸ್ಟ್ ರೂಂ ಹಾಗೂ ಲಘು ಉಪಹಾರ ಕ್ಯಾಂಟೀನ್ ನಿರ್ಮಾಣ ಕಾಮಗಾರಿ Indent No: DMA/ 2020-21/BD/WORK_INDENT113600 Call2** ಅಂದಾಜು ಮೊತ್ತ ರೂ. 15.00 ಲಕ್ಷ, ಇಎಂಡಿ ಮೊತ್ತ ರೂ. 37500-00 ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 20.04.2021 ಸಂಜೆ 4.30 ಗಂಟೆವರೆಗೆ ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ:22.04.2021 ಬೆಳ್ಳಿಗ್ಗೆ 11.00 ಕ್ಕೆ

ಸಹಿ/– ಅಧ್ಯಕ್ಷರು, ಪುರಸಭೆ, ಹೊಳೆನರಸೀಪುರ. | ಸಹಿ/– ಮುಖ್ಯಾಧಿಕಾರಿ, ಪುರಸಭೆ, ಹೊಳೆನರಸೀಪುರ.

ವಾಸಾಸಂಇ/ಹಿಸನಿ/ಹಾಸನ/ಎಂಸಿವಿ/ 16/2020–21

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೊಕ್ಕೊ: ರಾಜ್ಯಮಟ್ಟಕ್ಕೆ ಎ.ಪಿ.ಎಸ್. ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ್ಯ ಪಾಠಶಾಲಾ (ಎ.ಪಿ.ಎಸ್) ಕಾಲೇಜಿನ ವಿದ್ಯಾರ್ಥಿಗಳು ಇತ್ತೀಚೆಗೆ ನಡೆದ ಬೆಂಗಳೂರು ದಕ್ಷಿಣ ಜಿಲ್ಲಾ ಮಟ್ಟದ ಕೊಕ್ಕೊ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟಕ್ಕೇರುವ ಮೂಲಕ ರಾಜ್ಯಮಟ್ಟದ ಟೂರ್ನಿಗೆ ಆಯ್ಕೆಯಾಗಿದ್ದಾರೆಎಂದುಕಾಲೇಜಿನಪ್ರಾಂಶುಪಾಲ ಎಸ್. ನಾಗರಾಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪ್ರಶಸ್ತಿ ವಿಜೇತ ಕೊಕ್ಕೊ ತಂಡದೊಂದಿಗೆ ಶಾಲಾ ಸಿಬ್ಬಂದಿ

ಬೆಂಚ್ ಪ್ರೆಸ್: ರಾಷ್ಟ್ರಮಟ್ಟಕ್ಕೆ ಹರ್ಷಿತಾ

ಬೆಂಗಳೂರು: ನಗರದ ಕೆ.ಎಲ್. ಹರ್ಷಿತಾ ಅವರು ದಾವಣಗೆರೆಯಲ್ಲಿ ಭಾನುವಾರ ಕೊನೆಗೊಂಡ ರಾಜ್ಯ ಬೆಂಚ್ ಪ್ರೆಸ್ ಚಾಂಪಿಯನ್‌ಷಿಪ್‌ನ ಜೂನಿಯರ್ ಹಾಗೂ ಸೀನಿಯರ್ ವಿಭಾಗಗಳಲ್ಲಿ ಚಿನ್ನದ ಪದಕ ಮುಡಿಗೇರಿಸಿಕೊಂಡು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಆಯ್ಕೆಯಾಗಿದ್ದಾರೆ.

ಇಲ್ಲಿಯ ಇಂಟರ್‌ನ್ಯಾಷನಲ್ ಫಿಟ್‌ನೆಸ್ ಸೆಂಟರ್‌ನ ಹರ್ಷಿತಾ 57 ಕೆಜಿ ತೂಕ ವಿಭಾಗದಲ್ಲಿ 95 ಕೆಜಿ ಭಾರ ಎತ್ತಿದ್ದರು.



ಕೆ.ಎಲ್.ಹರ್ಷಿತಾ

ಕೋವಿಡ್: ರಿಲೇಯಿಂದ ಹಿಂದೆ ಸರಿದ ಆಸ್ಟ್ರೇಲಿಯಾ

ಮೆಲ್ಬರ್ನ್ (ಪಿಟಿಐ): ಪೋಲೆಂಡ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ರಿಲೇ ಚಾಂಪಿಯನ್‌ಷಿಪ್‌ಗೆ ಕ್ರೀಡಾಪಟುಗಳನ್ನು ಕಳುಹಿಸದೇ ಇರಲು ಆಸ್ಟ್ರೇಲಿಯಾ ಅಥ್ಲೆಟಿಕ್ಸ್ ಸಂಸ್ಥೆ (ಅಥ್ಲೆಟಿಕ್ಸ್ ಆಸ್ಟ್ರೇಲಿಯಾ) ನಿರ್ಧರಿಸಿದೆ. ಕೋವಿಡ್–19 ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಧಾರವನ್ನು ಕೈಗೊಂಡಿದ್ದು ಇದರಿಂದಾಗಿ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಅವಕಾಶವನ್ನೂ ರಿಲೇ ತಂಡ ಕಳೆದುಕೊಳ್ಳುವ ಸಾಧ್ಯತೆ ಇದೆ.

'ಕೋವಿಡ್ ಆತಂಕಕಾರಿಯಾಗಿ ಹರಡುತ್ತಿದೆ. ಹೀಗಾಗಿ ಕ್ರೀಡಾಪಟುಗಳ ಕ್ಷೇಮದ ದೃಷ್ಟಿಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಅಥ್ಲೆಟಿಕ್ಸ್ ಆಸ್ಟ್ರೇಲಿಯಾ ತಿಳಿಸಿದೆ.

'ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದೇ ಇರುವುದು ಬೇಸರದ ವಿಷಯ. ಆದರೆ ಕ್ರೀಡಾಪಟುಗಳು, ಕೋಚ್‌ಗಳು ಮತ್ತು ಸಿಬ್ಬಂದಿಯ ಆರೋಗ್ಯ–ರಕ್ಷಣೆಗಾಗಿ ಕೆಲವೊಮ್ಮೆ ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾಗುತ್ತದೆ' ಎಂದು ಅಥ್ಲೆಟಿಕ್ಸ್ ಆಸ್ಟ್ರೇಲಿಯಾದ ಮುಖ್ಯ ಕಾರ್ಯ ನಿರ್ವಾಹಕ ಡ್ಯಾರೆನ್ ಗೋಚರ್ ಹೇಳಿದ್ದಾರೆ.

रजिस्ट्री सं. डी. एल. - 33004/99 REGD. NO. D.L.-33004/99

सत्यमेव जयते

भारत का राजपत्र

ಭಾರತ ಸರಕಾರದ ವಿಶೇಷ ರಾಜ್ಯ ಪತ್ರ

सी.जी.-डी.एल.-अ.-25032021-226099
CG-DL-E-25032021-226099
असाधारण
ಅಸಾಧಾರಣ
भाग II - खण्ड-3 - उप-खण्ड-(ii)
ಭಾಗ II –ಸೆಕ್ಷನ್ 3–ಉಪ–ಸೆಕ್ಷನ್ (ii)
प्राधिकार से प्रकाशित
ಪ್ರಾಧಿಕಾರದಿಂದ ಪ್ರಕಟಿಸಲಾಗಿದೆ

सं : 1226] नई दिल्ली, बुधवार, मार्च 24, 2021/चैत्र 3, 1943
No. 1226] ನವದೆಹಲಿ, ಬುಧವಾರ, ಮಾರ್ಚ್ 24 , 2021/ಚೈತ್ರ 3, 1943

ರಾಷ್ಟ್ರೀಯ ಹೆದ್ದಾರಿ ಹಾಗೂ ರಸ್ತೆ ಸಾರಿಗೆ ಸಚಿವಾಲಯ

ಅಧಿಸೂಚನೆ

ನವದೆಹಲಿ, 24 ಮಾರ್ಚ್, 2021

ಎಸ್.ಓ. 1324(ಇ): ಈ ಅಧಿಸೂಚನೆಯಲ್ಲಿ ಕಂಡ ಜಮೀನುಗಳನ್ನು ಕರ್ನಾಟಕ ರಾಜ್ಯ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ರಾಷ್ಟ್ರೀಯ ಹೆದ್ದಾರಿ 207 ರಲ್ಲಿ ಕಿ.ಮಿ. 16.8 ರಿಂದ ಕಿ.ಮಿ. 58.3 ವರೆಗೆ (ಸರ್ವೆ ಸಂಖ್ಯೆ 678/3, ನೀರುಭಾವಿ ಕೆಂಪಣ್ಣ ಬಡಾವಣೆ, ಹೆಬ್ಬಾಳ, ಬೆಂಗಳೂರು) ಸದರಿ ಅಧಿಸೂಚನೆಯ ಷೆಡ್ಯೂಲ್‌ನಲ್ಲಿ ಸೂಚಿಸಿರುವ ಜಮೀನುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಕೇಂದ್ರ ಸರ್ಕಾರ ತನ್ನ ಆಸಕ್ತಿಯನ್ನು ಘೋಷಿಸಿದ್ದು ಇದರ ಉದ್ದೇಶ ನಿರ್ಮಾಣ (ಅಗಲಿಸುವುದು/ 2 ಪಥ ಪೇವ್ಡ್ ಶೌಲ್ಡರೊಂದಿಗೆ/4 ಪಥಗಳು ಇತ್ಯಾದಿ), ನಿರ್ವಹಣೆ, ವ್ಯವಸ್ಥೆ ಮತ್ತು ಕಾರ್ಯಚರಣೆಗಳ ಪ್ರಕ್ರಿಯೆ ಮಾಡುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿ ಅಧಿನಿಯಮ 1956 (1956 ರ 48) ಸೆಕ್ಷನ್ 3ಎ(1) (ಸದರಿ ಕಾಯ್ದೆಯ ಅಡಿಯಲ್ಲಿ ಎಂದು ಉಲ್ಲೇಖಿಸಲಾಗಿದೆ) ರಂತೆ ಪ್ರಕಟಣೆ ಹೊರಡಿಸಲಾಗಿತ್ತು.

ಸದರಿ ಜಮೀನುಗಳ ಬಗ್ಗೆ ಭೂಮಾಲೀಕರು ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯನ್ನು ದಿನಪತ್ರಿಕೆಯಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಕಲಂ 3ಸಿ(1) ರ ಅನ್ವಯ ತಮ್ಮಗಳ ಆಕ್ಷೇಪಣೆಯನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು ಸಕ್ಷಮ ಪ್ರಾಧಿಕಾರ, ಅಂದರೆ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರ, ಹೆಬ್ಬಾಳ ಬೆಂಗಳೂರು ಇವರಿಗೆ ಬರಹದ ಮೂಲಕ ಸಕಾರಣಗಳೊಂದಿಗೆ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ ಅವರು ಸಲ್ಲಿಸಿರುವ ಆಕ್ಷೇಪಣೆ ಬಗ್ಗೆ ವಿಚಾರಣೆ ನಡೆಸಿ ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದಾದ ಅಧಿಕಾರ ಪ್ರಾಧಿಕಾರದಾಗಿರುತ್ತದೆ.

ನಿಯಮ 3ಸಿ ನ ಅಧಿನಿಯಮ (2) ರಂತೆ ಸಕ್ಷಮ ಪ್ರಾಧಿಕಾರಿಗಳು ಮಾಡಿದ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕಾಶೆಗಳನ್ನು ಮೇಲೆ ಕಾಣಿಸಿದ ಸಕ್ಷಮ ಪ್ರಾಧಿಕಾರದಲ್ಲಿ ಲಭ್ಯವಿರುತ್ತವೆ ಮತ್ತು ಈ ಜಮೀನುಗಳ ಬಗ್ಗೆ ಹಿತಾಸಕ್ತಿವುಳ್ಳವರು ಸಕ್ಷಮ ಪ್ರಾಧಿಕಾರಿಯವರ ಕಛೇರಿಯಲ್ಲಿ ಪರಿಶೀಲಿಸಬಹುದಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಹಲವು ಗ್ರಾಮಗಳ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ–207 ರಲ್ಲಿ (ಸರ್ವೆ ಸಂಖ್ಯೆ 678/3, ನೀರುಭಾವಿ ಕೆಂಪಣ್ಣ ಬಡಾವಣೆ, ಹೆಬ್ಬಾಳ, ಬೆಂಗಳೂರು) ಕಿ.ಮಿ. 16.8 ರಿಂದ ಕಿ.ಮಿ. 58.3 ವರೆಗೆ ರಸ್ತೆ ಅಗಲೀಕರಣಕ್ಕಾಗಿ ಕಟ್ಟಡ ಸಹಿತ/ಕಟ್ಟಡ ರಹಿತವಾಗಿರುವ, ಸ್ವಾಧೀನ ಪಡಿಸಲಾಗುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ ಜಿಲ್ಲೆ : ಬೆಂಗಳೂರು ಗ್ರಾಮಾಂತರ

ಕ್ರಮ ಸಂಖ್ಯೆ	ಸರ್ವೆ/ ಪ್ಲಾಟ್ ನಂಬರ್	ಜಮೀನಿನ ಸ್ವರೂಪ	ಜಮೀನಿನ ತರಹೆ	ಜಮೀನಿನ ವಿಸ್ತೀರ್ಣ (ಚದರ ಮೀ.ಗಳಲ್ಲಿ)	ಜಮೀನಿನ ವಿಸ್ತೀರ್ಣ (ಹೆಕ್ಟರ್‌ಗಳಲ್ಲಿ)
ತಾಲ್ಲೂಕು : ಹೊಸಕೋಟೆ					ಗ್ರಾಮ : ಬಾನರಹಳ್ಳಿ
1	30/3	ಖಾಸಗಿ	ಖುಷ್ಕಿ	350	0.0350
2	30/4	ಖಾಸಗಿ	ಖುಷ್ಕಿ	1,677	0.1677
3	5	ಸರ್ಕಾರಿ	ತರಿ	147	0.0147
4	52	ಖಾಸಗಿ	ಖುಷ್ಕಿ	1,676	0.1676
5	54	ಖಾಸಗಿ	ಖುಷ್ಕಿ	974	0.0974
6	6	ಖಾಸಗಿ	ಖುಷ್ಕಿ	1,227	0.1227
7	8/2	ಖಾಸಗಿ	ಖುಷ್ಕಿ	49	0.0049
8	8/9	ಖಾಸಗಿ	ಖುಷ್ಕಿ	549	0.0549
ಗ್ರಾಮ : ಚಂದ್ರಾಪುರ					
1	12/1	ಖಾಸಗಿ	ಖುಷ್ಕಿ	88	0.0088
2	19/1	ಖಾಸಗಿ	ಎನ್‌ಎಕೆ	6,627	0.6627
3	19/2ಎ1	ಖಾಸಗಿ	ಖುಷ್ಕಿ	1,168	0.1168
4	19/2ಎ2	ಖಾಸಗಿ	ಖುಷ್ಕಿ	856	0.0856
5	19/2ಬಿ	ಖಾಸಗಿ	ಖುಷ್ಕಿ	6,754	0.6754
6	19/3	ಖಾಸಗಿ	ಖುಷ್ಕಿ	3,221	0.3221
7	21	ಖಾಸಗಿ	ಖುಷ್ಕಿ	2,255	0.2255
8	22/1	ಖಾಸಗಿ	ಎನ್‌ಎಕೆ	2,334	0.2334
9	22/2	ಖಾಸಗಿ	ಎನ್‌ಎಕೆ	4,249	0.4249
10	4/1	ಖಾಸಗಿ	ತರಿ	426	0.0426
11	4/2	ಖಾಸಗಿ	ತರಿ	426	0.0426
12	4/3	ಖಾಸಗಿ	ತರಿ	426	0.0426
13	4/4	ಖಾಸಗಿ	ತರಿ	182	0.0182
14	5/1	ಖಾಸಗಿ	ಖುಷ್ಕಿ	881	0.0881
ಗ್ರಾಮ : ದೇವನಗೊಂಡಿ					
1	129	ಖಾಸಗಿ	ಖುಷ್ಕಿ	392	0.0392
2	130	ಖಾಸಗಿ	ಖುಷ್ಕಿ	459	0.0459
ಗ್ರಾಮ : ಗೋವಿಂದಪುರ					
1	62/6	ಖಾಸಗಿ	ಖುಷ್ಕಿ	149	0.0149
2	68/4	ಖಾಸಗಿ	ಖುಷ್ಕಿ	24	0.0024
3	68/5	ಖಾಸಗಿ	ಖುಷ್ಕಿ	86	0.0086
4	70/2	ಖಾಸಗಿ	ಖುಷ್ಕಿ	364	0.0364
ಗ್ರಾಮ : ಹೊನಚನಹಳ್ಳಿ					
1	29/1	ಖಾಸಗಿ	ಖುಷ್ಕಿ	600	0.0600
2	29/3	ಖಾಸಗಿ	ಖುಷ್ಕಿ	733	0.0733
3	29/4	ಖಾಸಗಿ	ಖುಷ್ಕಿ	663	0.0663
4	30/2	ಖಾಸಗಿ	ಖುಷ್ಕಿ	11	0.0011
5	30/4	ಖಾಸಗಿ	ಖುಷ್ಕಿ	347	0.0347
6	38/4	ಖಾಸಗಿ	ತರಿ	14	0.0014
7	39/1	ಖಾಸಗಿ	ಖುಷ್ಕಿ	167	0.0167
8	39/2	ಖಾಸಗಿ	ಖುಷ್ಕಿ	215	0.0215
9	42/1	ಖಾಸಗಿ	ಖುಷ್ಕಿ	706	0.0706
10	42/2	ಖಾಸಗಿ	ಖುಷ್ಕಿ	41	0.0041
11	42/4	ಖಾಸಗಿ	ಖುಷ್ಕಿ	400	0.0400
12	43/2	ಖಾಸಗಿ	ಖುಷ್ಕಿ	1,146	0.1146
13	43/3	ಖಾಸಗಿ	ತರಿ	9	0.0009
14	57/4	ಖಾಸಗಿ	ಖುಷ್ಕಿ	350	0.0350
15	58/5	ಖಾಸಗಿ	ಖುಷ್ಕಿ	278	0.0278
16	58/9	ಖಾಸಗಿ	ಖುಷ್ಕಿ	17	0.0017
17	61/10	ಖಾಸಗಿ	ಖುಷ್ಕಿ	484	0.0484
18	61/11	ಖಾಸಗಿ	ಖುಷ್ಕಿ	1,406	0.1406
19	61/4	ಖಾಸಗಿ	ಖುಷ್ಕಿ	50	0.0050
20	61/8	ಖಾಸಗಿ	ಖುಷ್ಕಿ	1,020	0.1020
21	61/9	ಖಾಸಗಿ	ಖುಷ್ಕಿ	100	0.0100
ಗ್ರಾಮ : ಕಾಮಾರಸನಹಳ್ಳಿ					
1	84	ಖಾಸಗಿ	ಖುಷ್ಕಿ	754	0.0754
2	87	ಖಾಸಗಿ	ಖುಷ್ಕಿ	235	0.0235
3	88/1	ಖಾಸಗಿ	ಖುಷ್ಕಿ	1,552	0.1552
4	88/2	ಖಾಸಗಿ	ಖುಷ್ಕಿ	167	0.0167
ಗ್ರಾಮ : ಲಿಂಗಧೀರಮಲ್ಲಸಂದ್ರ					
1	19/1	ಖಾಸಗಿ	ಖುಷ್ಕಿ	2,638	0.2638
2	19/3	ಖಾಸಗಿ	ಖುಷ್ಕಿ	365	0.0365
3	31	ಸರ್ಕಾರಿ	ಖುಷ್ಕಿ	3,488	0.3488
4	45/4	ಖಾಸಗಿ	ಖುಷ್ಕಿ	1,021	0.1021
5	52/2	ಖಾಸಗಿ	ಖುಷ್ಕಿ	31	0.0031
6	52/3	ಖಾಸಗಿ	ಖುಷ್ಕಿ	29	0.0029
7	52/4	ಖಾಸಗಿ	ಖುಷ್ಕಿ	29	0.0029
8	ರೈಲ್ವೆ ಮಾರ್ಗ	ಸರ್ಕಾರಿ	ರಸ್ತೆ	438	0.0438
ಗ್ರಾಮ : ಪರಮಾನಹಳ್ಳಿ					
1	22	ಖಾಸಗಿ	ಖುಷ್ಕಿ	594	0.0594
2	23/1	ಖಾಸಗಿ	ಖುಷ್ಕಿ	1,060	0.1060
3	23/2	ಖಾಸಗಿ	ಖುಷ್ಕಿ	291	0.0291
4	25	ಖಾಸಗಿ	ಖುಷ್ಕಿ	1,229	0.1229
5	26	ಖಾಸಗಿ	ಖುಷ್ಕಿ	2,167	0.2167
6	27/2	ಖಾಸಗಿ	ಖುಷ್ಕಿ	147	0.0147
7	27/3	ಖಾಸಗಿ	ಖುಷ್ಕಿ	147	0.0147
8	27/4	ಖಾಸಗಿ	ಖುಷ್ಕಿ	438	0.0438
9	27/5	ಖಾಸಗಿ	ಖುಷ್ಕಿ	294	0.0294
10	27/6	ಖಾಸಗಿ	ಖುಷ್ಕಿ	438	0.0438
11	39/2	ಖಾಸಗಿ	ಖುಷ್ಕಿ	274	0.0274
12	39/4	ಖಾಸಗಿ	ಖುಷ್ಕಿ	274	0.0274
13	39/5	ಖಾಸಗಿ	ಖುಷ್ಕಿ	276	0.0276
14	41/2	ಖಾಸಗಿ	ಖುಷ್ಕಿ	79	0.0079
15	41/3	ಖಾಸಗಿ	ಖುಷ್ಕಿ	338	0.0338
16	41/6	ಖಾಸಗಿ	ಖುಷ್ಕಿ	412	0.0412
17	45/1	ಖಾಸಗಿ	ಖುಷ್ಕಿ	133	0.0133
18	46/1	ಖಾಸಗಿ	ಖುಷ್ಕಿ	363	0.0363
19	46/2	ಖಾಸಗಿ	ಖುಷ್ಕಿ	7	0.0007
20	47	ಖಾಸಗಿ	ಖುಷ್ಕಿ	142	0.0142
ಗ್ರಾಮ : ಎಸ್ ನಾರಾಯಣಕೆರೆ					
1	39/5	ಖಾಸಗಿ	ಖುಷ್ಕಿ	800	0.0800
ಗ್ರಾಮ : ಸೋಮಾಲಪುರ					
1	10/1	ಖಾಸಗಿ	ಖುಷ್ಕಿ	1,269	0.1269
2	11/1	ಖಾಸಗಿ	ಖುಷ್ಕಿ	1,389	0.1389
3	11/2	ಖಾಸಗಿ	ಖುಷ್ಕಿ	100	0.0100
4	11/3	ಖಾಸಗಿ	ಖುಷ್ಕಿ	671	0.0671
5	11/4	ಖಾಸಗಿ	ಖುಷ್ಕಿ	1,259	0.1259
6	12	ಖಾಸಗಿ	ಖುಷ್ಕಿ	771	0.0771
7	19/2	ಖಾಸಗಿ	ಖುಷ್ಕಿ	1,668	0.1668
8	5/3	ಖಾಸಗಿ	ಖುಷ್ಕಿ	83	0.0083
9	5/4	ಖಾಸಗಿ	ಖುಷ್ಕಿ	1,500	0.1500
10	6/2	ಖಾಸಗಿ	ಖುಷ್ಕಿ	9	0.0009
11	6/3	ಖಾಸಗಿ	ಖುಷ್ಕಿ	2,202	0.2202
12	7/3	ಖಾಸಗಿ	ಖುಷ್ಕಿ	699	0.0699
13	9/1	ಖಾಸಗಿ	ಖುಷ್ಕಿ	543	0.0543
ಗ್ರಾಮ : ತಿಂಡ್ಲು					
1	12/1	ಖಾಸಗಿ	ಖುಷ್ಕಿ	423	0.0423
2	12/2	ಖಾಸಗಿ	ಖುಷ್ಕಿ	141	0.0141
3	13/1	ಖಾಸಗಿ	ಖುಷ್ಕಿ	216	0.0216
4	15/2	ಖಾಸಗಿ	ಖುಷ್ಕಿ	838	0.0838
5	16/1	ಖಾಸಗಿ	ಖುಷ್ಕಿ	877	0.0877
6	16/2	ಖಾಸಗಿ	ಖುಷ್ಕಿ	396	0.0396
7	17	ಖಾಸಗಿ	ಖುಷ್ಕಿ	661	0.0661
8	21/1ಎ1	ಖಾಸಗಿ	ಖುಷ್ಕಿ	74	0.0074
9	21/1ಎ2	ಖಾಸಗಿ	ಖುಷ್ಕಿ	278	0.0278
10	21/1ಬಿ	ಖಾಸಗಿ	ಖುಷ್ಕಿ	100	0.0100
11	21/2ಎ	ಖಾಸಗಿ	ಖುಷ್ಕಿ	100	0.0100
12	21/2ಬಿ	ಖಾಸಗಿ	ಖುಷ್ಕಿ	35	0.0035
13	21/5	ಖಾಸಗಿ	ಖುಷ್ಕಿ	278	0.0278
14	23/3	ಖಾಸಗಿ	ಖುಷ್ಕಿ	445	0.0445
15	29/1	ಖಾಸಗಿ	ಖುಷ್ಕಿ	83	0.0083
16	29/2	ಖಾಸಗಿ	ಖುಷ್ಕಿ	165	0.0165
17	34/1	ಖಾಸಗಿ	ಖುಷ್ಕಿ	24	0.0024
18	34/2	ಖಾಸಗಿ	ಖುಷ್ಕಿ	23	0.0023
19	36	ಖಾಸಗಿ	ಖುಷ್ಕಿ	70	0.0070
20	87	ಖಾಸಗಿ	ಖುಷ್ಕಿ	616	0.0616
ಗ್ರಾಮ : ವಗಟ					
1	119	ಖಾಸಗಿ	ಖುಷ್ಕಿ	127	0.0127
2	123/1	ಖಾಸಗಿ	ಖುಷ್ಕಿ	7,540	0.7540
3	123/2	ಖಾಸಗಿ	ಖುಷ್ಕಿ	3,401	0.3401
4	124/2	ಖಾಸಗಿ	ಖುಷ್ಕಿ	683	0.0683
5	124/4	ಖಾಸಗಿ	ಖುಷ್ಕಿ	259	0.0259
6	124/6	ಖಾಸಗಿ	ಖುಷ್ಕಿ	708	0.0708
7	124/7	ಖಾಸಗಿ	ಖುಷ್ಕಿ	554	0.0554
8	125/1	ಖಾಸಗಿ	ಖುಷ್ಕಿ	641	0.0641
9	125/2	ಖಾಸಗಿ	ಖುಷ್ಕಿ	1,202	0.1202
10	126/1	ಖಾಸಗಿ	ಖುಷ್ಕಿ	408	0.0408
11	7/4	ಖಾಸಗಿ	ಖುಷ್ಕಿ	101	0.0101
12	7/5	ಖಾಸಗಿ	ಖುಷ್ಕಿ	709	0.0709
13	7/6	ಖಾಸಗಿ	ಖುಷ್ಕಿ	161	0.0161
14	9/1	ಖಾಸಗಿ	ಖುಷ್ಕಿ	1,862	0.1862
15	9/2	ಖಾಸಗಿ	ಖುಷ್ಕಿ	40	0.0040
			ಒಟ್ಟು	**103,825**	**10.3825**

(F. No. NHAI/35012/1/PIU-BNG/LA/NH-207/2018-19/3A)
ರಾಜೇಶ್ ಗುಪ್ತ, ನಿರ್ದೇಶಕರು

ಸಿಆರ್‌ಪಿಎಫ್ ಮಾಂಟೆಸ್ಸರಿ ಸ್ಕೂಲ್

ಜಿಸಿ ಸಿಆರ್‌ಪಿಎಫ್, ಯಲಹಂಕ, ಬೆಂಗಳೂರು–560064. ಫೋನ್: 080–28567730

ನೇರ ಸಂದರ್ಶನ

ಹುದ್ದೆಯ ಹೆಸರು	ವೇತನ	ಖಾಲಿ ಹುದ್ದೆಗಳ ಸಂಖ್ಯೆ	ನೇರ ಸಂದರ್ಶನ ದಿನಾಂಕ	ಶಿಕ್ಷಕ ಹುದ್ದೆಯ ಅರ್ಹತಾ ಷರತ್ತುಗಳು
ಮುಖ್ಯ ಶಿಕ್ಷಕಿ	ಮಾಸಿಕ ರೂ. 13,000/–	01	01/05/2021 ರಂದು 0830 ಗಂಟೆಗೆ	1. ಪ್ರಥಮ ಆದ್ಯತೆ: ಮಾನ್ಯತೆ ಪಡೆದ ಒಂದು ತರಬೇತಿ ಸಂಸ್ಥೆಯಿಂದ ನರ್ಸರಿ ಡಿಪ್ಲೋಮ ತರಬೇತಿ ಪಡೆದಿರುವ ಮತ್ತು ಮೆಟ್ರಿಕ್ಯುಲೇಟ್ ಹಾಗೂ ಮೇಲ್ಪಟ್ಟ ವಿದ್ಯಾರ್ಹತೆ ಹೊಂದಿರುವ ನರ್ಸರಿ ತರಬೇತಿ ಪಡೆದಿರುವ ಶಿಕ್ಷಕಿಯರಿಗೆ ಮೊದಲ ಆದ್ಯತೆ.
ಶಿಕ್ಷಕಿ	ಮಾಸಿಕ ರೂ. 11,000/–	08		2. ದ್ವಿತೀಯ ಆದ್ಯತೆ: ಜೆಬಿಟಿ / ತರಬೇತಿ ಪಡೆದಿರುವ ಪದವಿಧರರು / ತರಬೇತಿ ಪಡೆದಿರುವ ಸ್ನಾತಕ ಪದವಿಧರರು
ನಾನಿ	ಮಾಸಿಕ ರೂ. 7000/–	05		....

ಇದಕ್ಕೆ ಸಂಬಂಧಿಸಿದಂತೆ ನಿಮ್ಮ ಅಮೂಲ್ಯ ಸಹಕಾರ ನಿರೀಕ್ಷಿಸಲಾಗುತ್ತದೆ.

ಸಹಿ/– ಕಾರ್ಯದರ್ಶಿ, ಮಾಂಟೆಸ್ಸರಿ ಸ್ಕೂಲ್

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಕಾನೀನಿನಿ.,
ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು, ಹಾಸನ ಜಿಲ್ಲೆ

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 01/2021–22/ ದಿನಾಂಕ :07.04.2021

ಎಗ್ಸಿಕ್ಯುಟಿವ್ ಇಂಜಿನಿಯರ್ ರವರ ಕಚೇರಿ, ಕಾವೇರಿ ನೀರಾವರಿ ನಿಗಮ(ನಿ) ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ರವರು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ (ನಿ.,) ಬೆಂಗಳೂರು ರವರ ಪರವಾಗಿ ಸಾರ್ವಜನಿಕ ಖರೀದಿಯಲ್ಲಿನ ಕರ್ನಾಟಕ ಪಾರದರ್ಶಕ ಕಾಯ್ದೆ 1999 ಮತ್ತು 2000ರ 28-C of KTPP Act & K/C-4 ಪ್ರಕಾರ, The contractor should be Registered firm/ company/ Individual with PWD Class-I & Enrolled in Class-I of CNNL.. ದರ್ಜೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ **Lumpsum Basis Quality and Cost Based Selection (QCBS)** ಎರಡು ಲಕೋಟೆ ಟೆಂಡರ್‌ನ್ನು (ಕರ್ನಾಟಕದ ಇ–ಪೋರ್ಟಲ್ ಮೂಲಕ ಮಾತ್ರ) ಆಹ್ವಾನಿಸಲಾಗಿದೆ. ಕಾಮಗಾರಿ ವಿವರ:– **"Consultancy Services for Detailed reconnaissance survey, investigation and collection of water sample investigations and preparation of required drawing and report for the 15 identified tanks in the Cauvery basin."**. (1)ಟೆಂಡಿರಿಗಿಟ್ಟ ಮೊತ್ತ, ರೂ 41.25 ಲಕ್ಷಗಳು, EMD declaration shall be submitted in prescribed format, as uploaded in tender wizard, Stipulated period for completion is 3 Months or till the date of completion of entire project. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ನಿಯಮಾನುಸಾರ, ಟೆಂಡರ್ ಡಾಕ್ಯುಮೆಂಟ್‌ಗಳನ್ನು ವೆಬ್ ಸೈಟ್ https://eproc.karnataka.gov.in ಮೂಲಕ ದಿನಾಂಕ: **09–04–2021 ರಿಂದ 23–04–2021**ರ ವರೆಗೆ ಪಡೆಯಬಹುದು(Down load), **ಪ್ರೀ ಬಿಡ್ ಮೀಟಿಂಗ್ ನಡೆಯುವ ದಿನಾಂಕ:19.04.2021, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 26.04.2021, 5.00 ಗಂಟೆಯ** ನಂತರ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಗೊಂಡ ನಂತರ ತೆರೆಯಲಾಗುವುದು, ಮೇಲಿನ ವಿವರಗಳು ಭವಿಷ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರ ಹಾಗೂ ನಿಬಂಧನೆಗಳಿಗೆ https:// eproc.karnataka.gov.in' ಅಂತರ್ಜಾಲ ತಾಣದಲ್ಲಿ (ಇಲಾಖೆ) ಅಥವಾ ಹೇಮಾವತಿ ಅಣೆಕಟ್ಟು ವಿಭಾಗ, ಗೊರೂರು ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ (ರಜಾದಿನ ಹೊರತುಪಡಿಸಿ) ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ಅಣೆಕಟ್ಟು ವಿಭಾಗ, ಕಾನೀನಿನಿ, ಗೊರೂರು

ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಬಾಗಲಕೋಟ

ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–1,2&3/ಟೆಂಡರ್/2020–21/89 ದಿನಾಂಕ: 09–04–2021

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: ಬಾಗಲಕೋಟೆ ಜಿಲ್ಲೆ: (1) Indent No-32002 (SORAGON)-APT-58.55 call-2 (2) Indent No-32454 (HANAGANDI) - APT-161.17 call-3 (3) Indent No-32458(YALLATTI) -APT-91.06 call-2 (4) Indent No-30556(CHINCHALKATTI) -APT-21.97 call-2 (5) Indent No-29103(TIMMASAGAR) -APT-52.95 call-3 (6) Indent No-31090(INJINWARI) -APT-25.80 call-2

(2) ಲೆಕ್ಕ ಶಿರ್ಷಿಕೆ: ಜಲ ಜೀವನ ಮೀಷನ್–2020–21 (3) ಗುತ್ತಿಗೆದಾರರ ಅರ್ಹತೆ: **3ನೇ ದರ್ಜೆ ಹಾಗೂ ಮೇಲ್ಪಟ್ಟ** (4) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್ ಡಿ ಮೊತ್ತ **ಇ–ಪ್ರೋಕ್ಯೂರಮೆಂಟ್ ಪ್ರಕಾರ** (5) ಟೆಂಡರ್ ಪಾರಂ ಸಲ್ಲಿಸುವ ಅಂತಿಮ ದಿನಾಂಕ: **15–04–2021 ಸಾಯಂಕಾಲ 5.30 ಗಂಟೆಯ ವರೆಗೆ** (6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17–04–2021 ಮಧ್ಯಾಹ್ನ 11.00 ಗಂಟೆಯ ನಂತರ** (7) ಆರ್ಥಿಕ ಬಿಡ್ ತೆರೆಯುವ ದಿನಾಂಕ: **19–04–2021 11.00 ಗಂಟೆಯ ನಂತರ** (8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ **ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ** (9) ಪ್ರೀ–ಬಿಡ್ ದಿನಾಂಕ: **12–04–2021.**

ಟಿಪ್ಪಣಿ:– (1) ಟೆಂಡರ ಮೊತ್ತಕ್ಕಿಂತ ಕಡಿಮೆ ದರವನ್ನು ನಮೂದಿಸಿದಲ್ಲಿ ಒಟ್ಟು ವ್ಯತ್ಯಾಸ ಮೊತ್ತದ DD/FDR ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ಇವರ ಹೆಸರಿನಲ್ಲಿ ಪಡೆದು ಸ್ಕ್ಯಾನ್ ಮಾಡಿ ಆನ್‌ಲೈನ್ ಮುಖಾಂತರ ಜೊತೆಗೆ ಅಪ್‌ಲೋಡ್ ಮಾಡಬೇಕು. ಟೆಂಡರ ಅನುಮೋದನೆಗಿಂತ ಮುಂಚಿತವಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಟೆಂಡರನ್ನು ಪರಿಗಣಿಸಲಾಗುವುದಿಲ್ಲ. (2) ಗುತ್ತಿಗೆ ಮೊತ್ತಕ್ಕೆ 12% GST ಯನ್ನು ಸೇರಿಸಿ ಕೆಲಸದ ಆದೇಶ ನೀಡಲಾಗುವುದು.

ರುಜು/–
ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ

ವಾಸಾಸಂಇ/ಬಾಗಲಕೋಟೆ/ಶಿರಡಿ ಸಾಯಿ/19/2021–22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಎಫ್‌ಐಎಚ್ ಪ್ರೊ ಲೀಗ್ ಟೂರ್ನಿ: ಮಿಂಚಿದ ಹರ್ಮನ್‌ಪ್ರೀತ್ ಸಿಂಗ್, ಲಲಿತ್

ಹಾಕಿ: ಭಾರತಕ್ಕೆ ಮತ್ತೊಂದು ಜಯ

ಬ್ಯೂನಸ್ ಐರಿಸ್ (ಪಿಟಿಐ): ಭರ್ಜರಿ ಆಟವಾಡಿದ ಭಾರತ ಹಾಕಿ ತಂಡವು ಎರಡನೇ ಪಂದ್ಯದಲ್ಲಿಯೂ ಅರ್ಜೆಂಟೀನಾ ತಂಡವನ್ನು ಮಣಿಸಿತು. ಭಾನುವಾರ ರಾತ್ರಿ ನಡೆದ ಹಣಾಹಣಿಯಲ್ಲಿ ಮನ್‌ಪ್ರೀತ್ ಸಿಂಗ್ ನಾಯಕತ್ವದ ಪಡೆ 3–0 ಗೋಲುಗಳಿಂದ ಒಲಿಂಪಿಕ್ಸ್ ಚಾಂಪಿಯನ್ ತಂಡಕ್ಕೆ ಸೋಲುಣಿಸಿತು.

ಹರ್ಮನ್‌ಪ್ರೀತ್ ಸಿಂಗ್ (11ನೇ ನಿಮಿಷ), ಲಲಿತ್ ಉಪಾಧ್ಯಾಯ (25ನೇ ನಿಮಿಷ) ಹಾಗೂ ಮನದೀಪ್ ಸಿಂಗ್ (58ನೇ ನಿಮಿಷ) ಭಾರತದ ಪರ ಕೈಚಳಕ ತೋರಿದರು. ಶನಿವಾರ ನಡೆದ ಮೊದಲ ಪಂದ್ಯದಲ್ಲಿಯೂ ಪ್ರವಾಸಿ ಬಳಗ ಪಾರಮ್ಯ ಮೆರೆದಿತ್ತು. ಶೂಟೌಟ್‌ನಲ್ಲಿ ಗೆದ್ದು ಬೋನಸ್ ಪಾಯಿಂಟ್ ಗಳಿಸಿತ್ತು.



ಭಾರತದ ಗೋಲ್‌ಕೀಪರ್ ಕೃಷ್ಣ ಬಹಾದ್ದೂರ್ ಪಾಠಕ್– ಟ್ವಿಟರ್ ಚಿತ್ರ

ಭಾರತ ಎಫ್‌ಐಎಚ್ ಹಾಕಿ ಲೀಗ್ ಪಾಯಿಂಟ್ಸ್ ಪಟ್ಟಿಯಲ್ಲಿ ಸದ್ಯ ಐದನೇ ಸ್ಥಾನದಲ್ಲಿದೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತ 'ಎ' ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಅರ್ಜೆಂಟೀನಾ ಹಾಗೂ ಆಸ್ಟ್ರೇಲಿಯಾ ತಂಡಗಳೊಂದಿಗೆ ಸೆಣಸಲಿದೆ. ಸ್ಪೇನ್, ನ್ಯೂಜಿಲೆಂಡ್ ಹಾಗೂ ಆತಿಥೇಯ ಜಪಾನ್ ಕೂಡ ಇದೇ ಗುಂಪಿನಲ್ಲಿವೆ.

ಈ ಪಂದ್ಯದಲ್ಲಿ ಎದುರಾಳಿ ತಂಡದ ಎರಡು ಗೋಲುಗಳನ್ನು ತಡೆದ ಗೋಲ್‌ಕೀಪರ್ ಕೃಷ್ಣ ಪಾಠಕ್ ಅವರು ಪಂದ್ಯಶ್ರೇಷ್ಠ ಆಟಗಾರ ಎನಿಸಿಕೊಂಡರು. ಅಲ್ಲದೆ ಇದು ಅವರ 50ನೇ ಅಂತರರಾಷ್ಟ್ರೀಯ ಪಂದ್ಯವಾಗಿತ್ತು.

ಮನ್‌ಪ್ರೀತ್ ಪಡೆಯು ಮೇ 8 ಹಾಗೂ 9ರಂದು ನಡೆಯಲಿರುವ ಎರಡು ಪಂದ್ಯಗಳ ಸರಣಿಗಾಗಿ ಗ್ರೇಟ್ ಬ್ರಿಟನ್‌ಗೆ ಪ್ರಯಾಣ ಬೆಳೆಸಲಿದೆ.

ಫುಟ್‌ಬಾಲ್: ಪರಿಕ್ರಮಕ್ಕೆ ಗೆಲುವು

ಬೆಂಗಳೂರು: ಪ್ರವೀಣ್ ಕುಮಾರ್ (12, 34ನೇ ನಿಮಿಷ) ಗಳಿಸಿದ ಎರಡು ಗೋಲುಗಳ ನೆರವಿನಿಂದ ಪರಿಕ್ರಮ ಎಫ್‌ಸಿ ತಂಡವು ಭರ್ಜರಿ ಜಯ ಸಾಧಿಸಿತು. ಬಿಡಿಎಫ್‌ಎ ಎ ಡಿಷನ್ ಫುಟ್‌ಬಾಲ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ ಪೋಸ್ಟಲ್ ಡಿಪಾರ್ಟ್‌ಮೆಂಟ್ ತಂಡವನ್ನು 4–1ರಿಂದ ಮಣಿಸಿತು.

ವಿಜೇತ ತಂಡದ ಭಾನು ಪ್ರಕಾಶ್ (36ನೇ ನಿ.) ಹಾಗೂ ಸುನಿಲ್ (71ನೇ ನಿ.) ತಲಾ ಒಂದು ಗೋಲು ಹೊಡೆದರು. 60ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿ ಅವಕಾಶದಲ್ಲಿ ಅವಿನಾಶ್ ಅವರು ಪೋಸ್ಟಲ್ ಪರ ಗೋಲು ಹೊಡೆದರು.

ಎಜಿಒಆರ್‌ಸಿ ಎಫ್‌ಸಿ– ಬೆಂಗಳೂರು ಗನ್ನರ್ಸ್ ನಡುವಣ ಮತ್ತೊಂದು ಹಣಾಹಣಿ ಗೋಲುರಹಿತ ಡ್ರಾದಲ್ಲಿ ಅಂತ್ಯವಾಯಿತು.

ಮಂಗಳವಾರ ನಡೆಯುವ ಪಂದ್ಯಗಳಲ್ಲಿ ಆರ್‌ಡಬ್ಲ್ಯುಎಫ್ ಎಫ್‌ಸಿ– ಸಿಐಎಲ್ ಎಫ್‌ಸಿ ಹಾಗೂ ಬಿಟಿಎಂ ಎಫ್‌ಸಿ– ಬಿಯುಎಫ್‌ಸಿ ಸೆಣಸಲಿವೆ.

ವೊಲ್ವೊ ಕಾರ್ ಓಪನ್: ಪ್ರಶಸ್ತಿ ಗೆದ್ದ ವೆರೋನಿಕಾ

ಚಾರ್ಲ್‌ಸ್ಟನ್ (ಎಪಿ): ಅಮೋಘ ಆಟವಾಡಿದ ರಷ್ಯಾದ ವೆರೋನಿಕಾ ಕುದರ್ಮೆತೊವಾ, ವೊಲ್ವೊ ಕಾರ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡರು. ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ ಅವರು 6–4, 6–2ರಿಂದ ಮೊಂಟೆನೆಗ್ರೊದ ಡಂಕಾ ಕೊವಿನಿಚ್ ಅವರನ್ನು ಪರಾಭವಗೊಳಿಸಿದರು.

ವೆರೋನಿಕಾ ಅವರಿಗೆ ಇದು ಮೊದಲ ಡಬ್ಲ್ಯುಟಿಎ ಪ್ರಶಸ್ತಿ. ಟೂರ್ನಿಯ ಆರು ಪಂದ್ಯಗಳಲ್ಲಿ ಅವರು ಒಂದೂ ಸೆಟ್ ಕೈಚೆಲ್ಲದೆ ಪ್ರಶಸ್ತಿಗೆ ಮುತ್ತಿಟ್ಟರು. 2012ರಲ್ಲಿ ಅಮೆರಿಕದ ಸೆರೆನಾ ವಿಲಿಯಮ್ಸ್ ಈ ಸಾಧನೆ ಮಾಡಿದ್ದರು.



ಟ್ರೋಫಿಯೊಂದಿಗೆ ವೆರೋನಿಕಾ ಕುದರ್ಮೆತೊವಾ–ಎಎಫ್‌ಪಿ ಚಿತ್ರ

ಕೊರೊನಾ ವೈರಾಣುವಿನ ಹಾವಳಿಯ ಹಿನ್ನೆಲೆಯಲ್ಲಿ ಕ್ರೀಡಾಂಗಣಕ್ಕೆ ಪ್ರೇಕ್ಷಕರ ಪ್ರವೇಶ ಇರಲಿಲ್ಲ.

'ಆನ್‌ಲೈನ್ ಅವಹೇಳನ'ಕ್ಕೆ ಸ್ಟುವರ್ಟ್ ಬ್ರಾಡ್ ಆಕ್ರೋಶ

ಬೆಂಗಳೂರು (ರಾಯಿಟರ್ಸ್): ಆನ್‌ಲೈನ್ ಮೂಲಕ ಅವಹೇಳನ ಮಾಡುವ ಪ್ರವೃತ್ತಿ ಮುಂದುವರಿದರೆ ಸಾಮಾಜಿಕ ಜಾಲತಾಣಗಳನ್ನು ಬಹಿಷ್ಕರಿಸುವ ಕುರಿತು ಒಗ್ಗಟ್ಟಿನ ನಿರ್ಧಾರ ಕೈಗೊಳ್ಳಬೇಕಾದೀತು ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ವೇಗದ ಬೌಲರ್ ಸ್ಟುವರ್ಟ್ ಬ್ರಾಡ್ ಎಚ್ಚರಿಕೆ ನೀಡಿದ್ದಾರೆ.

ಇಂಗ್ಲೆಂಡ್‌ನ ವೇಗದ ಬೌಲರ್ ಜೊಫ್ರಾ ಆರ್ಚರ್ ಮತ್ತು ಆಲ್‌ರೌಂಡರ್ ಮೋಯಿನ್ ಅಲಿ ಅವರನ್ನು ಗುರಿಯಾಗಿಸಿ ಸಾಮಾಜಿಕ ತಾಣಗಳಲ್ಲಿ ಸಂದೇಶಗಳನ್ನು ಪೋಸ್ಟ್ ಮಾಡಲಾಗಿತ್ತು. ಇದು ನೋವುಂಟುಮಾಡಿದೆ. ಆದ್ದರಿಂದ ಎಲ್ಲರೂ ಬಯಸಿದರೆ ಸಾಮಾಜಿಕ ತಾಣಗಳಿಂದ ದೂರ ಉಳಿಯಬಹುದು ಎಂದಿದ್ದಾರೆ ಬ್ರಾಡ್.

'ಜಾಲತಾಣಗಳಿಂದ ಸಾಕಷ್ಟು ಒಳಿತು ಇದೆ. ಆದರೆ ಮಿತಿಮೀರಿದಾಗ ಸಮಸ್ಯೆ ಉಂಟಾಗುತ್ತದೆ. ಇಂಥ ಅತಿರೇಕಗಳ ವಿರುದ್ಧ ಹೋರಾಡಲು ನಾನು ಸಿದ್ಧ' ಎಂದು ಬ್ರಾಡ್ ಹೇಳಿದ್ದಾರೆ.